ದುಡಿವ ಜನರ ಪ್ರಾಣ ಮಿತ್ರ

# ಐಕ್ಯರಂಗ


ಸಂಪುಟ 25 ಸಂಚಿಕೆ 2 ಜನವರಿ 11, 2004 ಬೆಲೆ ರೂ. 3.00




## ವಿಶ್ವ ಸಾಮಾಜಿಕ ವೇದಿಕೆ ಮತ್ತು ಜಾಗತೀಕರಣಕ್ಕೆ ಪ್ರತಿರೋಧ



## 2004 ಚುನಾವಣೆ ಬಿಜೆಪಿಗೆ ಲಾಭವಾದೀತೆ?



## ಬರದ ತಂಡಗಳು ಬಂದವೇಕೆ ?




## ಬೆಂಕಿ ಹಿಡಿದ ಬಿಜೆಪಿ ಕಿತ್ತಾಡುತ್ತಿರುವ ಕಾಂಗ್ರೆಸ್



## ಆರ್‌ಎಸ್‌ಎಸ್ ಮತ್ತು ಸರ್ದಾರ್ ಪಟೇಲ್






**'ಬರ್ಕ್‌ವೈಟ್ ಕಂಡ ಭಾರತ' ಇದು ಮಾರ್ಗರೆಟ್ ಬರ್ಕ್‌ವೈಟ್ ಎಂಬ ಪತ್ರಕರ್ತೆ ಅಮೆರಿಕದ ಪ್ರಸಿದ್ಧ ಮಾಸ ಪತ್ರಿಕೆ 'ಲೈಫ್' ಗೆ ಛಾಯಾಚಿತ್ರ ಪತ್ರಕರ್ತೆ. 1946 ಹಾಗೂ 48 ರ ನಡುವೆ ಭಾರತ ಸ್ವಾತಂತ್ರ್ಯ ಪಡೆಯುತ್ತಿದ್ದ, ಭಾರತ-ಪಾಕಿಸ್ತಾನಗಳ ವಿಭಜನೆಯಾಗುತ್ತಿದ್ದ ಸಂದರ್ಭದಲ್ಲಿ ಭಾರತದಾದ್ಯಂತ ಪ್ರವಾಸ ಮಾಡಿದ ಲೇಖಕಿ. ಅನೇಕ ಘಟನೆಗಳನ್ನು ಕಣ್ಣಾರೆ ಕಂಡು, ಕಂಡದ್ದನ್ನು ವಸ್ತುನಿಷ್ಠ ದೃಷ್ಟಿಯಿಂದ ವಿವರಿಸಿದ್ದಾರೆ. ಅವರ ಒಳನೋಟಗಳು ವಿಶಿಷ್ಟವಾಗಿವೆ. ಅಚ್ಚರಿ ಹುಟ್ಟಿಸುವಂತಿವೆ. ಕನ್ನಡದ ಪ್ರಸಿದ್ಧ ಸಾಹಿತಿ ಲಂಕೇಶ್‌ರವರು ಇದನ್ನು ಓದಿ, ಮೆಚ್ಚಿ ಕನ್ನಡಕ್ಕೆ ತರಬೇಕೆಂದು ಬಯಸಿ ಪ್ರಸಿದ್ಧ ಲೇಖಕಿ, ಜಾನಪದ ತಜ್ಞೆ ಡಾ. ಕೆ.ಆರ್.ಸಂಧ್ಯಾರೆಡ್ಡಿಯವರನ್ನು ಅನುವಾದಿಸಬೇಕೆಂದು ಕೇಳಿಕೊಂಡಿದ್ದರು. ಉತ್ತಮವಾಗಿ ಅನುವಾದಿಸಲ್ಪಟ್ಟ ಈ ಪುಸ್ತಕವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊರತಂದಿದೆ. ಎಲ್ಲಾ ಪ್ರಜಾಪ್ರಭುತ್ವ ಪ್ರೇಮಿಗಳೂ ಅವಶ್ಯವಾಗಿ ಓದಬೇಕಾದ ಪುಸ್ತಕ. ಭಾರತದ ವಿಭಜನೆಯ ಸಂದರ್ಭದಲ್ಲಿ ನಡೆದ ಕೋಮುದಂಗೆಗಳು, ಒಂದು ಕೋಟಿಗೂ ಹೆಚ್ಚು ಜನರ ವಲಸೆ, ಆ ಸಂದರ್ಭದ ಹೃದಯವಿದ್ರಾವಕ ಘಟನೆಗಳ ವಿವರಗಳು; ಈ ಕೋಮುದಂಗೆಗಳಲ್ಲಿ ಆರೆಸ್ಸೆಸ್, ಮುಸ್ಲಿಂಲೀಗ್‌ಗಳ ಪಾತ್ರ, ಆರೆಸ್ಸೆಸ್ ಜೊತೆಯಲ್ಲಿ ಸರ್ದಾರ್ ಪಟೇಲ್‌ರ ಒಡನಾಟ ಅಂದೇ ಸ್ಪಷ್ಟವಾಗಿ ಪ್ರಕಟವಾಗಿದ್ದ ಫ್ಯಾಸಿಸ್ಟ್ ಸ್ವರೂಪ; ಗಾಂಧೀಜಿಯವರ ಕೊನೆಯ ಉಪವಾಸ, ಅವರ ಕೊಲೆ; ಕೋಮುದಂಗೆಗಳ ಸಂದರ್ಭದಲ್ಲಿ ದೆಹಲಿಯ ಕಾರ್ಮಿಕರ, ಬಂಗಾಳದ ತೇಭಾಗ ಹೋರಾಟದ ಪಾತ್ರ ಇವುಗಳೆಲ್ಲದರ ಅಪೂರ್ವ ಚಿತ್ರಣ ಇಲ್ಲಿದೆ...**

# ಆರೆಸ್ಸೆಸ್ ಮತ್ತು ಪಟೇಲರು

ಗಾಂಧಿಯವರು ಅತ್ಯಂತ ನಿಧಾನವಾಗಿ ತಮ್ಮ ಕೊನೆಯ ಉಪಹಾರ ಮಾಡುತ್ತಿದ್ದಾಗ, ಅವರೊಂದಿಗೆ ಮಾತಾಡುತ್ತಿದ್ದ ಪಟೇಲರ ಹಸ್ತವಿನ್ಯಾಸಗಳ ತೀವ್ರತೆ ಹೆಚ್ಚುತ್ತಾ ಹೋಯಿತು. ಗಾಂಧಿಯವರ ಉಪವಾಸದ ನಿರ್ಧಾರ ಸರ್ಕಾರವನ್ನು ಎಂತಹ ಬಿಕ್ಕಟ್ಟಿಗೆ ಸಿಕ್ಕಿಸಿದೆ ಎಂಬ ಅಂಶವನ್ನು ಪಟೇಲರು ಗಾಂಧಿಯವರಿಗೆ ಮನವರಿಕೆ ಮಾಡಿಕೊಡಲು ಯತ್ನಿಸುತ್ತಿದ್ದಾರೆ ಎಂದು ಸ್ಪಷ್ಟವಾಗಿ ಊಹಿಸಬಹುದಿತ್ತು. ಅನೇಕ ಮುಸ್ಲಿಮರನ್ನು ನಂಬುವುದಕ್ಕಾಗುವುದಿಲ್ಲ ಎಂದು ಕೇವಲ ಒಂದು ವಾರದ ಹಿಂದೆ ಪಟೇಲರು ಹೇಳಿಕೆ ನೀಡಿದ್ದರು. ಲಕ್ನೋದಲ್ಲಿ ಭಾಷಣ ಮಾಡುತ್ತಾ ಅವರು ಆರ್‌ಎಸ್‌ಎಸ್ ವೆಂಬ ಮೊದಲ ಅಕ್ಷರಗಳಿಂದ ಗುರುತಿಸಲಾಗುವ ಕಟ್ಟಾ ಹಿಂದೂ ಯುವಕರ ಚಳುವಳಿಗೆ ಸಾರ್ವಜನಿಕವಾಗಿಯೇ ಉತ್ತೇಜನ ವ್ಯಕ್ತಪಡಿಸಿದ್ದರು.

★ ★ ★

ಈ ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಹೊಸದಾಗಿ ಸೇರಿಕೊಂಡಿದ್ದವರೆಲ್ಲ ಮುಖ್ಯವಾಗಿ ಆಫೀಸುಗಳ ಗುಮಾಸ್ತರು ಅಥವಾ ವ್ಯಾಪಾರಿ ಕುಟುಂಬಗಳಿಂದ ಬಂದ ಹುಡುಗರು. ದೈಹಿಕಬಲ, ಶಿಸ್ತನ್ನು ಬೆಳೆಸುವುದು ಈ ಸಂಘಟನೆಯ ಉದ್ದೇಶ ಎಂದು ಅವರು ಮೇಲೆ ಹೇಳಿಕೊಳ್ಳುತ್ತಿದ್ದರು. ಯಾವುದೇ ಖಾಲಿ ಜಾಗವಿರಲಿ ಅಲ್ಲಿ ಬೆಳಗಿನ ಹೊತ್ತು ಈ ಯುವಕರು ಗುಂಪು ಸೇರುತ್ತಿದ್ದರು. ಕವಾಯತು ಮಾಡುತ್ತಿದ್ದರು. ಭಾಗವಹಿಸಿದ ಪ್ರತಿಯೊಬ್ಬರಿಗೂ ಒಂದು ಲೋಟ ಹಾಲು ಸಿಗುತ್ತಿತ್ತು. ಇದು ಕಡಿಮೆ ಆದಾಯದ ಗುಂಪುಗಳಿಗೆ ಬಲವಾದ ಆಕರ್ಷಣೆಯಾಗಿತ್ತು. ಈ ಹಾಲಿನ ಖರ್ಚನ್ನು ಯಾರು ವಹಿಸಿಕೊಳ್ಳುತ್ತಾರೆ ಎಂಬುದು ಎಂದಿಗೂ ಬಹಿರಂಗವಾಗುತ್ತಿರಲಿಲ್ಲ. ಆದರೂ ಕೆಲವು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಹಾಗೂ ಕೆಲವು ಮಹಾರಾಜರುಗಳು ಇದಕ್ಕೆ ಅನುಕೂಲ ಒದಗಿಸುತ್ತಿದ್ದಾರೆ ಎಂಬ ಸುದ್ದಿ ಇತ್ತು. ತಮ್ಮದು ರಾಜಕೀಯ ಸಂಘಟನೆಯಲ್ಲ ಎಂದು ಆರ್‌ಎಸ್‌ಎಸ್ ಹೇಳುತ್ತಿತ್ತು. ಆದರೂ ಈ ತರುಣರು ಕುಡಿಯುತ್ತಿದ್ದ ಹಾಲಿನೊಂದಿಗೆ ಜನಾಂಗೀಯ ಪ್ರಜ್ಞೆಯನ್ನು ಜಾಗೃತಗೊಳಿಸುವ ತಿಳುವಳಿಕೆಯೂ ಸಾಕಷ್ಟು ಒಳಸೇರುತ್ತಿತ್ತು. ಅವರ ರಹಸ್ಯ ಸಾಹಿತ್ಯದ ಕೆಲವು ಭಾಗಗಳನ್ನು ಓದುವ ಅವಕಾಶ ನನಗೆ ಸಿಕ್ಕಿತ್ತು. ಹಿಂದೂ ಪಾರಮ್ಯದ ಬಗ್ಗೆ ಅದರಲ್ಲಿದ್ದ ಪ್ರತಿಯೊಂದು ಸಾಲೂ ಸಹ, ಜರ್ಮನಿಯಲ್ಲಿ 30 ರ ದಶಕದಲ್ಲಿ ತಲೆಎತ್ತಿದ ಜನಾಂಗೀಯವಾದವು. ತಮ್ಮದೇ ಶ್ರೇಷ್ಠ ಜನಾಂಗ, ಎಂದು ಹೇಗೆ ಅಲ್ಲಿನ ಜನರಿಗೆ ಬೋಧಿಸುತ್ತಿತ್ತೋ ಅದನ್ನೇ ನೆನಪಿಸುವಂತಿತ್ತು.

ಪ್ರಜಾಪ್ರಭುತ್ವದ ಧೋರಣೆಗಳು ಸರಿಯಾಗಿಲ್ಲ. ಮುಸ್ಲಿಮರನ್ನು ಹಿಂದೂ ರಾಷ್ಟ್ರದ ಸಂಪೂರ್ಣ ಅಧೀನದಲ್ಲಿರುವ ವಿದೇಶೀಯರು ಎಂದು ಪರಿಗಣಿಸಬೇಕು ಎಂಬ ಆರ್‌ಎಸ್‌ಎಸ್ ನಿಲುವು ನಂಬಿಕೆಗಳನ್ನು ನೋಡಿದಾಗ ಈ ಯುವ ಚಳುವಳಿಯು ಪಶ್ಚಿಮದ ಫ್ಯಾಸಿಸ್ಟ್ ಹಾಗೂ ಸರ್ವಾಧಿಕಾರಿ ಧೋರಣೆಯಂತೆಯೇ ಬೆಳೆಯುವ ಹಾಗೂ ಜ್ಯೂಗಳ ವಿರುದ್ಧ ನಾಜಿಗಳು ವರ್ತಿಸಿದಂತೆ ಇವರೂ ಕೂಡ ಅಲ್ಪಸಂಖ್ಯಾತರ ವಿರುದ್ಧ ವರ್ತಿಸುವ ಅಪಾಯ ಎದ್ದು ಕಾಣುತ್ತಿತ್ತು.

ಈ ಸಂಘಟನೆಯು, ಹಿಂದೂ ಮಹಾಸಭಾ ಎಂಬ ದೊಡ್ಡ ಸಂಘಟನೆಯೊಂದರ ಕವಲಾಗಿದ್ದು ಧಾರ್ಮಿಕ ಸಂಪ್ರದಾಯಗಳು ಹಾಗೂ ಜಾತೀಯ ಆಚಾರ ವಿಚಾರಗಳನ್ನು ಸಂರಕ್ಷಿಸಿಕೊಳ್ಳುವುದು ಮಹಾಸಭಾದ ಉದ್ದೇಶವಾಗಿತ್ತು. ಮತ್ತು 2000 ವರ್ಷಗಳ ಹಿಂದಿನ ಪರಿಶುದ್ಧ ಹಿಂದೂಧರ್ಮವನ್ನು ಪುನರ್ ಸ್ಥಾಪಿಸಬೇಕು ಎಂದು ಅದು ಪ್ರತಿಪಾದಿಸುತ್ತಿತ್ತು. ಧಾರ್ಮಿಕ ದೊಂಬಿಗಲಭೆಗಳು ನಡೆದಾಗ ಇದರದು ಮುಖ್ಯಪಾತ್ರ. ರಾಷ್ಟ್ರೀಯ ಜೀವನದಲ್ಲಿ ಮುಸ್ಲಿಮರಿಗೆ ಯಾವುದೇ ಸ್ಥಾನ ನೀಡುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಈ ಉಗ್ರಸಂಘಟನೆಗೆ ಕಾಂಗ್ರೆಸ್ಸಿನಲ್ಲಿ ಪ್ರಾತಿನಿಧ್ಯ ನೀಡಬೇಕು ಎಂದು ಪಟೇಲರು ಲಕ್ನೋದಲ್ಲಿ ಭಾಷಣ ಮಾಡುವಾಗ ಸೂಚಿಸಿದ್ದರಿಂದ ಎಲ್ಲೆಡೆಯೂ ಕೋಲಾಹಲ ಮೂಡಿತ್ತು. ಇದಕ್ಕೆ ಪ್ರತಿಯಾಗಿ ನೆಹರೂ ಅವರು ಪ್ರಜೆಗಳು ಯಾವ ಧರ್ಮಕ್ಕೆ ಸೇರಿದವರಾಗಲಿ ಎಲ್ಲರನ್ನೂ ಸಮಾನವಾಗಿ ಪರಿಗಣಿಸಬೇಕು ಎಂದು ಉಗ್ರವಾಗಿ ಪ್ರತಿಪಾದಿಸುತ್ತಿದ್ದರು. ಸ್ವತಃ ಉಚ್ಚವರ್ಗಕ್ಕೆ ಸೇರಿದ್ದ ನೆಹರೂ ಅಪ್ರತಿಮ ಧೈರ್ಯ ತೋರಿಸಿದ್ದರಿಂದ ಎಲ್ಲ ಧರ್ಮಗಳ ಜನರ ಗೌರವವನ್ನೂ ಸಂಪಾದಿಸಿದ್ದರು. ಅವರ ಧೈರ್ಯ ಯಾವ ರೀತಿಯದೆಂದರೆ ಒಂದು ಸಲ ಮುಸ್ಲಿಂ ಅಂಗಡಿಯನ್ನು ಲೂಟಿ ಮಾಡುತ್ತಿದ್ದ ಹಾಗೂ ಮುಸ್ಲಿಂ ವ್ಯಾಪಾರಿಗಳನ್ನು ಕೊಲೆ ಮಾಡುತ್ತಿದ್ದ ಹಿಂದೂಗಳನ್ನು ನೋಡಿದ ಅವರು ಕೂಡಲೇ ಕಾರಿನಿಂದಿಳಿದು ಹಿಂದೂಗಳನ್ನು ಬರಿಗೈನಿಂದಲೇ ಹೊಡೆದಿದ್ದರು.

> **ರಾಷ್ಟ್ರೀಯ ಜೀವನದಲ್ಲಿ ಮುಸ್ಲಿಮರಿಗೆ ಯಾವುದೇ ಸ್ಥಾನ ನೀಡುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಆರ್‌ಎಸ್‌ಎಸ್‌ನಂತಹ ಉಗ್ರಸಂಘಟನೆಗೆ ಕಾಂಗ್ರೆಸ್ಸಿನಲ್ಲಿ ಪ್ರಾತಿನಿಧ್ಯ ನೀಡಬೇಕು ಎಂದು ಪಟೇಲರು ಲಕ್ನೋದಲ್ಲಿ ಭಾಷಣ ಮಾಡುವಾಗ ಸೂಚಿಸಿದ್ದರಿಂದ ಎಲ್ಲೆಡೆಯೂ ಕೋಲಾಹಲ ಮೂಡಿತ್ತು.**



★ ★ ★

ಪಟೇಲ್ ಮತ್ತು ಗಾಂಧೀಜಿಯ ನಡುವೆ ಈ ಅಲ್ಪಸಂಖ್ಯಾತ ಸಮಸ್ಯೆಯ ಬಗ್ಗೆ ಅದೇನು ವಾದವಿವಾದ ನಡೆದಿತ್ತೋ ಏನೋ ಆದರೆ ಬಣ್ಣಬಣ್ಣದ ಉಡುಪುಗಳಲ್ಲಿದ್ದ ಹೆಂಗಸರು ಗುಂಪುಗುಂಪಾಗಿ ಬಂದು ಪೋರ್ಟಿಕೋದಲ್ಲಿ ಸದ್ದಿಲ್ಲದೆ ಕುಳಿತಾಗ ಇದುವರೆಗಿನ ನಾಟಕೀಯ ಸನ್ನಿವೇಶಕ್ಕೆ ಮತ್ತಷ್ಟು ರಂಗು ಬಂದಂತಾಯಿತು. ಹೀಗೆ ಬಂದವರಲ್ಲಿ ಮುಸ್ಲಿಂ ಹೆಂಗಸರೇ ಹೆಚ್ಚಾಗಿದ್ದರು. ಕೊನೆಗೊಮ್ಮೆ ಸರ್ದಾರರು ತಾವು ಹೇಳಲಿದ್ದ ಮುಖ್ಯ ವಿಷಯಕ್ಕೆ ಬಂದಂತಿತ್ತು. ಅವರು ಆಕಾಶದತ್ತ ಬೆರಳು ಮಾಡಿ ಆಕಾಶವೇ ಕಳಚಿ ಬೀಳುವುದೇನೋ ಎಂದು ಸೂಚಿಸುತ್ತಿದ್ದಂತೆ ಕಂಡಿತು. ಅನಂತರ ಅವರು ಕುರ್ಚಿಯಿಂದೆದ್ದು ಥಟ್ಟನೆ ಹೊರಟುಹೋದರು.

ಈ ಮಧ್ಯೆ ಒಂದು ಸಂಜೆಯ ಸುಂದರ ಅನುಭವವನ್ನು ಮರೆಯಲಾರೆ. ಉಪವಾಸದ ಐದನೇ ದಿನ ಮುಗಿಯುತ್ತ ಬಂದಿತ್ತು. ಮೆರವಣಿಗೆಗಳ ಗಾತ್ರ ದಿನೇ ದಿನೇ ಬೆಳೆಯುತ್ತ ಬೃಹತ್ ಪ್ರಮಾಣ ತಲುಪಿತ್ತು. ಉರ್ದು ಪಾರ್ಕಿನಲ್ಲಿ ಭಾರೀ ಸಭೆ. ಕೆಂಪುಕೋಟೆಯಿಂದ ಜುಮ್ಮಾ ಮಸೀದಿಯವರೆಗಿನ ವಿಶಾಲ ಆವರಣದಲ್ಲಿ ಜನ ಕಿಕ್ಕಿರಿದು ಸೇರಿದ್ದರು. ಆ ಸಭೆಯಿಂದ ಸುಮಾರು ಐದುಸಾವಿರದಷ್ಟು ಸೈಕಲ್ ಸವಾರರು ಪ್ರಾರ್ಥನಾ ಸಭೆಗೆ ಬಂದರು. ಇವರ ಹಿಂದೆ ರೈಲ್ವೆ ಕಾರ್ಮಿಕರ ಸಂಘ, ಅಂಚೆ ಮತ್ತು ತಂತಿ ಇಲಾಖೆಯ ನೌಕರರು, ಸರ್ಕಾರಿ ಮುದ್ರಣಾಲಯದ ನೌಕರರ ಸಂಘ, ಮಿಲಿಟರಿ ಲೆಕ್ಕಿಗ ಗುಮಾಸ್ತರು ದೆಹಲಿಯ ವುಮೆನ್ಸ್ ಲೀಗ್‌ಗಳ ಮೆರವಣಿಗೆಗಳು ಒಂದರ ಹಿಂದೊಂದರಂತೆ ಬಂದವು. ಅದು ರೋಮಾಂಚನಕಾರಿಯಾದ ದೃಶ್ಯ. ಬಣ್ಣಬಣ್ಣದ ಬ್ಯಾನರ್‌ಗಳು, ಬಿರ್ಲಾ ಗೇಟಿನೊಳಗೆ ಪ್ರವೇಶಿಸಿದರು. ಹುಲ್ಲುಹಾಸಿನ ಮೇಲೆ, ಹೂಪಾತಿಗಳಲ್ಲಿ, ಅಮೃತಶಿಲೆ ಹಾಸಿದ ವಿಶಾಲ ತಾರಸಿಯ ಮೇಲೆ ಎಲ್ಲೆಲ್ಲೂ ಜನ. ಕತ್ತಲು ಆವರಿಸುತ್ತಿತ್ತು. ಆದರೂ ಬಿರ್ಲಾ ಭವನದ ದೊಡ್ಡ ದೊಡ್ಡ ಕಿಟಕಿಗಳಿಂದ ತೂರಿ ಬರುತ್ತಿದ್ದ ಬೆಳಕಲ್ಲಿ, ಆ ಜನ ಪ್ರವಾಹದಲ್ಲಿಯೂ ಕೆಲವರನ್ನು ಗುರುತಿಸಲು ಸಾಧ್ಯವಾಯಿತು. ಇನ್ನೂ ಮೆರವಣಿಗೆಗಳು ಬರುತ್ತಲೇ ಇದ್ದವು. ಧಾರ್ಮಿಕ ಒಗ್ಗಟ್ಟನ್ನು ಕಾಪಾಡುತ್ತೇವೆ. ಮಹಾತ್ಮರ ಜೀವಕ್ಕಾಗಿ ನಮ್ಮ ಜೀವವನ್ನು ಪಣಕೊಡುತ್ತೇವೆ ಎಂದು ಜನ ಕೂಗುತ್ತಲೇ ಇದ್ದರು.



★ ★ ★

ಬಹುದೀರ್ಘಕಾಲದಿಂದ ಬೆಳೆಸಿಕೊಂಡು ಬಂದ ಧಾರ್ಮಿಕ ವೈರತ್ವಗಳ ಇತಿಹಾಸ ಗಾಂಧಿಯವರ ಹತ್ಯೆಯ ಮೂಲಕ ತನ್ನ ಪರಾಕಾಷ್ಠ ಸ್ಥಿತಿ ಮುಟ್ಟಿತ್ತು. ವಿದೇಶೀಯರ ಒಡೆದು ಆಳುವ ನೀತಿ ಹಿಂದೂ ಮುಸ್ಲಿಮರು ಒಂದುಗೂಡದಂತೆ ಏನೇನೂ ಮಾಡಬೇಕೋ ಅವೆಲ್ಲವನ್ನೂ ಮಾಡಿತ್ತು. ಈ ಒಡಕಿನ ಲಾಭ ಪಡೆದವರು ಮುಸ್ಲಿಂ ಮೂಲಭೂತವಾದಿಗಳು. ಇದರಷ್ಟೇ ಮೂಲಭೂತವಾದಿಯಾಗಿದ್ದ ಹಿಂದೂಧರ್ಮ ಆರ್‌ಎಸ್‌ಎಸ್‌ನ್ನು ಹುಟ್ಟುಹಾಕಿ ಅವರಿಗೆ ಉತ್ತರ ಕೊಟ್ಟಿತ್ತು. ಗೋಡ್ಸೆಯ ವಿಚಾರಣೆ ನಡೆದಾಗ ಈ ಮತಾಂಧ ಯುವ ಚಳುವಳಿಗೆ ಪ್ರೋತ್ಸಾಹ ಕೊಟ್ಟಂತಹ ರಾಜ್ಯಗಳಲ್ಲಿಯೇ ಅದರ ಜಾಡು ಸಿಕ್ಕಿದ್ದು ಕೂಡ ಆಕಸ್ಮಿಕವೇನಲ್ಲ. ಈ ಜಾಡು ಗ್ವಾಲಿಯರ್‌ನಿಂದ ಆಳ್ವಾರ್‌ವರೆಗೆ ಹೋಗಿತ್ತು. **ಆಳ್ವಾರ್ ಮಹಾರಾಜ ತನ್ನ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಹತ್ತಿಕ್ಕುವುದಕ್ಕಾಗಿ ಮತೀಯ ಕಲಹವನ್ನು ಸಮರ್ಥವಾಗಿ ಬಳಸಿಕೊಂಡಿದ್ದ. ಆತನ ಅರಮನೆ ಆರ್‌ಎಸ್‌ಎಸ್ ನವರು ಸೇರುವ ಸ್ಥಳವಾಗಿತ್ತು.** ಗಾಂಧಿಯವರ ಹತ್ಯೆಯಲ್ಲಿ ಭಾಗಿಯಾದ ಸಂದೇಹದ ಮೇಲೆ ಬಂಧಿತರಾದವರಲ್ಲಿ ಈ ರಾಜನೂ ಒಬ್ಬನಾಗಿದ್ದ.

ಮುಂದಿನವಾರ
**ದೆಹಲಿ ಗಿರಣಿ ಕಾರ್ಮಿಕರು**

### ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಜನವರಿ 16 ರಿಂದ 21, 2004**
  ವಿಶ್ವ ಸಾಮಾಜಿಕ ವೇದಿಕೆ - 3ನೇ ಜಾಗತಿಕ ಸಮ್ಮೇಳನ, ಮುಂಬಯಿ
- **ಜನವರಿ 23,2003-2004**
  ಕರ್ನಾಟಕ ಪ್ರಾಂತರೈತ ಸಂಘದ ಆಶ್ರಯದಲ್ಲಿ 'ವಿದ್ಯುತ್ ಕಾಯ್ದೆ - 2003' ಕುರಿತು ರಾಜ್ಯಮಟ್ಟದ ಕಾರ್ಯಾಗಾರ
  ಸ್ಥಳ: ಎನ್.ಜಿ.ಓ.ಹಾಲ್, ಬೆಂಗಳೂರು
  ಸಮಯ : 10.00 ಗಂಟೆಗೆ

# ಬರದ ತಂಡಗಳು ಬಂದವೇಕೆ?

ಊರೂರಿಗೆ ಬರಗಾಲದ ಮಾರಿ ಹೊಕ್ಕು, ಜನರ ಜೀವನ ನೆಕ್ಕಿಹೋದ ಮೇಲೆ ಇನ್ನೇನಾದರೂ ಉಳಿದಿದೆಯಾ ಎಂದು ನೋಡಿಹೋಗಲು ಬಂದಂತಾಗುತ್ತಿದೆ ಕೇಂದ್ರದ ತಂಡದ ರಾಜ್ಯಭೇಟಿ. ಕೇಂದ್ರದ ತಂಡವು ಕರ್ನಾಟಕದಲ್ಲಿ ಈ ಜನವರಿ ಮೊದಲವಾರದಿಂದ ವಿಸ್ತೃತವಾಗಿ ಅನೇಕ ಜಿಲ್ಲೆಗಳಿಗೆ ಭೇಟಿ ಕೊಡಲಿದೆ. ಬರಗಾಲದ 'ಅಧ್ಯಯನ' ನಡೆಸಿ ಕೇಂದ್ರಕ್ಕೆ ವರದಿ ನೀಡಲಿದೆ. ಇದನ್ನು ಆಧರಿಸಿ, ರಾಜ್ಯಕ್ಕೆ ಕೇಂದ್ರ ಸರ್ಕಾರ ಪರಿಹಾರವನ್ನು ಹರಿಸಲಿದೆ. ಅಲ್ಲಿಯವರೆಗೂ ಜನ ಉಸಿರಿಡಿದು ಬದುಕಬೇಕು. ಆ ನಡುವೆ ಅವರೇ 'ಪರಿಹಾರ' ವಾಗಿ ಬಿಟ್ಟರೆ ಇನ್ನು ಈ ಪರಿಹಾರದ ಪ್ರಶ್ನೆಯೇ ಇಲ್ಲ.

ಈ ಕೆಲವೇ ತಿಂಗಳುಗಳ ಹಿಂದೆ ಕೇಂದ್ರ ಸರ್ಕಾರದ 'ಅಧ್ಯಯನ ತಂಡ'ವು ರಾಜ್ಯಕ್ಕೆ ಭೇಟಿ ನೀಡಿತ್ತು. ಹಿಂದೆಯೂ ಹಲವು ಬಾರಿ ಬಂದು ಬರಗಾಲ ಕಣ್ಣಿಗೆ ಕಟ್ಟುವಂತಿದೆ ಎಂದು ಹೇಳಿಯೂ ಹೋಗಿತ್ತು. ಇದನ್ನನುಸರಿಸಿ ಒಂದಿಷ್ಟು ಪರಿಹಾರ ನೀಡಿತ್ತು. ಇಷ್ಟೊಂದು ಅಧ್ಯಯನ-ಸಂಶೋಧನೆ ಬಳಿಕ ಕೊಡಬೇಕಾದ ಅತ್ಯಗತ್ಯ ಪರಿಹಾರ ನೀಡಬಾರದೇ? ಎಂದು ಸಹಜವಾಗಿ ಕೇಳಬಹುದು. ಆದರೆ ಅದು ನಿಜವಾಗಿಯೂ ಜನರಿಗೆ ಏನಾದರೂ ಸಹಾಯ ನೀಡಿ ಬದುಕಿಸುವ ಇಚ್ಛೆ ಇದ್ದರೆ ಮಾತ್ರ! ಇದು ಅವರಿಗೆ ಬೇಕಿಲ್ಲ.

ಕೇಂದ್ರದಿಂದ ಪರಿಹಾರದ ಪ್ರವಾಹವೇ ರಾಜ್ಯಕ್ಕೆ ಹರಿಸಲಾಗಿದೆಯಾದರೂ ಜನರಿಗೆ ರಾಜ್ಯ ಸರ್ಕಾರ ಕೊಟ್ಟಿಲ್ಲ ಎಂದು ದೂರು ಹೇಳುತ್ತಾ ಬಿಜೆಪಿ ನಾಯಕರು ತಿರುಗುವುದು ಕೇಂದ್ರದಿಂದ ಸರಿಯಾಗಿ ಪರಿಹಾರ ಸಿಗಲಿಲ್ಲವೆಂದು ಕಾಂಗ್ರೆಸ್ ನಾಯಕರು ದೂಷಿಸುವುದು. ಆದರೆ ಬಂದ ಬರ ಕಾಮಗಾರಿಯ ಹಣ, ಅಕ್ಕಿ ಜನರನ್ನು ತಲುಪುವ ಮೊದಲೇ ಮಂಗಮಾಯವಾದದ್ದು, ಹೀಗೆ ಕಾಲಹರಣ ಮಾಡಿದ್ದು ಎಲ್ಲರ ಮನದಲ್ಲಿ ಇದೆ.

## ತಂಡ ಕರೆಸಿಕೊಂಡವರು ಕಾಂಗ್ರೆಸ್‌ನವರು

ಹಾಗಾದರೆ ಈ ತಂಡ ಚುನಾವಣೆಗಳ ಆಗಮನದ ಬಿಸಿಯೆದುರು ದಿಢೀರನೆ ಬರುತ್ತಿರುವುದರ ಪ್ರೇರಣೆಯೇನು? ಈ ತಂಡವನ್ನು ಕಳಿಸಬೇಕೆಂದು ಆಹ್ವಾನಿಸಿದವರೇ ಕಾಂಗ್ರೆಸ್ ಸರ್ಕಾರ. ಕಳೆದ ತಿಂಗಳು ಕೃಷ್ಣರವರು ತಮ್ಮ ಸಂಪುಟದ ಸಹೋದ್ಯೋಗಿಗಳ ನಿಯೋಗವನ್ನು ದೆಹಲಿಗೆ ಕಳಿಸಿ ಇಂತಹ ಅಧ್ಯಯನ ತಂಡವನ್ನು ಕಳುಹಿಸಿಕೊಡಲು ಕೋರಿದ್ದರು. ಅದರಂತೆ ಈ ತಂಡ ಬರುತ್ತಿದೆ. ನಿಜವಾಗಿಯೂ ಜನ ಸಂಕಷ್ಟಕ್ಕೆ ನೆರವಾಗದೇ ಕೇವಲ ತಂಡಗಳ ಭೇಟಿಗಳ ಭ್ರಾಟಿಯಿಂ ನಡೆದಿರುವುದು ಕೇಂದ್ರದ ಬಿಜೆಪಿ- ರಾಜ್ಯದ ಕಾಂಗ್ರೆಸ್ ಸೇರಿಯೇ ಜನರನ್ನು ವಂಚಿಸಲು ಮುಂದಾಗಿವೆ. ಇಂತಹ ತಂಡಗಳು ಜಿಲ್ಲೆಗಳಿಗೆ ಬಂದಾಗ ಪ್ರತಿಭಟನೆ ಮೂಲಕ ಸ್ವಾಗತಿಸಬೇಕು. ಕೇವಲ ಭೇಟಿಯಲ್ಲಿ ಅಗತ್ಯವಾದ ನೆರವು ನೀಡಿ ಎಂದು ಆಗ್ರಹಿಸಬೇಕು. ವಂಚಕತನಕ್ಕೆ ಧಿಕ್ಕಾರ ಹೇಳಬೇಕು.

**ಈವಾರ ಕರ್ನಾಟಕ**
ಒಂದು ನೋಟ
ಎಸ್.ವೈ.ಗುರುಶಾಂತ್

# ಕುಡಿವ ನೀರಿನ ಸೇವೆಗೆ

ಕುಡಿವ ನೀರು ಕೊಡಿ, ನೀರು ಬಿಡಿ ಎಂದು ಈಗಾಗಲೇ ಕರ್ನಾಟಕದ ಅನೇಕ ಗ್ರಾಮಗಳಲ್ಲಿ, ಬೆಂಗಳೂರು ನಗರದ ಹಲವಾರು ಬಡಾವಣೆಗಳಲ್ಲಿ ಜನ ಕೇಳತೊಡಗಿದ್ದರೆ, ಕೆಲವೆಡೆ ಖಾಲಿ ಕೊಡಗಳ ಪ್ರದರ್ಶನವಾಗಿದೆ. 149 ತಾಲ್ಲೂಕುಗಳಲ್ಲಿ ಅಭಾವ ಎಂಬುದು ಸರ್ಕಾರದ್ದೇ ಸಮೀಕ್ಷೆ.

ಕುಡಿವ ನೀರು, ರಸ್ತೆ ಸುಧಾರಣೆಗೆಂದು 157 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಸರ್ಕಾರ ಅಂಗೀಕರಿಸಿದೆ. ಕುಡಿವ ನೀರಿಗೆ ಆದ್ಯತೆ ನೀಡಿ ತುರ್ತು ಗಮನ ಹರಿಸಲು ಕೃಷ್ಣ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸರ್ಕಾರ ಹೇಳುವಂತೆ ಕುಡಿವ ನೀರಿನ ಅಭಾವ ಕೇವಲ 7000 ಹಳ್ಳಿಗಳಿಗೇ ಸೀಮಿತವಲ್ಲ. ಇದು ವಾಸ್ತವ ಸ್ಥಿತಿಯ ಅರ್ಧದಷ್ಟಿದೆ ಎಂದು ಅಂದಾಜಿದೆ. ಸರ್ಕಾರವೇ ಗುರುತಿಸಿದಂತೆ ಸುಮಾರು 6000 ಹಳ್ಳಿಗಳಲ್ಲಿ ಕುಡಿವ ನೀರಿನಲ್ಲಿ ಫ್ಲೋರೋಸಿಸ್‌ನಂತಹ ಲವಣಾಂಶಭರಿತ ಹಾನಿಕಾರ... ನೀಡಿದೆ. ಹೀಗೆ ಕೇವಲ ಗುರುತಿಸಿದರಷ್ಟೇ ಸಾಲದು. ಶುದ್ಧನೀರು ಪೂರೈಸುವುದು ಸರ್ಕಾರದ - ಸಂಸ್ಥೆಗಳ ಹೊಣೆ. ನೀರಿನ ಬವಣೆಯ ಪ್ರಮಾಣಕ್ಕೆ ಹೋಲಿಸಿದರೆ ಸರ್ಕಾರ ನಿಗದಿಗೊಳಿಸಿದ ಹಣ - ಸಿದ್ಧತೆ ಏನೇನೂ ಸಾಲದು.

ವಿಚಿತ್ರವೆಂದರೆ ಸರ್ಕಾರ ಈಗ ಒದಗಿಸಲಿರುವ 157 ಕೋಟಿ ರೂ.ಗಳನ್ನು ವಾಣಿಜ್ಯ, ಉತ್ಪನ್ನ, ಸಾಗಣೆ ವಾಹನಗಳ ಮೇಲೆ ಸೆಸ್ ರೂಪದಲ್ಲಿ ಸಂಗ್ರಹಿಸಲಿದೆಯಂತೆ. ಅಂದರೆ ಈ ಹಣವೂ ಮತ್ತೆ ಗ್ರಾಹಕ ಜನಸಾಮಾನ್ಯರ ಮೇಲೆಯೇ ಹೇರಿದಂತಾಗುತ್ತದೆ. ಅನೇಕ ದೊಡ್ಡ ಕೈಗಾರಿಕೆಗಳ, ಉದ್ಯಮಿಗಳಿಗೆ ಸಾವಿರಾರು ಕೋಟಿ 'ದಾನ' ನೀಡುವ ಸರ್ಕಾರ ಜನಸಾಮಾನ್ಯರಿಂದ ಕಿತ್ತುಕೊಳ್ಳುವ ನೀತಿಯನ್ನೇ ಮುಂದುವರಿಸುತ್ತಿದೆ. ಜನಕಾಳಜಿಯು ಮಾತಿನಲ್ಲೂ ಕೃತಿಯಲ್ಲೂ ವಿಶ್ವಬ್ಯಾಂಕ್‌ನ ಜನವಿರೋಧಿ ಉಪದೇಶವನ್ನೇ ಕೃಷ್ಣ ಪಾಲಿಸುತ್ತಿದ್ದಾರೆ. ಸೇವೆಗೆ ಹಣ ನಿಗದಿಗೊಳಿಸುತ್ತಿದ್ದಾರೆ.

ಆದ್ದರಿಂದ ಸರ್ಕಾರ ಇನ್ನೂ ಅತ್ಯಧಿಕ ಮೊತ್ತವನ್ನು ನಿಗದಿಪಡಿಸಿ, ಜನರಿಗೆ ಹೊರೆಯಾಗದ ರೀತಿಯಲ್ಲಿ ಕುಡಿವ ನೀರು ಸರಬರಾಜಿಗೆ ಕ್ರಮವಹಿಸಬೇಕು. ಇಲ್ಲವಾದಲ್ಲಿ ಮೂರು ವರುಷಗಳು ಸತತ ಬರಗಾಲದ ನಡುವೆ ಬೆಂದ ಜನ ಹಾಹಾಕಾರ ಅನುಭವಿಸಬೇಕಾಗುತ್ತದೆ. ಅವರ ಬಿಸಿಯುಸಿರಿಗೆ ಸರ್ಕಾರ ಬೇಯಬೇಕಾಗುತ್ತದೆ.

# ಜನತಾದಳ ವಿಲೀನ



ವಿಲೀನದ 'ಪಂಚಸೂತ್ರ'ಗಳನ್ನು ಸಿದ್ಧಗೊಳಿಸುವಂತೆ ಜೆಡಿ(ಎಸ್)ನ ನಾಯಕ ದೇವೇಗೌಡರಿಗೂ, ಎಐಪಿಜೆಡಿಯ ನಾಯಕ ಎಸ್.ಆರ್.ಬೊಮ್ಮಾಯಿಯವರಿಗೆ ಹೊಣೆ ನೀಡಲಾಗಿದೆ. ಜನತಾದಳ ಬಣಗಳ ವಿಲೀನದ ಮಾತು ಮತ್ತೆ ಎದ್ದಿದೆ. ಅಖಿಲ ಭಾರತ ಜನತಾದಳದ ಒಳಗೆ ಬಸವರಾಜ ಹೊರಟ್ಟಿ ಮುಂತಾದವರ ಒಂದು ಗಣನೀಯ ಗುಂಪು ವಿಲೀನದ ಇಂತಹ ಒತ್ತಾಸೆಗಳಲ್ಲಿ ಈಗ ಕ್ರಿಯಾಶೀಲವಾಗಿದೆ. ಎಐಪಿಜೆಡಿಯ ಒಳಗಿನ ಒಂದು ಪ್ರಬಲ ಗುಂಪು ವಿಲೀನದತ್ತ ತೀವ್ರವಾಗಿ ಯತ್ನಿಸುತ್ತಿದೆ. ಇಂತಹ ಒತ್ತಡಗಳ ನಡುವೆ 'ವಿಲೀನ ವಿರೋಧಿ' ಎಂದೇ ಗುರುತಿಸ ಲಾಗುತ್ತಿರುವ ಎಐಪಿಜೆಡಿಯ ನಾಗೇಗೌಡರು ಒಂದು ಹಂತದಲ್ಲಿ ವಿಲೀನಕ್ರಿಯೆಯು ಸುಲಭವಾಗಲೆಂದು ಅಧ್ಯಕ್ಷತೆಗೆ ರಾಜೀನಾಮೆ ಪ್ರಕಟಿಸಿದ್ದು ಆಯ್ತು. ಹೀಗೆ ಸಾರಾಸಗಟು ವಿಲೀನವಾಗುವ ಸಾಧ್ಯಾಸಾಧ್ಯತೆಗಳು ಚರ್ಚೆಯಾದವು.

ಆದರೆ ಈ ನಡುವೆ ಒಂದು ಹೊಸ ಬೆಳವಣಿಗೆಯೂ ಆಗಿದೆ. ಅದೇ ಎಐಪಿಜೆಡಿಯ ಒಂದು ಬಣ ಜೆಡಿ(ಎಸ್)ನತ್ತ ಒಲವು ತೋರಿದ್ದರೆ ಇನ್ನೊಂದು ಬಣ 'ಮಸ್ಕಾ'ಧಾರಿತ ಜನತಾಪಾರ್ಟಿಯೊಂದಿಗೆ ವಿಲೀನಗೊಳ್ಳಲು ಸಿದ್ಧತೆ ನಡೆಸಿರುವುದು. ಇದರಲ್ಲಿ ಜೆಡಿ(ಎಸ್) ನೊಂದಿಗೆ ವಿಲೀನಕ್ಕೆ ತಾವು ಸಿದ್ಧರಿಲ್ಲ ಎಂದು ಹೇಳಿದ ಕೆಲವು ನಾಯಕರು... ಇದ್ದಾರೆ. ... ಆಗಲೇ 'ಜನತಾ' ಎಂಬ ... ಇನ್ನೊಂದು ಬಣ ವಿಲೀನ ವಿರೋಧಿಯಾಗಿ, ಪ್ರತ್ಯೇಕವಾಗಿ ಉಳಿದುಬಿಡುವ ಸಂಭವ ಇದೆ. ಇದು ಹೆಗಡೆ, ಕೃಷ್ಣಾ, ಅನಂತಕುಮಾರರ ತಂತ್ರವೂ ಹೌದು. ಈಗಾಗಲೇ ನಾಗೇಗೌಡರು ಪುಟ್ಟಣ್ಣಯ್ಯನವರ ರೈತ ಸಂಘದೊಂದಿಗೂ, ಬಳಿಕ ಇನ್ನೊಂದೆಡೆ ಪ್ರೊ. ನಂಜುಂಡಸ್ವಾಮಿಯವರ ರೈತ ಸಂಘ ಸೇರಿಸಿಕೊಂಡಿದ್ದಾರೆ. ಕರ್ನಾಟಕ ಪ್ರಗತಿರಂಗ ರಚಿಸಿಬಿಟ್ಟಿದ್ದಾರೆ. ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿರುವ ಪ್ರೊಫೆಸರನ್ನು ರಂಗದ ಪ್ರಣಾಳಿಕೆ ಬರೆಯಲು ಕೇಳಿದ್ದಾರೆ. ಅಂತೂ ಇನ್ನೂ ಕೆಲವು ದಿನಗಳಲ್ಲಿ ಪ್ರಬಲ ಗುಂಪು ಎಐಪಿಜೆಡಿ ತೊರೆದು ಜೆಡಿ(ಎಸ್)ನಲ್ಲಿ ವಿಲೀನ ಆಗಬಹುದು. ಕಾದು ನೋಡೋಣ. ಆದರೆ ಜನರ ಜೆಡಿ(ಎಸ್)ನಡುವೆ ಸ್ಪಷ್ಟ ಕಾರ್ಯಕ್ರಮಗಳಿಂದ ಚುರುಕಾಗಲಿ ಎಂಬುದು ಆಶಯ.

# ಬೆಳಗಾಂನಲ್ಲಿ ಕೋಮುವಾದಿಗಳ ಬೆಂಕಿ

ಕರ್ನಾಟಕದಲ್ಲಿ ಸೌಹಾರ್ದತೆ, ಶಾಂತಿಗೆ ಕೊಳ್ಳಿ ಇಡಲು ಹೊರಟಿರುವ. ಕೋಮುವಾದಿಗಳು ಈ ವಾರದಲ್ಲಿ ಬೆಳಗಾಂ ನಗರದ ಖಾದರವಾಡಿಯಲ್ಲಿ ಮತೀಯ ಘರ್ಷಣೆಯನ್ನು ಹುಟ್ಟುಹಾಕಿವೆ. ಪರಿಣಾಮ 10 ಜನ ಚೂರಿ ಇರಿತದಿಂದ ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿದ್ದಾರೆ. ಹತ್ತಾರು ಮನೆಗಳು ಲೂಟಿಗೊಳಗಾಗಿವೆ. 3 ಮನೆ, ದ್ವಿಚಕ್ರವಾಹನಗಳು ಬೆಂಕಿಗೆ ಆಹುತಿಯಾಗಿವೆ. ಕೋಮುವಾದದ ತೀವ್ರ ಉನ್ಮಾದದ ಖಾಯಿಲೆಗೆ ತುತ್ತಾಗಿರುವ ಬೆಳಗಾಂ, ಬಜರಂಗದಳ, ವಿಶ್ವಹಿಂದುಪರಿಷತ್, ಶಿವಸೇನೆ ಮುಂತಾದ ಸಂಘಟನೆಗಳ ನಾಯಕರ ಸತತ ಮತೀಯದ್ವೇಷದ ವಿಷದ ಮಾತುಗಳಿಂದ ಸಿಡಿಮದ್ದಿನ ಕೋಟೆಯಂತಾಗಿ ಇನ್ನೂ ಹೆಚ್ಚು ಸಿಡಿಯುವ, ಹತ್ತಿ ಉರಿಯುವ ವಿನಾಶದ ಸಂದರ್ಭಗಳೇ ಇವೆ.

ಅನೇಕ ಕಡೆಗಳಲ್ಲಾದಂತೆ ಇಲ್ಲೂ ಕೋಮು ಕಲಹಕ್ಕೆ ಪ್ರಚೋದನೆ, ಒಂದು ಧರ್ಮದವರ ಧ್ವಜ ದಹಿಸಿದ್ದು, ಆದರಿಂದ ವಾತಾವರಣ ಬಿಸಿಯೇರಿ, ತಲ್ಲಣ ಹಾಗೇ ಯೋಜಿತವೆಂಬಂತೆ ಗಲಭೆಗಳು ಆರಂಭ. ಇದನ್ನು ಹಬ್ಬಿಸುವರ್ಯಾರು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಇಂತಹ 'ದೇಶಸೇವೆ'ಯ ಕೆಲಸ ತೀವ್ರ ಹಾವಳಿಯಿಂದಾಗಿ ಬಜರಂಗದಳದ ಮುಖಂಡ ಪ್ರಮೋದ ಮುತಾಲಿಕರನ್ನು ಬೆಳಗಾಂ ಜಿಲ್ಲೆಯಿಂದಲೇ ಗಡಿಪಾರು ಮಾಡಬೇಕಾಯಿತೆಂಬುದು ನೆನಪಿಸಿಕೊಳ್ಳುವುದು ಸಾಂದರ್ಭಿಕವಾದೀತು.

ಆದ್ದರಿಂದ ಇಂತಹ ಹುನ್ನಾರಗಳನ್ನು ಜನರು ಅರಿತು ಕೋಮುವಾದಿಗಳನ್ನು ಎದುರಿಸಬೇಕಿದೆ. ಶಾಂತಿ, ಸೌಹಾರ್ದತೆ ಕಾಪಾಡಬೇಕಿದೆ.

# ಐಕ್ಯರಂಗ

**4 ದಶಕಗಳ ಹಿಂದೆ**

**ಡಿಸೆಂಬರ್ , 1964**

### ಜನತೆಯ ಹೋರಾಟಗಳಲ್ಲಿ ಭಾಗವಹಿಸುವಾಗ ಉಲ್ಲಾಸಿತನಾಗುತ್ತೇನೆ- ಎ.ಕೆ.ಜಿ.

ಕಣ್ಣಾನೂರಿನಲ್ಲಿ ಜರುಗಿದ ಎ.ಕೆ.ಜಿ. ಷಷ್ಟಿಪೂರ್ತಿ ಸಮಾರಂಭದ ಬಹಿರಂಗಸಭೆಯಲ್ಲಿ ತಮಗಿತ್ತ ಶುಭಾಷಯಗಳಿಗೆ ಕೃತಜ್ಞತೆಯನ್ನು ಸೂಚಿಸಿ ಎ.ಕೆ.ಜಿ. ಭಾಷಣ ಮಾಡಿದರು.

"ನನ್ನ ರಾಜಕೀಯ ಜೀವನದಲ್ಲಿ ನಾನು ಅಮೂಲ್ಯವಾದ ಅನುಭವಗಳನ್ನು ಗಳಿಸಿದುದು ಈ ಜಿಲ್ಲೆಯಲ್ಲಿ ನಡೆದ ಜನತಾ ಚಳುವಳಿಗಳ ಮುಖಾಂತರವಾಗಿ. ಜನತೆಯ ಹೋರಾಟಗಳಲ್ಲಿ ಭಾಗವಹಿಸಿ ಹೆಚ್ಚಿನ ಪಾಠಗಳನ್ನು ನಾನು ಕಲಿತಿದ್ದೇನೆ.

**ವರ್ಷ ಆರವತ್ತಾಯಿತು -**
**ಆದರೆ ಉತ್ಸಾಹ ಕುಂದಿಲ್ಲ**

ನನಗೆ ಅರವತ್ತು ವರ್ಷ ವಯಸ್ಸಾಗಿದೆಯಾದರೂ ನನ್ನ ಉತ್ಸಾಹವು ಕುಂದಲಿಲ್ಲ. ದೇಹವು ದುರ್ಬಲಗೊಂಡಿದೆಯಾದರೂ ಜನತೆಯ ಹಕ್ಕು ಬಾಧ್ಯತೆಗಳಿಗಾಗಿ ನಡೆಯುವ ಸಮರಗಳಲ್ಲಿ, ಚಳುವಳಿಗಳಲ್ಲಿ ಭಾಗವಹಿಸುವಾಗ ನನಗೆ ಆಯಾಸವಾಗುವುದಿಲ್ಲ. ಅನೇಕ ಸಲ ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 2 ಗಂಟೆಯವರೆಗೆ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವಾಗ ಆಯಾಸವಾಗುವ ಬದಲು ಉಲ್ಲಾಸವಾಗುತ್ತದೆ. ನನ್ನಲ್ಲಿ ಎಲ್ಲಿಯವರೆಗೆ ಶಕ್ತಿಯುಂಟೋ ಅಲ್ಲಿಯ ತನಕ ನಾನು ಜನತೆಗಾಗಿ ದುಡಿಯುವೆನು.

★

### ಎಐಟಿಯುಸಿಯಲ್ಲಿ ಒಡಕು ತಲೆದೋರಬಾರದು
**- ಕಾಂ. ಮೀರಜಕರ್**

ಟ್ರೇಡನ್ ಯೂನಿಯನ್ ಚಳುವಳಿಯಲ್ಲಿ ಒಗ್ಗಟ್ಟನ್ನು ಕಾಪಾಡಬೇಕೆಂದು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಎಸ್.ಎಸ್.ಮೀರಜಕರರು ಕರೆಯಿತ್ತಿದಾರೆ.

★

### ದಾವಣಗೆರೆ : ಟೆಕ್ಸ್‌ಟೈಲ್ ಮಿಲ್ ಕಾರ್ಮಿಕರ ಸಭೆ

ತಾ. 17.12.1961 ನೇ ಗುರುವಾರ ಲೇಬರ್ ಕಾಲೋನಿಯಲ್ಲಿ ದಾವಣಗೆರೆ ಗಣೇಶ ಟೆಕ್ಸ್‌ಟೈಲ್ ಮಿಲ್ ಕೆಲಸಗಾರರು ಸಂಘದ ಸೆಕ್ರೆಟರಿ ಜಗದೀಶ ಇವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಸೇರಿತ್ತು. ಶಂಕ್ರಪ್ಪರು ಮಾಲೀಕರ ದುರ್ನಡತೆಯ ಬಗ್ಗೆ ಮಾತನಾಡಿ ಖಂಡಿಸಿ ಎಚ್ಚರಿಕೆ ಕೊಟ್ಟರು.

★

### ದಕ್ಷಿಣ ವಿಯಟ್ನಾಮಿನಲ್ಲಿ... ರಾಷ್ಟ್ರೀಯ ವಿಮೋಚನಾ ರಂಗದ ಅಮೋಘ ವಿಜಯ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಅಭಿನಂದನೆ

ನಾಲ್ಕು ವರುಷಗಳ ಹಿಂದೆ ಐದು ಸಂಸ್ಥೆಗಳೊಟ್ಟು ಸೇರಿ ರಚಿಸಿದ ವಿಯಟ್ನಾಮಿನ ರಾಷ್ಟ್ರೀಯ ವಿಮೋಚನಾರಂಗವು ಇಂದು ಇಪ್ಪತ್ತಮೂರು ದೇಶಪ್ರೇಮಿ ಸಂಘಟನೆಗಳನ್ನೊಳಗೊಂಡಿರುವ - ವಿವಿಧ ರಾಜಕೀಯ ಪಕ್ಷಗಳ, ಎಲ್ಲ ವರ್ಗಗಳ, ಭಿನ್ನ ಭಿನ್ನ ಸಾಮಾಜಿಕ, ವಿಭಿನ್ನ ರಾಷ್ಟ್ರೀಯ ಸಮೂಹಗಳ, ಬೇರೆ ಬೇರೆ ಮತಗಳ ರಾಜಕೀಯ ಪ್ರವೃತ್ತಿಯ, ತಳ್ಳಿಯವರ ಪಟ್ಟಣದ ಗುಡ್ಡಗಾಡು ಪ್ರದೇಶಗ ಹಾಗೂ ನಗರಗ ಜನಸಮೂಹಗಳ ಪ್ರಾತಿನಿಧ್ಯವಿರುವ ಮಹಾನ್ ಶಕ್ತಿಯಾಗಿ ಬೆಳೆದುಬಂದಿದೆ.

★

# ಕೋಮುವಾದಕ್ಕೆ ಪ್ರತಿರೋಧ ಒಡ್ಡಿದ ಬೃಹತ್ ಸಮಾವೇಶ

ಬಾಬಾಬುಡನ್‌ಗಿರಿಯಲ್ಲಿನ ಸೌಹಾರ್ದ ಪರಂಪರೆಗೆ ಮಸಿ ಬಳಿದು ಇಲ್ಲದ ವಿವಾದವನ್ನು ಹುಟ್ಟುಹಾಕಿ, ಚಿಕ್ಕಮಗಳೂರು ಜಿಲ್ಲೆಯನ್ನೇ ಮತೀಯವಾದದ ದಾವಾಗ್ನಿಯಲ್ಲಿ ಸುಟ್ಟುಬಿಡಲು ಸಂಘ ಪರಿವಾರ ಹವಣಿಸಿತ್ತು. ದತ್ತ ಜಯಂತಿ ನೆಪದಲ್ಲಿ ಧಾರ್ಮಿಕ ಆಚರಣೆ ಹೆಸರಿನಲ್ಲಿ ರಾಜಕೀಯ ಸಮಾವೇಶ ನಡೆಸಲು, ಅಲ್ಪ ಸಂಖ್ಯಾತರ ವಿರುದ್ಧ ವಿದ್ವೇಷದ ವಿಷಕಾರಿ-ಕೋಮು ಸೌಹಾರ್ದತೆ - ಶಾಂತಿ ಕದಡಲು ಬಜರಂಗ ದಳ



- ವಿಶ್ವಹಿಂದೂ ಪರಿಷತ್-ಬಿಜೆಪಿ ಪಡೆಗಳು ಯತ್ನಿಸಿದ್ದವು. ಇದನ್ನು ಪ್ರತಿಭಟಿಸಿ ಬಾಬಾಬುಡನ್ ಸ್ವಾಮಿ ದತ್ತಪೀಠದ ಸಾಮರಸ್ಯದ ಸಂಸ್ಕೃತಿ ಉಳಿಯ ಬೇಕು. ಸಂಘ ಪರಿವಾರದ ಕಾನೂನುಬಾಹಿರ ಚಟುವಟಿಕೆಗಳನ್ನು ನಿಷೇಧಿಸಬೇಕೆಂದು ಆಗ್ರಹಿಸಿ ಡಿಸೆಂಬರ್ 7 ರಂದು ಪ್ರಗತಿಪರರಿಂದ ನಡೆಸಲೆತ್ನಿಸಿದ ಸೌಹಾರ್ದತೆ ಸಮಾವೇಶವನ್ನು ನಿರ್ಬಂಧಿಸಿದ ಸರ್ಕಾರ ಸಾವಿರಾರು ಶಾಂತಿ-ಸೌಹಾರ್ದತೆಯ ಹೋರಾಟಗಾರರನ್ನು ಜೈಲಿಗೆ ತಳ್ಳಿತ್ತು.

ಇದಾದ ಕೇವಲ ಇಪ್ಪತ್ತು ದಿನಗಳಲ್ಲೇ ಅದೇ ಚಿಕ್ಕಮಗಳೂರಿನಲ್ಲಿ ಬೃಹತ್ತಾದ ಐತಿಹಾಸಿಕ ಸೌಹಾರ್ದತಾ ಸಮಾವೇಶ ನಡೆಸುವ ಮೂಲಕ ಕೋಮುವಾದಿಗಳ ಹುನ್ನಾರಗಳ ಸವಾಲುಗಳನ್ನು ಸ್ವೀಕರಿಸಿ, ಎದುರಿಸಲು ಸಿದ್ಧ, ಸೌಹಾರ್ದತೆಯ ಬಹುಮುಖಿ ಸಂಸ್ಕೃತಿ, ಜಾತ್ಯಾತೀತತೆ, ಪ್ರಜಾಪ್ರಭುತ್ವದ ಮೌಲ್ಯಗಳ ರಕ್ಷಣೆಗೆ ಕಟಿಬದ್ಧರು ನಾವು ಎಂದು ವಿವಿಧ ಸಂಘಟನೆಗಳು, ನಾಡಿನ ಖ್ಯಾತ ಪ್ರಗತಿಪರ ಬುದ್ಧಿಜೀವಿಗಳು ಪಣ ತೊಟ್ಟರು.

ಕರ್ನಾಟಕವನ್ನು ಮೋದಿ ಸಂತತಿಯ ಗುಜರಾತನ್ನಾಗಿಸುವ, ಬಾಬಾಬುಡನ್‌ಗಿರಿಯನ್ನು ದಕ್ಷಿಣದ ಅಯೋಧ್ಯೆಯಾಗಿಸುವ ವಿಧ್ವಂಸಕ ಕೃತ್ಯಗಳನ್ನು ಕರ್ನಾಟಕದ ಹಳ್ಳಿ-ಪಟ್ಟಣ ಎಲ್ಲೆಡೆಗಳಲ್ಲಿ ಕಂಡುಂಡ, ಅನುಭವಿಸಿ ಆತಂಕಿಸಿದ, ನಾಡಿನ ಭವಿಷ್ಯದ ಬಗ್ಗೆ ಅತೀವ ಕಾಳಜಿಯಿರುವ ಎಲ್ಲರೂ ತಂಡೋಪತಂಡಗಳಾಗಿ ಹತ್ತಾರು ಸಾವಿರ ಜನರ ಪ್ರತಿರೋಧದ ನದಿಯಾಗಿ ಸೇರಿದರು. ದತ್ತಮಾಲೆ, ದತ್ತಜಯಂತಿ ಹೆಸರಿನಲ್ಲಿ ಇಡೀ ಚಿಕ್ಕಮಗಳೂರು ದ್ವೇಷ ಕಾರುವ ಸಂದೇಶ ಹೊತ್ತು ಖಾವಿ ಬಣ್ಣದ






ಬ್ಯಾನರ್‌ಗಳ, ಬಾವುಟಗಳು ಬಂಟಿಂಗ್ಸ್‌ಗಳು ತುಂಬಿದ್ದವು. ಉದ್ರೇಕಕಾರಿ ಘೋಷಣೆಗಳು, ಬರಹದಲ್ಲೂ ಬಾಯಲ್ಲೂ ಅಟ್ಟಹಾಸಗೈದು ಇಡೀ ಪ್ರದೇಶವನ್ನು ಭಯದ ವಾತಾವರಣದಿಂದ ಆಕ್ರಮಿಸಿತ್ತು. ಆದರೆ ಡಿಸೆಂಬರ್ 28 ರ ಸೌಹಾರ್ದತಾ ಸಮಾವೇಶ, ಘೋಷಣೆ, ಬರವಣಿಗೆ - ಬ್ಯಾನರ್‌ಗಳು ಶಾಂತಿ, ಸಾಮರಸ್ಯದ, ನಾಡಿನ ಹೆಮ್ಮೆಯ ಸಾಂಸ್ಕೃತಿಕ ಹಿರಿಮೆ ಬಿತ್ತರಿಸಿ ಜನಸಂಸ್ಕೃತಿಯ ವೈಶಾಲ್ಯ ವಿಜೃಂಭಿಸಿತ್ತು. ಸಂಘಪರಿವಾರದ್ದು ಏಕ ಬಣ್ಣದ ಅಟ್ಟಹಾಸ ವಾಗಿದ್ದರೆ. ಪ್ರಗತಿಪರರದ್ದು ಬಹುವರ್ಣಗಳ ಬಹುಮುಖಿ ಸಂಸ್ಕೃತಿಯ ಅರಳುವಿಕೆಯನ್ನು ಸೂಸುತ್ತಿತ್ತು.



28 ರಂದು ಸಂತೆ ಬಯಲಿನಲ್ಲಿ ಆರಂಭವಾದ ಮೆರವಣಿಗೆಯ ಉದ್ಘಾಟನೆ ಜರುಗಿತು. ಉದ್ಘಾಟನೆ ಯನ್ನು ಮುರುಘರಾಜೇಂದ್ರ ಮಹಾ ಸ್ವಾಮಿಗಳು ನೆರವೇರಿಸಿದರು. ನಂತರ ನಗರದಲ್ಲಿ ಬೃಹತ್ ಮೆರವಣಿಗೆ, ಶಾಂತಿ ಶಿಸ್ತಿನಿಂದ, ಸೌಹಾರ್ದತೆಗಾಗಿ, ಕೋಮುವಾದದ ವಿರುದ್ಧ ಘೋಷಣೆ ಸಾರುತ್ತಾ ನಡೆಯಿತು.

ಇಂತಹ ಸಮಾವೇಶಕ್ಕೆ ಸಿಪಿಐ(ಎಂ), ಸಿಪಿಐ, ಜನತಾದಳ(ಎಸ್) ಪಕ್ಷಗಳೂ ಕರ್ನಾಟಕ ದಲಿತ ಸಂಘರ್ಷ ಸಮಿತಿ, ರಾಜ್ಯ ರೈತ ಸಂಘ, ಎಸ್‌ಎಫ್‌ಐ, ಡಿವೈಎಫ್‌ಐ, ಸಿಐಟಿಯು, ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘಟನೆ, ಎಐವೈಎಫ್‌ಐ, ಎಐಎಸ್‌ಎಫ್, ಇಪ್ಟಾ, ಬಾಬಾಬುಡನ್‌ಗಿರಿ ಸೌಹಾರ್ದತಾ ಸಮಿತಿ ವೇದಿಕೆಯೊಳಗಿನ ಹಲವು ಸಂಘಟನೆಗಳು ಭಾಗಿಯಾಗಿದ್ದವು. ರಾಷ್ಟ್ರಕವಿ ಕುವೆಂಪುರವರ ಜನ್ಮದಿನದ ಶತಮಾನೋತ್ಸವದ ಹಿನ್ನೆಲೆಯಲ್ಲಿ ಈ ಸಮಾವೇಶ ಕೋಮುವಾದದ ವಿರುದ್ಧದ ಆಂದೋಲನ ಕಟ್ಟುವಲ್ಲಿ ಒಂದು ಗಮನಾರ್ಹ ಹೆಜ್ಜೆಯಾಯಿತು.

---

**ಐತಿಹಾಸಿಕ ಮೈಸೂರು ನಗರ ಕೋಮುವಾದಿಗಳ ಕಿಚ್ಚಿಗೆ ಬಲಿಯಾಗಲು ಬಿಡಬಾರದು ಎಂದು ಸಂಕಲ್ಪಿಸಿದ ಎಚ್ಚತ್ತ ನಾಗರಿಕರಿಂದ ಒಂದು ವಿಶಿಷ್ಟ ಪ್ರಯತ್ನ... ಅದೇನು?**

# 'ದ್ವೇಷ ಬಿಟ್ಟು ದೇಶ ಕಟ್ಟು' ವಿಶಿಷ್ಟ ಆಂದೋಲನ

## ಬೃಹತ್ ಸಾಮರಸ್ಯ ಸಮಾವೇಶಕ್ಕೆ ಸಿದ್ಧತೆ

ಸಂವೇದನಾಶೀಲ ಮೈಸೂರಿನ ನಾಗರಿಕರು ಮತ್ತೊಮ್ಮೆ ಸ್ಪಂದಿಸಿದ್ದಾರೆ. ದೇಶಾದ್ಯಂತ ವಿಶೇಷವಾಗಿ ಕರ್ನಾಟಕದಲ್ಲಿ ಕೋಮುವಾದದ ಅಪಾಯಕಾರಿ ವಿಜೃಂಭಣೆ ಜಾತ್ಯತೀತ ಮನೋಭಾವದ ಪ್ರಜ್ಞಾವಂತರಿಗೆಲ್ಲ ಅಸಹನೀಯ ವಾಗುತ್ತಿರುವ ಈ ಸಂದರ್ಭದಲ್ಲಿ ಅದನ್ನು ಪ್ರತಿರೋಧಿಸಲು ಸಮಾನಮನಸ್ಕ ಸಂಘಟನೆಗಳು, ರಾಜಕೀಯ ಪಕ್ಷಗಳು, ವ್ಯಕ್ತಿಗಳು ಮೈಸೂರು ನಗರದಲ್ಲಿ ಒಂದಾಗಿದ್ದಾರೆ.

ಮತೀಯವಾದ, ಜನಾಂಗದ್ವೇಷ, ಜಾತಿ ವೈಷಮ್ಯಗಳಂಥ ಸಾಮಾಜಿಕ ಅನಿಷ್ಟಗಳನ್ನು ಸಮರ್ಥವಾಗಿ ಎದುರಿಸಲು, ವಿಭಾಜಕ ಶಕ್ತಿಗಳ ವಿರುದ್ಧ ಸಮುದಾಯವು ಪ್ರತಿಭಟಿಸುವಂತಾಗಲು ಇಡೀ ತಿಂಗಳು ಪ್ರಚಾರ ಕಾರ್ಯಕ್ರಮ, ಬೀದಿ ಬದಿ ಸಭೆ ಪ್ರದೇಶವಾರು ಜನರನ್ನು ಸಂಘಟಿಸುವುದು, ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ಇದೇ




ಡಿಸೆಂಬರ್ 6 ರಂದು 'ದ್ವೇಷ ಬಿಟ್ಟು, ದೇಶಕಟ್ಟು' ಎಂಬ ನುಡಿ ಘೋಷಣೆಯೊಂದಿಗೆ ಕೋಮುವಾದವನ್ನು ಹೊಡೆದಟ್ಟಿ, ಸಾಮಾಜಿಕ ಸಾಮರಸ್ಯವನ್ನು ಕಾಪಾಡಿಕೊಳ್ಳುವಂತೆ ಮೈಸೂರು ನಗರದ ಹಿರಿಯ ನಾಗರಿಕರು ಮಾಡಿಕೊಂಡ ಮನವಿಯನ್ನು ಬಿಡುಗಡೆಗೊಳಿಸುವ ಮೂಲಕ

> 'ಮತಾಂಧರಿಗೆ ಸವಾಲೆಸೆವ ಹೆಜ್ಜೆ'
> - ಸಾಹಿತಿ ದೇವನೂರು

ವಿಧ್ಯುಕ್ತವಾಗಿ ಪ್ರಾರಂಭಿಸಲಾಯಿತು. ಪುರಭವನದ ಆವರಣದಲ್ಲಿ ಶನಿವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ಹಲವಾರು ಸಂಘಟನೆಗಳ ನೂರಾರು ಜನ ಭಾಗವಹಿಸಿದ್ದರು. ಹಿರಿಯನಾಗರಿಕರ ಮನವಿಯನ್ನು ವಿಜ್ಞಾನಿ ಪ್ರೊ.ಜೆ.ಆರ್. ಲಕ್ಷ್ಮಣರಾವ್ ಬಿಡುಗಡೆ ಮಾಡಿದರು. ಈ ಕಾರ್ಯಕ್ರಮದ ಯಶಸ್ವಿಗೆ, ಸಿಪಿಐ(ಎಂ), ಜನತಾದಳ(ಎಸ್) ಪಕ್ಷಗಳಲ್ಲದೆ ವಿವಿಧ ಸಂಘಟನೆಗಳು, ವ್ಯಕ್ತಿ - ಶಕ್ತಿಗಳು ಸಂಪೂರ್ಣವಾಗಿ ತೊಡಗಿದ್ದಾರೆ.

ಇಂದು ಧರ್ಮ-ಜಾತಿಗಳನ್ನು ಮೀರಿ ಎಲ್ಲರೂ ಕೂಡಿ ಬಾಳಬೇಕೆಂದು ಹೇಳುವವರು ಅಪರಾಧಿಗಳು ಎಂದು ಬಿಂಬಿಸಲಾಗುತ್ತಿದ್ದು ಜನರಲ್ಲಿ ಧರ್ಮಜಾತಿಯ ಹೆಸರಲ್ಲಿ ದ್ವೇಷ, ಹಿಂಸೆಯನ್ನು ಪ್ರಚೋದಿಸುವುದೇ ದೇಶಪ್ರೇಮ ಎಂಬಂಥ ಜನವಿರೋಧಿ ಸಿದ್ಧಾಂತವನ್ನು ಕೋಮುವಾದಿ ಶಕ್ತಿಗಳು ಪ್ರತಿಪಾದಿಸಿದ್ದು, ಇದು ಅತ್ಯಂತ ಅಪಾಯಕಾರಿ ಹಾಗೂ ಆತಂಕಕಾರಿಯಾದ ಬೆಳವಣಿಗೆ ಎಂದು ಮನವಿಪತ್ರದಲ್ಲಿ ಅಭಿಪ್ರಾಯಪಡಲಾಗಿದೆ.

'ದ್ವೇಷಬಿಟ್ಟು, ದೇಶಕಟ್ಟು' ಸಮಾವೇಶದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ವಿಮರ್ಶಕ

ಅವಧಿಗೆ ಮುನ್ನವೇ ಲೋಕಸಭಾ ಚುನಾವಣೆಗಳಿಗೆ ಹೋದರೆ ಅದರ ಲಾಭ ತಮಗೇ ಎಂದು ಬಿಜೆಪಿ ಲೆಕ್ಕ ಹಾಕಿದೆ. ಆದರೆ ಬಿಜೆಪಿ ಮತ್ತು ಅದರ ಮಿತ್ರರ ಆಡಳಿತದಲ್ಲಿನ ರಾಜ್ಯಗಳಲ್ಲಿನ ವಾಸ್ತವ ಪರಿಸ್ಥಿತಿ ಬೇರೆಯದನ್ನೇ ಹೇಳುತ್ತದೆ. ಬಿಜೆಪಿ ಕೂಟವನ್ನು ನೆಚ್ಚಿದ ಅನೇಕರು ನೆಲ ಕಚ್ಚಿದ್ದಾರೆ. ಪ್ರಮುಖ ಪ್ರಶ್ನೆಯೆಂದರೆ ಕೋಮುವಾದದ ವಿರೋಧಿ ಮತಗಳು ಹಂಚಿಹೋಗದಂತೆ ಕಾರ್ಯನಿರ್ವಹಿಸುವುದೇ ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ಎಡಪಕ್ಷಗಳ ತಂತ್ರವೇನು? ಒಂದು ವಿಶ್ಲೇಷಣೆ.



**ಚುನಾವಣೆ - 2004**

# ಬಿಜೆಪಿಗೆ ಲಾಭವಾದೀತೆ?

ಹೊಸವರ್ಷದ ಆರಂಭದೊಡನೆ ದೇಶವನ್ನು ಚುನಾವಣಾ ಬಿಸಿ ಆವರಿಸುತ್ತಿದೆ. ಇತ್ತೀಚೆಗೆ ನಡೆದ ಮೂರು ರಾಜ್ಯ ವಿಧಾನಸಭೆಗಳ ಜಯಭೇರಿಯ ಗುಂಗಿನಲ್ಲಿ ಬಿಜೆಪಿಯು ಅವಧಿಗೆ ಮುನ್ನವೇ ಲೋಕಸಭೆಗೆ ಚುನಾವಣೆಗಳನ್ನು ನಡೆಸಿ ಲಾಭ ಮಾಡಿಕೊಳ್ಳಲು ಹೊರಡುತ್ತಿದೆ. ಈ ಕುರಿತ ಅಧಿಕೃತ ತೀರ್ಮಾನವು ಮುಂದಿನ ವಾರ ನಡೆಯಲಿದ್ದು ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯ ನಂತರ ಹೊರಬೀಳಬಹುದು.

**ಎಲ್ಲಿಂದಾದೀತು ವಿಪರೀತ ಮುನ್ನಡೆ**

'ಹೊಳೆಯುವ ಭಾರತ' ಎಂಬ ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮದ ಮೂಲಕ 'ಒಳ್ಳೆಯ ಅನುಭವದ ಅಂಶ' ಎಂದು ಮಾಧ್ಯಮಗಳ ಮೂಲಕ ತುತ್ತೂರಿ ಹೊಡೆಯಲಾಗುತ್ತಿದೆ. 'ಒಳ್ಳೆಯ ಅನುಭವದ ಅಂಶ'ದ ಕಾರ್ಯಕ್ರಮದಲ್ಲಿ ಸ್ವಲ್ಪ ಸತ್ಯವಿದೆಯಾದರೂ ವಿಧಾನಸಭಾ ಚುನಾವಣಾ ಜಯಭೇರಿಗಳ ಕುರಿತಂತೆ ವಾಸ್ತವವನ್ನು ಪರೀಕ್ಷಿಸುವ ಕೆಲಸವನ್ನು ಮಾಡಬೇಕಾಗಿದೆ. ಮೊದಲನೆಯದಾಗಿ ಚುನಾವಣೆ ನಡೆದ ಉತ್ತರದ ಈ ನಾಲ್ಕು ರಾಜ್ಯಗಳಲ್ಲಿ 72 ಲೋಕಸಭಾ ಸ್ಥಾನಗಳಿವೆ. ಉತ್ತರಾಂಚಲವನ್ನು ಪ್ರತ್ಯೇಕಿಸಿದ ನಂತರವೂ ಉತ್ತರಪ್ರದೇಶದಲ್ಲಿ 80 ಲೋಕಸಭಾ ಸ್ಥಾನಗಳಿವೆ. ಎರಡನೆಯದಾಗಿ ಈ 72 ಸ್ಥಾನಗಳಲ್ಲಿ ಬಿಜೆಪಿ ಈಗಾಗಲೇ 52 ಸ್ಥಾನಗಳನ್ನು ಹೊಂದಿದೆ. 1999 ರ ಲೋಕಸಭಾ ಚುನಾವಣೆಗಳ ನಂತರ ನಡೆದ ವಿಧಾನಸಭಾ ಕ್ಷೇತ್ರವಾರು ನಡೆದ ಸಮೀಕ್ಷೆಯಲ್ಲಿ ಬಿಜೆಪಿಯು ರಾಜಸ್ತಾನದ 120 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿತ್ತು. 2003 ರಲ್ಲಿ 120ನ್ನು ಮಾತ್ರ ಗೆದ್ದಿದೆ. ಹಾಗೆಯೇ ಛತ್ತೀಸ್ ಗಡದ 61 ರಲ್ಲಿ ಮುಂದಿದ್ದ ಬಿಜೆಪಿ ಈಗ 49 ನ್ನು ಮಾತ್ರ ಗೆದ್ದಿದೆ. ದೆಹಲಿಯಲ್ಲಿ 52 ರಲ್ಲಿ ಮುಂದಿದ್ದದ್ದು ಕೇವಲ 20 ನ್ನು ಮಾತ್ರ ಗೆದ್ದಿದೆ. 99 ರ ಲೋಕಸಭಾ ಚುನಾವಣೆಗಳಲ್ಲಿ ಕಂಡ ಮುನ್ನಡೆಯನ್ನು ಬಿಜೆಪಿ ಕಾಯ್ದುಕೊಂಡರೂ (2003 ಚುನಾವಣೆಗಳಲ್ಲಿ ಕುಸಿದಿದೆ) ಈ ಸಾಧನೆಗಳ ಆಧಾರದಲ್ಲಿ ವಿಪರೀತ ಮುನ್ನಡೆ ಸಾಧಿಸಿಬಿಡುತ್ತೇವೆಂದು ನಿರೀಕ್ಷಿಸಲು ಸಾಧ್ಯವಿಲ್ಲ.

**ವಿರೋಧದ ಅಲೆ**

ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಗಣನೆಗೆ ಬರುವ ವಿಚಾರಗಳೇ ಬೇರೆ ಎಂದು ಖಂಡಿತವಾಗಿಯೂ ವಾದಿಸಬಹುದು. ಆದರೆ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಆಳುವ-ಪಕ್ಷದ ವಿರೋಧಿ ಅಲೆಯೇ ಪ್ರಾಧಾನ್ಯ ಪಡೆದಿದ್ದನ್ನು ಗಮನಿಸಬಹುದು. ಲೋಕಸಭಾ ಚುನಾವಣೆಯಲ್ಲಿ ಇಂತಹದ್ದೇ ಪರಿಣಾಮ ಆಗಬಹುದು ಎಂಬುದು ಬಿಜೆಪಿಯ ಆತಂಕಕ್ಕೆ ಕಾರಣವಾಗಿದೆ.

**ಎನ್‌ಡಿಎ : ವೈರುಧ್ಯಗಳ ಕೂಟ**

ಎನ್‌ಡಿಎ ಯ ಸ್ಥಿತಿಯನ್ನೂ ಪರೀಕ್ಷಿಸಬೇಕು. ಜಮ್ಮು-ಕಾಶ್ಮೀರದ ಚುನಾವಣೆ ನಂತರ ನ್ಯಾಷನಲ್ ಕಾನ್ಫರೆನ್ಸ್ ಎನ್‌ಡಿಎಯಿಂದ ಹೊರಹೋಯಿತು. ಅಜಿತ್‌ಸಿಂಗರ ಲೋಕದಳ ದೊಡನೆ ಪಾಸ್ವಾನರ ಲೋಕಶಕ್ತಿಯೂ ಹೊರಡನೆಯಿತು. ಈಗ ಡಿಎಂಕೆ ನಂತರ ಎಂಡಿಎಂಕೆ ಹೊರಹೋಗಿವೆ. ಪಿಎಂಕೆ ಅಡ್ಡಗೋಡೆಯ ಮೇಲೆ ಕುಳಿತಿದೆ. ಏಕಪಕ್ಷೀಯವಾಗಿ ಬಿಜೆಪಿ ಜಾರಿಗೊಳಿಸುತ್ತಿದ್ದ ಕೋಮುವಾದಿ ಅಜೆಂಡಾ ಈ ಪಕ್ಷಗಳು ಎನ್‌ಡಿಎಯಿಂದ ಹೊರಬರಲು ಕಾರಣವಾಗಿವೆ. ಕೇವಲ ಅಧಿಕಾರದ ಆಸೆಗಾಗಿ ಈ ಪಕ್ಷಗಳು ಎನ್‌ಡಿಎ ಸೇರಿದ್ದರು.

**ಮೈತ್ರಿ ನಂಬಿ ನೆಲಕಚ್ಚಿದರು**

ಎನ್‌ಡಿಎ ಜೊತೆಯಲ್ಲಿ ಉಳಿದ ಪಕ್ಷಗಳೂ ಕೂಡ ಮೂಲಭೂತವಾಗಿ ವೈರುಧ್ಯಗಳನ್ನು ಎದುರಿಸುತ್ತಿವೆ ಎಂದು ಹಲವಾರು ಬಾರಿ ಹೇಳಲಾಗಿದೆ. ಅಧಿಕಾರಕ್ಕಾಗಿ ಎಷ್ಟು ದಿನಗಳು ಎನ್‌ಡಿಎ ಜೊತೆ ಉಳಿಯುತ್ತಾರೋ ಅಷ್ಟೂ ದಿನ ಆ ಪಕ್ಷಗಳ ತಳಹದಿ ಕುಸಿಯುತ್ತಾ ಹೋಗುತ್ತದೆ. ಅಕಾಲಿದಳ ಪಂಜಾಬ್‌ನಲ್ಲಿ ಅಧಿಕಾರ ಕಳೆದುಕೊಂಡದ್ದು ಈ ಕಾರಣದಿಂದಲೇ ಎಂಬುದು ಸ್ಪಷ್ಟ. ಕರ್ನಾಟಕದಲ್ಲಿ ಜನತಾದಳ(ಸಂಯುಕ್ತ) ಸರಿಸುಮಾರು ಅವನತಿಯಾಗಿದೆ. ತೃಣಮೂಲ ಕಾಂಗ್ರೆಸ್ ಭಾರಿ ಗೊಂದಲಕ್ಕೀಡಾಗಿದೆ. ಬಿಹಾರದಲ್ಲಿ ಸಮತಾ ಮತ್ತು ಜೆಡಿ(ಯು) ವಿಲೀನ ಮೂರು ಹೊಸ ಪಕ್ಷಗಳ ಸೃಷ್ಟಿಗೆ ಕಾರಣವಾಗಿದೆ. ಒರಿಸ್ಸಾದ ಬಿಜು ಜನತಾದಳ ಇಬ್ಭಾಗವಾಗಿದೆ. ರಾಷ್ಟ್ರಪತಿ ಚುನಾವಣೆ ಸಂದರ್ಭದಲ್ಲಿ ಒರಿಸ್ಸಾದಲ್ಲಿ ಚಲಾವಣೆಯಾದ ಮತಗಳಲ್ಲಿ ಎಡಪಕ್ಷಗಳ ಪ್ರಭಾವಕ್ಕಿಂತ ಎಷ್ಟೋ ಹೆಚ್ಚು ಮತಗಳು ಲಕ್ಷ್ಮಿ ಸೆಹಗಲ್‌ರವರಿಗೆ ಬಂದಿವೆ ಎಂಬುದನ್ನು ನೆನಪಿಸಿಕೊಳ್ಳಬೇಕು. ಪರವಾಗಿಲ್ಲ ಎಂಬ ತೆಲುಗುದೇಶಂ ಕೂಡಾ ಆಂಧ್ರಪ್ರದೇಶದಲ್ಲಿ ಗಂಭೀರ ಸವಾಲನ್ನು ಎದುರಿಸುತ್ತಿದೆ. ವಿಧಾನಸಭೆಯನ್ನು ವಿಸರ್ಜಿಸಿ ಚುನಾವಣೆ ಘೋಷಣೆ ಮಾಡಿದ್ದನ್ನು ಅವರ ಪಕ್ಷದ ಕಾರ್ಯಕರ್ತರೇ ಪ್ರಶ್ನಿಸುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಈ ಪಕ್ಷಗಳು ಈಗಿರುವ ತಮ್ಮ ಸ್ಥಾನಗಳನ್ನೇ ಉಳಿಸಿಕೊಳ್ಳುವುದು ಸುಲಭವೇನೂ ಅಲ್ಲ. ಉದಾಹರಣೆಗೆ ಆಂಧ್ರಪ್ರದೇಶದಲ್ಲಿ ಟಿಡಿಪಿ 29 ಮತ್ತು ಬಿಜೆಪಿ 7 ಸ್ಥಾನಗಳನ್ನು ಗೆದ್ದು 42 ರಲ್ಲಿ 36 ಸ್ಥಾನಗಳನ್ನು ಗೆದ್ದಿದ್ದವು. ಹಿಂದಿನ ಸಂಯುಕ್ತ ಬಿಹಾರದಲ್ಲಿ ಬಿಜೆಪಿ ಮತ್ತವರ ಮಿತ್ರರು 54 ರಲ್ಲಿ 41 ಸ್ಥಾನಗಳನ್ನು ಗೆದ್ದಿದ್ದರು. ಒರಿಸ್ಸಾದಲ್ಲಿ 21 ರಲ್ಲಿ 19 ಸ್ಥಾನಗಳನ್ನು ತಮಿಳುನಾಡಿನ 39 ರಲ್ಲಿ 26 ಸ್ಥಾನಗಳನ್ನು ಗೆದ್ದಿದ್ದರು. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮತ್ತು ತೃಣಮೂಲ ಇತ್ತೀಚಿನ ವರ್ಷಗಳಲ್ಲೇ ಹೆಚ್ಚು ಅಂದರೆ 10 ಸ್ಥಾನಗಳನ್ನು ಗೆದಿದ್ದವು. ದೆಹಲಿಯ ಎಲ್ಲಾ 7 ಸ್ಥಾನಗಳನ್ನು ಬಿಜೆಪಿ ಗೆದ್ದಿತ್ತು. ಆದರೆ ಈಗಿನ ಸ್ಥಿತಿಯನ್ನು ಗಮನಿಸಿದರೆ ಬಿಜೆಪಿಯ ಮಿತ್ರರು 1999 ರಲ್ಲಿ ಬಿಜೆಪಿಗೆ ಮಾಡಿದಷ್ಟು ಸಹಾಯ ಮಾಡಲು ಸಾಧ್ಯವಾಗಲಾರದು.

ಹಾಗಿದ್ದಾಗ್ಯೂ **ಬಿಜೆಪಿಯೇತರ ಜಾತ್ಯಾತೀತ ಪಕ್ಷಗಳು ಎಷ್ಟರಮಟ್ಟಿಗೆ ಕೋಮುವಾದಿ ವಿರೋಧಿ ಮತಗಳು ಹಂಚಿಹೋಗದಂತೆ ಕಾರ್ಯನಿರ್ವಹಿಸುತ್ತವೆ ಎಂಬುದರ ಆಧಾರದಲ್ಲಿ ಇದು ತೀರ್ಮಾನವಾಗುತ್ತದೆ.** ಇಂತಹ ವಿಭಜನೆಯಿಂದಲೇ ಇತ್ತೀಚಿನ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಅವರ ಮಿತ್ರರಿಗೆ ಸಾಕಷ್ಟು ಸಹಾಯವಾಗಿದೆ ಎಂಬುದು ಗೊತ್ತಾಗುತ್ತದೆ.

**ಪ್ರಧಾನ ಕಾರ್ಯಾಭಾರ**

ಈಗಾಗಲೇ ಕಾಂಗ್ರೆಸ್ ಪಕ್ಷಕ್ಕೆ ಇದರ ಅರಿವಾಗಿ ಬೇರೆ ಪಕ್ಷಗಳೊಡನೆ ಮಾತುಕತೆಗೆ ಮುಂದಾಗುತ್ತಿದೆ. ಇಂತಹ ಸಂದರ್ಭದಲ್ಲಿ ನೀತಿ ಮತ್ತು ಹೋರಾಟಗಳ ಆಧಾರದಲ್ಲಿ ರೂಪುಗೊಳ್ಳುವ ಕಾಂಗ್ರೆಸ್ಸೇತರ ಪರ್ಯಾಯ ಮಾತ್ರವೇ ದೀರ್ಘಕಾಲದಲ್ಲಿ ಕೋಮುವಾದಿ ಶಕ್ತಿಗಳಿಗೆ ನಿಜವಾದ ಪರ್ಯಾಯ ಎಂಬುದನ್ನು ಮರೆಯಬಾರದು. ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ಕೋಮುವಾದಿ ಕೂಟವನ್ನು ಸೋಲಿಸುವುದೇ ಪ್ರಧಾನ ವಿಚಾರ. ಇದನ್ನು ಸಾಧಿಸುವ ಹಾದಿಯಲ್ಲಿ **ಸಿಪಿಐ(ಎಂ) ಸ್ಪಷ್ಟವಾಗಿ ಹೇಳಿರುವುದೇನೆಂದರೆ ಕಾಂಗ್ರೆಸ್ ಜೊತೆ ಯಾವುದೇ ಮೈತ್ರಿ ಅಥವಾ ರಂಗ ಸಾಧ್ಯವಿಲ್ಲ ಎಂಬುದು. ಆದರೂ ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಸರಿಯಾದ ತಂತ್ರಗಳನ್ನು ರೂಪಿಸಬೇಕಾಗಿರುವುದೇ ಕೇಂದ್ರ ವಿಚಾರ.**

ಬಿಜೆಪಿ ನೇತೃತ್ವದ ಸರ್ಕಾರದ ವಿನಾಶಕಾರಿ ಆಡಳಿತದಿಂದ ನಮ್ಮನ್ನು ನಾವೇ ಬಿಡುಗಡೆಗೊಳಿಸಿಕೊಳ್ಳುವ ಅವಕಾಶವನ್ನು 2004 ನೀಡಲಿದೆ. ಸಾಧ್ಯವಾದಷ್ಟು ಬೇಗ ಈ ಶಕ್ತಿಗಳನ್ನು ತೊಲಗಿಸುವುದು ದೇಶಕ್ಕೆ ಜನತೆಗೆ ಒಳ್ಳೆಯದು. ಮುಂಬರುವ ದಿನಗಳಲ್ಲಿ ನಮಗಿದೆ ಪ್ರಧಾನ ಕಾರ್ಯಾಭಾರ.

---


ಜಿ.ಎಚ್.ನಾಯಕ್ ಕಟ್ಟುವ, ಕೆಡಹುವ ರಾಜಕೀಯದಿಂದ ದೇಶದಲ್ಲಿ ಆತಂಕ ಹೆಚ್ಚಿದೆ ಎಂದರು. ಬಾಬರಿ ಮಸೀದಿಯನ್ನು ಕೆಡಹಿದ ಸಂದರ್ಭದಲ್ಲಿ ದೇಶದ ಅನೇಕ ಕಡೆ ಕೋಮುಜ್ವಾಲೆ ಭುಗಿಲೆದ್ದು ಗಲಭೆಗಳು ಉಂಟಾಗಿ ಅಮಾಯಕರ ಹತ್ಯೆಯಾಗಿತ್ತು. ಈಗ ಬಾಬಾಬುಡನ್‌ಗಿರಿಯ ದತ್ತಪೀಠವನ್ನು ದಕ್ಷಿಣ ಭಾರತದ ಅಯೋಧ್ಯೆಯಾಗಿ ಪರಿವರ್ತಿಸಲಾಗು ವುದು ಎಂದು ಬಿ.ಜೆ.ಪಿ.ಯ ಅನಂತ ಕುಮಾರ್ ಹೇಳಿರುವದು ಆತಂಕಕಾರಿ ಎಂದು ಅವರು ವ್ಯಾಖ್ಯಾನಿಸಿದರು.

**ಮೆದುಳಿಗೆ ವಿಷ: ಹೃದಯಹೀನತೆ ಕೋಮುವಾದದ ಕೃತ್ಯ:**

ಸಮಾವೇಶವನ್ನು ಹಿರಿಯ ಗಾಂಧಿವಾದಿ ಡಾ.ಸಿ.ಬಂದಿಗೌಡ ಉದ್ಘಾಟಿಸಿದರು. ಅಧ್ಯಕ್ಷತೆ ವಹಿಸಿದ್ದ ಸಾಹಿತಿ ದೇವನೂರು ಮಹಾದೇವ ಮಾತನಾಡುತ್ತ ಇಡೀ ನಗರದ ವಿವೇಕ ಇಲ್ಲದ ಮತಾಂಧರಿಗೆ ಸವಾಲೆಸೆಯುವ ಕಾರ್ಯ ಮೊದಲಾಗಿದೆ ಎಂದರು. ಒಕ್ಕೊರಲಿನಿಂದ ಎಲ್ಲ ಜಾತಿಜನ ಸಹನೆ, ಶಾಂತಿ, ಸಹಬಾಳ್ವೆಗೆ ಕೈಮುಗಿದು ಕೇಳಿಕೊಂಡಿದ್ದಾರೆ. ಇಂಥ ಪರಿಸ್ಥಿತಿಯನ್ನು ಹಿರಿಯ ಜೀವಗಳಿಗೆ ತಂದುಕೊಡ ಬಾರದಿತ್ತು ಎಂದು ವಿಷಾದಿಸಿದರು.

ಎಲ್ಲ ಧರ್ಮಗಳ ಮೂಲ ಭೂತವಾದ ಬಾಹ್ಯದಲ್ಲಿ ಬೇರೆಯಾಗಿ ಕಂಡರೂ ಅಂತರ್ಯದಲ್ಲಿ ಒಂದೇ ಆಗಿರುತ್ತದೆ. ಮತಾಂಧತೆ ನಮ್ಮ ಕಣ್ಣುಗಳನ್ನು ಕಿತ್ತು ಅಂಧರನ್ನಾಗಿಸುತ್ತದೆ. ಮೆದುಳಿಗೆ ವಿಷ ಉಣ್ಣಿಸಿ, ಹೃದಯವನ್ನು ಕಿತ್ತು ಹೃದಯ ಹೀನರನ್ನಾಗಿಸುತ್ತದೆ. ಕೊನೆಗೆ ನರಬಲಿ ಕೇಳುತ್ತದೆ. ಈಗ ಆಗಬೇಕಿರುವುದು ನಮ್ಮ ಮಕ್ಕಳ ಕಣ್ಣು, ಮೆದುಳು ಹಾಗೂ ಹೃದಯವನ್ನು ಕಾಪಾಡಿ ಕೊಳ್ಳುವುದು ಎಂದು ಅವರು ಹೇಳಿದರು.

ಪ್ರೊ.ಲಿಂಗದೇವರು ಹಳೆಮನೆ ಕಾರ್ಯಕ್ರಮ ನಿರೂಪಿಸಿದರು. ಸಮಾವೇಶದ ಕೊನೆಯಲ್ಲಿ ಚಿಕ್ಕಮಗಳೂರಿನ ಸೌಹಾರ್ದ ಸಮಾವೇಶಕ್ಕೆ ತೆರಳುತ್ತಿದ್ದ ಪ್ರಗತಿಪರರನ್ನು ಬಂಧಿಸಿದ ಸರ್ಕಾರದ ನಿಲುವನ್ನು ಖಂಡಿಸಿ ಗೊತ್ತುವಳಿ ಸ್ವೀಕರಿಸಲಾಯಿತು.



ಚಿಕ್ಕಮಗಳೂರಿನಲ್ಲಿ ಕೋಮುವಾದದ ಹುನ್ನಾರಗಳ ಎದುರು ರ್‍ಯಾಲಿ

ಕೆ.ಪಿ.ಪೂರ್ಣಚಂದ್ರತೇಜಸ್ವಿ, ಪ್ರೊ.ಕೆ.ರಾಮದಾಸ್, ಡಾ.ಪಂಡಿತಾರಾಧ್ಯ, ಶಿವರಾಮು ಕಾಡನಕುಪ್ಪೆ, ಪ್ರೊ.ಗೋವಿಂದಯ್ಯ, ಪ್ರೊ.ಶೇಕ್ ಅಲಿ, ಆರ್.ಗುರು, ವೇದಾಂತ ಹೆಮ್ಮಿಗೆ, ತುಳಸೀದಾಸಪ್ಪ, ಎಲ್.ಜಗನ್ನಾಥ್, ಪ್ರಭಾಕರ್, ಹಲವಾರು ಪ್ರದೇಶಗಳ ಪ್ರಮುಖರು ಸಿಪಿಐ(ಎಂ) ಮುಖಂಡರುಗಳು ಸಮಾವೇಶದಲ್ಲಿದ್ದರು.

- ಎಂ.ವಿಜಯಕುಮಾರ್

**ಜನವರಿ ಮೂರನೇ ವಾರದಲ್ಲಿ ಮುಂಬಯಿಯಲ್ಲಿ ನಾಲ್ಕನೇ ವಿಶ್ವ ಸಾಮಾಜಿಕ ವೇದಿಕೆ (WORLD SOCIAL FORUM) ಯ ಅಧಿವೇಶನ ನಡೆಯಲಿದೆ. ಆ ದಿನಗಳು ಹತ್ತಿರ ಬರುತ್ತಿದ್ದಂತೆ ವಿಶ್ವಸಾಮಾಜಿಕ ವೇದಿಕೆ ಸ್ವರೂಪದ ಬಗೆಗೆ ಮತ್ತು ಸಿಪಿಐ(ಎಂ) ಸೇರಿದಂತೆ ಎಡಪಕ್ಷಗಳ ಭಾಗವಹಿಸುವಿಕೆ ಬಗ್ಗೆ ಚರ್ಚೆಯೂ ಮೂಡಿ ಬರುತ್ತಿದೆ. ವಿಶ್ವ ಸಾಮಾಜಿಕ ವೇದಿಕೆಯ ಸ್ವರೂಪ, ಚರ್ಚೆಯಲ್ಲಿ ಮೂಡಿಬರುತ್ತಿರುವ ಪ್ರಮುಖ ಪ್ರಶ್ನೆಗಳು ಬಗ್ಗೆ ಚಿಂತನ ಮಂಥನ**

# ವಿಶ್ವ ಸಾಮಾಜಿಕ ವೇದಿಕೆ ಸಮಾವೇಶ

## ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ಪ್ರತಿರೋಧ

**ವಿಶ್ವ ಸಾಮಾಜಿಕ ವೇದಿಕೆ (WSF) ಏನು? ಅದು ಹೇಗೆ ಹುಟ್ಟಿತು? ಎಂಬುದರತ್ತ ಗಮನ ಹರಿಸುವುದು ಅಗತ್ಯ**

WSF ನ ಹುಟ್ಟು, ಬೆಳವಣಿಗೆ ಬಗ್ಗೆ ಸಿಂಹಾವಲೋಕನ ಮಾಡುವುದು ಈ ಚರ್ಚೆಯಲ್ಲಿ ಪ್ರಯೋಜನಕಾರಿ. ಯಾಕೆಂದರೆ WSF ನ ಸ್ವರೂಪವನ್ನು ಹೆಚ್ಚುಕಡಿಮೆ ಅದು ಹುಟ್ಟಿ ಬೆಳೆದ ರೀತಿಯೇ ನಿರ್ಧರಿಸಿದೆ. WSF ಹುಟ್ಟಿದ್ದು 90 ರ ದಶಕದಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಸ್ವಯಂಸ್ಫೂರ್ತಿಯಾಗಿ ಮೂಡಿಬಂದ ವಿಶಾಲ, ವ್ಯಾಪಕ ಹೋರಾಟಗಳ ಹಿನ್ನೆಲೆಯಲ್ಲಿ. 90 ರ ದಶಕದಲ್ಲಿ ಸರ್ಕಾರೇತರ ಸ್ವಯಂ ಸೇವಾ ಸಂಘಟನೆಗಳು ಸಾಮ್ರಾಜ್ಯಶಾಹಿ-ಅಧಿಪತ್ಯದಲ್ಲಿರುವ ಹಲವು ವಿಶ್ವ ಸಂಘಟನೆಗಳ ಸಭೆಗಳ ಸಂದರ್ಭದಲ್ಲಿ ಸಂಘಟಿಸಿದ ಬದಲಿ ಸಮಾವೇಶಗಳ ಸರಣಿ, 94 ರಲ್ಲಿ ಮೆಕ್ಸಿಕೊದಲ್ಲಿ ಝುಪಾಟಿಸ್ಟಾ ದಂಗೆಯಿಂದ ಆರಂಭವಾಗಿ ಲ್ಯಾಟಿನ ಅಮೆರಿಕದ ಹಲವು ದೇಶದಲ್ಲಿ ಜಾಗತೀಕರಣದ ವಿರುದ್ಧ ಹುಟ್ಟಿಬಂದ ವ್ಯಾಪಕ ಹೋರಾಟಗಳು - ಹೀಗೆ ಹಲವು ತೊರೆಗಳು ಸೇರಿ WSF ಹುಟ್ಟಿ, ಬೆಳೆಯಿತು. WTO 1999 ರಲ್ಲಿ ಸಿಯಾಟಲ್‌ನಲ್ಲಿ ಸೇರಿದ್ದ ಸಂದರ್ಭದಲ್ಲಿ ನಡೆದ ಭಾರಿ ವ್ಯಾಪಕ ಪ್ರತಿಭಟನೆ - W S F ಹುಟ್ಟಿಗೆ ಕಾರಣವಾದ ಪ್ರಮುಖ ಘಟನೆ. 2000 ದಲ್ಲಿ ಯುರೋಪಿನಲ್ಲಿ ಜಾಗತೀಕರಣದ ವಿರುದ್ಧ ನಡೆದ ಪ್ರತಿಭಟನೆಗಳ ಸಂದರ್ಭದಲ್ಲಿ WSF ನ ರಚನೆ ಬಗ್ಗೆ ವಿಚಾರಹುಟ್ಟಿತು. ಸ್ವಿಝರ್‌ಲ್ಯಾಂಡಿನ ದಾವೋಸ್‌ನಲ್ಲಿ ಸಭೆ ಸೇರುವ ಜಗತ್ತಿನ ಶ್ರೀಮಂತರ ವೇದಿಕೆ(ವಿಶ್ವ ಆರ್ಥಿಕ ವೇದಿಕೆ)ಗೆ ಬದಲಿಯಾಗಿ WSF ರೂಪಿಸಬೇಕು. ಅದೇ ಸಮಯದಲ್ಲಿ ಅದು ನಡೆಯಬೇಕು ಎಂಬ ವಿಚಾರಮೂಡಿತು.

WSF ಹುಟ್ಟಿದ ಬಗೆಯಿಂದಲೇ, ಅದರ ಸ್ವರೂಪದ ಬಗ್ಗೆ ಸ್ಪಷ್ಟ ಕಲ್ಪನೆ ಮೂಡುತ್ತದೆ. ಜಾಗತೀಕರಣ ಏಕಮಾತ್ರ ವಿಷಯದ ಬಗ್ಗೆ ವೈವಿಧ್ಯಮಯ ಸಂಘಟನೆಗಳು ಒಂದಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. 2001 ರ ಜನವರಿಯಲ್ಲಿ ಮೊದಲ ಬಾರಿಗೆ ವಿಶ್ವ ಆರ್ಥಿಕ ವೇದಿಕೆಯ ದಾವೋಸ್ ಸಭೆಯ ಸಂದರ್ಭದಲ್ಲೇ ಬ್ರೆಜಿಲ್‌ನ ಪೋರ್ಟ್ ಅಲೆಗ್ರೆಯಲ್ಲಿ ಮೊದಲ WSF ನ ಅಧಿವೇಶನ ನಡೆಯಿತು.

WSF ಅದು ಹುಟ್ಟಿ ಬೆಳೆದ ರೀತಿಯಲ್ಲಿ ಜಾಗತೀಕರಣ ನೀತಿಗಳಿಗೆ ವಿರೋಧಿಯಾದ ಒಂದು ಮುಕ್ತವೇದಿಕೆ. WSF ನ ಹೇಳಿಕೆ ಇದನ್ನು ಸ್ಪಷ್ಟಪಡಿಸಿದೆ.

"WSF ಒಂದು ಮುಕ್ತ ವೇದಿಕೆ. ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಯಾವುದೇ ರೂಪದ ಅಧಿಪತ್ಯ ಮತ್ತು ನವ-ಉದಾರವಾದದ ವಿರುದ್ಧ ಪ್ರಜಾಸತ್ತಾತ್ಮಕ ಚರ್ಚೆ, ಪ್ರಸ್ತಾವಗಳ ರಚನೆ, ಅನುಭವಗಳ ವಿನಿಮಯ ಮತ್ತು ಪರಿಣಾಮಕಾರಿ ಕಾರ್ಯಾಚರಣೆಗಳ ಸಂಯೋಜನೆಯನ್ನು ನಡೆಸುವ ಗುಂಪುಗಳು, ಚಳುವಳಿಗಳು ಮತ್ತು ನಾಗರಿಕ ಸಮಾಜದ ವಿಭಾಗಗಳಿಗೆ ಮುಕ್ತ ವೇದಿಕೆ. ಮಾನವ-ಕೇಂದ್ರಿತ ಜಾಗತಿಕ ವ್ಯವಸ್ಥೆಯನ್ನು ಪ್ರತಿಪಾದಿಸುವ ಶಕ್ತಿಗಳಿಗೂ ಮುಕ್ತ ವೇದಿಕೆ...."

ಭಾರತದಲ್ಲಿ ಇದನ್ನು ಪುರುಷಪ್ರಧಾನ ಸಮಾಜ, ಯುದ್ಧ, ಜಾತಿವಾದ, ಜನಾಂಗವಾದ ಮತ್ತು ಕೋಮುವಾದದ ವಿರೋಧಿ ವೇದಿಕೆಯಾಗಿ ಮತ್ತಷ್ಟು ನಿರ್ದಿಷ್ಟಗೊಳಿಸಲಾಗಿದೆ.




ಮೊದಲ WSF ಅಧಿವೇಶನದ ನಂತರ ಬೆಳೆದಿದೆ ಮಾತ್ರವಲ್ಲ ವಿಶ್ವವ್ಯಾಪಿಯಾಗಿದೆ. ಜುಲೈ 2001 ರಲ್ಲಿ ಯುರೋಪಿನ ಇಟಲಿಯ ಜಿನೇವಾದಲ್ಲಿ ನಡೆದ ವ್ಯಾಪಕ ಪ್ರತಿಭಟನೆ ಯುರೋಪಿಯನ್ ಸೋಶಿಯಲ್ ಫೋರಂಗೆ ಬುನಾದಿ ಹಾಕಿತು. ಆ ಮೇಲೆ ಏಶಿಯನ್ ಸೋಶಿಯಲ್ ಫೋರಂ (ASF) ಸೇರಿದಂತೆ ಹಲವು ಪ್ರಾದೇಶಿಕ ಫೋರಂಗಳು ಅಸ್ತಿತ್ವಕ್ಕೆ ಬಂದವು. ಈ ಎಲ್ಲಾ ವೇದಿಕೆಗಳು, WSF ನಂತೆ ವೈವಿಧ್ಯಮಯ ಜಾಗತೀಕರಣ-ವಿರೋಧಿ ಶಕ್ತಿಗಳಿಗೆ ಮುಕ್ತವೇದಿಕೆ ಒದಗಿಸಿವೆಯಷ್ಟೆ. ಈ ಶಕ್ತಿಗಳಲ್ಲಿ ಸಿದ್ಧಾಂತ, ಜಾಗತೀಕರಣಕ್ಕೆ ಬದಲಿ - ಇವೆಲ್ಲದರ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಿವೆ. ಜಾಗತೀಕರಣಕ್ಕೆ ಬದಲಿ ರೂಪಿಸಲು ನಡೆದಿರುವ ಸಂಯೋಜಿತ ವ್ಯವಸ್ಥಿತ ಪ್ರಯತ್ನ ಇದಲ್ಲ. ಬರಿ ವೇದಿಕೆ ಮಾತ್ರ. ಆದರೆ ಸಾಮ್ರಾಜ್ಯಶಾಹಿ ಜಾಗತೀಕರಣ-ವಿರೋಧಕ್ಕೆ ಐಕ್ಯ ರೂಪ ಕೊಡುವ ವೇದಿಕೆಯಾಗಿ ಇದನ್ನು ಬಳಸಬಹುದು.

### ಇಡೀ ವಿಶ್ವವೇ ಇಲ್ಲಿ ಅಣಿನೆರೆಯಲಿದೆಯೆಂಬಂತೆ


ಈ ಸಮಾವೇಶಕ್ಕೆ ಜಗತ್ತಿನ ಬಹುತೇಕ ಎಲ್ಲಾ ದೇಶಗಳಿಂದ ಪ್ರತಿನಿಧಿಗಳು ಬಾಂಬೆಯಲ್ಲಿ ಸೇರಲಿದ್ದಾರೆ. ವಿವಿಧ ಗೋಷ್ಠಿಗಳಿಗೆ ಆಹ್ವಾನಿಸಲಾದ ಪ್ರತಿನಿಧಿಗಳೇ 15,000. ಆದರೆ ಈಗ ದೊರೆತ ಪ್ರತಿಕ್ರಿಯೆಯಂತೆ ಇದು 60,000 ದಾಟುವುದು.

- ಬಂದ ಪ್ರತಿನಿಧಿಗಳಿಗೆ ವ್ಯವಸ್ಥೆ ಮಾಡಲು ಹಲವಾರು ಸಂಘಟನೆಗಳು, ಅನೇಕ ಹಂತದಲ್ಲಿ ಕೆಲಸ ಮಾಡುತ್ತಿವೆ.
- ಏಕಕಾಲಕ್ಕೆ ಹತ್ತಾರು, ನೂರಾರು ಕಾರ್ಯಕ್ರಮಗಳು ಜರುಗುತ್ತಿವೆ.
- 21 ರಂದು ವಿಶ್ವದ ವಿವಿಧ ಕಮ್ಯುನಿಸ್ಟ್ ಪಕ್ಷಗಳ ಪ್ರತಿನಿಧಿಗಳನ್ನು ಆಹ್ವಾನಿಸಿದೆ. ಬೃಹತ್ ರ್‍ಯಾಲಿಯನ್ನು ಮಹಾರಾಷ್ಟ್ರದ ಸಿಪಿಐ(ಎಂ) ಘಟಕ ವ್ಯವಸ್ಥೆಗೊಳಿಸಿದೆ.
- ಮಹಿಳೆಯ ಒಂದು ಪ್ರತ್ಯೇಕ ಸಮಾವೇಶ - ಜನವರಿ 18 ರಂದು 'ಯುದ್ಧದ ವಿರುದ್ಧ ಮಹಿಳೆಯರು, ಮಹಿಳೆಯರ ವಿರುದ್ಧಯುದ್ಧ' ಹಾಗೂ 'ಮಹಿಳೆಯರು ಮತ್ತು ಜಾಗತೀಕರಣ' (ದಿನಾಂಕ ನಿಗದಿಯಾಗಬೇಕಿದೆ) - ವಿಶ್ವದ ಹಲವು ನಾಯಕರು ಭಾಗವಹಿಸಲಿದ್ದಾರೆ.

ಅಂತೂ ಇಡೀ ಬಾಂಬೆಯೇ ಅದ್ಭುತವಾಗಿ ಸಿದ್ಧಗೊಂಡು ಸಮಾವೇಶದ ಯಶಸ್ವಿಗಾಗಿ ಶ್ರಮಿಸುತ್ತಿದೆ.

**ನಾಲ್ಕು ಸೈದ್ಧಾಂತಿಕ ತೊರೆಗಳು**

WSF ನಲ್ಲಿ ಭಾಗವಹಿಸುತ್ತಿರುವ ಸಂಘಟನೆಗಳು, ಚಳುವಳಿಗಳಲ್ಲಿ ನಾಲ್ಕು ಸೈದ್ಧಾಂತಿಕ ತೊರೆಗಳನ್ನು ಗುರುತಿಸಬಹುದು - ಸೋಶಲಿಸ್ಟ್, ಸರ್ಕಾರೇತರ ಸ್ವಯಂ-ಸೇವಾ ಸಂಸ್ಥೆ, ಕಮ್ಯುನಿಸ್ಟರು ಮತ್ತು ಎಡ ದುಸ್ಸಾಹಸವಾದಿಗಳು. ಸೋಶಲಿಸ್ಟ್ ಗುಂಪುಗಳ ಬಗ್ಗೆ ಅಂತೂ ನಮಗೆ ಗೊತ್ತೇ ಇದೆ. ಅದು ಬಂಡವಾಳಶಾಹಿಗಳಿಗೆ ವಿರೋಧವಾದರೂ, ಅದನ್ನು ನಾಶ ಮಾಡಿ ಸಮಾಜವಾದ ತರುವುದರಲ್ಲಿ ನಂಬಿಕೆ ಇಟ್ಟಿಲ್ಲ.



ಬದಲಾಗಿ ಬಂಡವಾಳಶಾಹಿಯಲ್ಲಿ ಸುಧಾರಣೆ ತರಬಹುದು ಎಂಬ ಭ್ರಮೆ ಇರುವ ಗುಂಪುಗಳು. ಅಧಿಕಾರದಲ್ಲಿದ್ದಾಗ ಆಳುವ ಬಂಡವಾಳಶಾಹಿ ವರ್ಗದ ಜತೆಗೆ ಇದ್ದರೆ, ಅಧಿಕಾರ ಕಳೆದು ಕೊಂಡು ವಿರೋಧಪಕ್ಷವಾದಾಗ ಕಾರ್ಮಿಕವರ್ಗದ ಜತೆಗೆ ಇರುವುದು - ಸೋಶಲಿಸ್ಟ್ ಪಕ್ಷಗಳ, ಗುಂಪುಗಳ ಜಾಯಮಾನ ಎಂದು ನಾವು ಹಿಂದಿನಿಂದಲೂ ಗುರುತಿಸುತ್ತಾ ಬಂದಿದ್ದೇವೆ. ಅಧಿಕಾರದಲ್ಲಿದ್ದಾಗ ಸೋಶಲಿಸ್ಟರು ಸಾಮ್ರಾಜ್ಯಶಾಹಿಗಳ ಜತೆ ಸಹಕರಿಸಿದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಸೋಶಲಿಸ್ಟ್ ಗುಂಪುಗಳ ಜತೆ ಕಾರ್ಮಿಕವರ್ಗದ ಚಳುವಳಿ ಮುಂದೊಯ್ಯಲು ಸಹಕರಿಸುತ್ತಲೇ, ಬಂಡವಾಳಶಾಹಿ ಸುಧಾರಿಸುವ ಭ್ರಮೆಯ ವಿರುದ್ಧ ಕ್ರಾಂತಿಕಾರಿ ನಿಲುವು ಎತ್ತಿ ಹಿಡಿಯುವುದು ಕಮ್ಯುನಿಸ್ಟರ ನೀತಿಯಾಗಿದೆ. ಆದ್ದರಿಂದ WSF ನಲ್ಲಿ ಸೋಶಲಿಸ್ಟರು ದೊಡ್ಡ ರೀತಿಯಲ್ಲಿ ಭಾಗವಹಿಸುತ್ತಿದ್ದಾರೆ ಎಂಬ ಮಾತ್ರಕ್ಕೆ ಅದರಿಂದ ದೂರನಿಲ್ಲುವುದು ಜಾಣತನವಲ್ಲ. ಜನತೆ ದೊಡ್ಡ ರೀತಿಯಲ್ಲಿ WSF ನ್ನು ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಪ್ರತಿಭಟನೆಗೆ ಬಳಸುತ್ತಿರುವಾಗ, ಅದರಿಂದ ದೂರ ನಿಲ್ಲುವುದು ಕ್ರಾಂತಿಕಾರಿ ಕರ್ತವ್ಯಕ್ಕೆ ವಂಚನೆ.

90 ರ ದಶಕದಲ್ಲಿ ಎಲ್ಲಾ ದೇಶಗಳಲ್ಲಿ ಕಮ್ಯುನಿಸ್ಟ್ ಚಳುವಳಿ ಪುನಸಂಘಟಿತವಾಗುತ್ತಿತ್ತು. ಹಲವು ದೇಶಗಳಲ್ಲಿ (ಅದರಲ್ಲೂ ಮುಖ್ಯವಾಗಿ ಯುರೋಪಿನಲ್ಲಿ) ಜಾಗತೀಕರಣ-ವಿರೋಧಿ ಚಳುವಳಿಗಳಲ್ಲಿ ವ್ಯಾಪಕ ಭಾಗವಹಿಸುವಿಕೆ ಕಮ್ಯುನಿಸ್ಟರ ಚಟುವಟಿಕೆಯಲ್ಲಿ ಪ್ರಮುಖವಾಗಿತ್ತು. ಯಾವುದೇ ರಾಜಕೀಯ ಪಕ್ಷ, ರಾಜಕೀಯ ಪಕ್ಷದ ಹೆಸರಲ್ಲಿ ಭಾಗವಹಿಸಬಾರದು ಎಂಬ ನಿಯಮವನ್ನು ಸೋಶಲಿಸ್ಟ ಗುಂಪುಗಳೇ WSF ನಲ್ಲಿ ತಂದಿದ್ದು - ಕಮ್ಯುನಿಸ್ಟ್ ಪ್ರಭಾವವನ್ನು ಕಡಿಮೆ ಮಾಡುವುದಕ್ಕಾಗಿ. ಆದರೂ ಟ್ರೇಡ್ ಯೂನಿಯನ್ ಮತ್ತು ಇತರ ಸಾಮೂಹಿಕ ಸಂಘಟನೆಗಳ ಮೂಲಕ ಕಮ್ಯುನಿಸ್ಟರು WSF ನ ಚಟುವಟಿಕೆಗಳಲ್ಲಿ

**ಜನವರಿ 16 ರಿಂದ 21 ರವರೆಗೆ ಮುಂಬಯಿಯಲ್ಲಿ 2004 ರ ವಿಶ್ವ ಸಾಮಾಜಿಕ ವೇದಿಕೆ (WSF) ಅಧಿವೇಶನ ಜರುಗಲಿದೆ. ಇದು ಹತ್ತಿರ ಬರುತ್ತಿದ್ದಂತೆ WSF ಪ್ರಕ್ರಿಯೆ ಬಗ್ಗೆ ಚರ್ಚೆ ಬಿಸಿಯೇರುತ್ತಿದೆ. ಚರ್ಚೆಯಲ್ಲಿರುವ ಪ್ರಮುಖ ಪ್ರಶ್ನೆ - ವಿದೇಶಿ ಧನ ಸಹಾಯ ಪಡೆಯುವ ಪ್ರಧಾನ ಸ್ವಯಂ ಸೇವಾ' ಸಂಘಟನೆಗಳು (ಸರ್ಕಾರೇತರ) WSFನಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಬಗ್ಗೆ. ಈ ರೀತಿಯ ಪ್ರಶ್ನೆಗಳ ಬಗ್ಗೆ ಗಂಭೀರ ವಿಚಾರಮಂಥನ ನಡೆಯಬೇಕು.**

**ಅದೇ ಸಮಯದಲ್ಲಿ ಇನ್ನೊಂದು ರೀತಿಯ ಚರ್ಚೆಯೂ ನಡೆದಿದೆ. WSFನಲ್ಲಿ ಸಿಪಿಐ(ಎಂ) ಸೇರಿದಂತೆ ಪ್ರಮುಖ ಎಡಪಕ್ಷಗಳು ಭಾಗವಹಿಸುತ್ತಿರುವುದರ ಬಗೆಗೆ ಆ ಚರ್ಚೆ. ಒಂದು ಕಡೆ ಸಿಪಿಐ(ಎಂ) ತನ್ನ ಕ್ರಾಂತಿಕಾರಿ ಸ್ವರೂಪ ಕಳೆದುಕೊಂಡು ಸೋಶಲಿಸ್ಟ್ ಪಕ್ಷವಾಗಿದೆ. ಆದ್ದರಿಂದ ಇಂತಹ ವೇದಿಕೆಗಳಲ್ಲಿ ಭಾಗವಹಿಸುತ್ತಿದೆ - ಎನ್ನುವ ಟೀಕೆ. ಇನ್ನೊಂದು ಕಡೆ ಸಿಪಿಐ(ಎಂ) ಜಾಗತೀಕರಣ-ಪರವಾದ ಪಕ್ಷವಾಗಿದೆ. ಪಶ್ಚಿಮ ಬಂಗಾಳದ ಸಿಪಿಐ(ಎಂ) ಮುಖ್ಯಮಂತ್ರಿಗಳು ಮತ್ತು ಇತರ ನಾಯಕರ ಬಗೆಗೆ ಈ ಟೀಕೆ ಮಾಡಲಾಗಿದೆ. ಇಂತಹ ಟೀಕೆಗಳು ಹುಟ್ಟಾ ಕಮ್ಯುನಿಸ್ಟ್-ವಿರೋಧಿಗಳು ಮತ್ತು ಸಿಪಿಐ(ಎಂ) ಬಗೆಗೆ ಪ್ರಬಲ ಸೈದ್ಧಾಂತಿಕ ಪೂರ್ವಾಗ್ರಹ ಇರುವ ಶಕ್ತಿಗಳಿಂದ ಬರುತ್ತಿರುವುದು ಇದೇ ಮೊದಲ ಸಲವಲ್ಲ. ಇಂತಹ ಶಕ್ತಿಗಳಿಗೆ ಸಿಪಿಐ(ಎಂ)ನ್ನು ಟೀಕೆ ಮಾಡಲು ಒಂದು ನೆಪ ಬೇಕಷ್ಟೆ. ಈಗ WSF ನ್ನು ಒಂದು ನೆಪವಾಗಿ ಬಳಸಲಾಗುತ್ತಿದೆ ಅಷ್ಟೆ.**

**ಆದರೆ ಈ ಲೇಖನ WSF ಬಗ್ಗೆ ಇರುವ ನಿಜವಾದ ವಿಷಯಗಳ, ಕಾಳಜಿಗಳ ಬಗ್ಗೆ ಚರ್ಚೆಯಲ್ಲಿ ಸಿಪಿಐ(ಎಂ) ನಿಲುವು ಸ್ಪಷ್ಟ ಪಡಿಸುವ ಪ್ರಯತ್ನ.**

**ಸೀತಾರಾಂ ಯೆಚೂರಿ**

ಭಾಗವಹಿಸಿದರು. ಕ್ಯೂಬನ್ ಪ್ರತಿನಿಧಿಗಳು WSF ನಲ್ಲಿ ಮೊದಲಿನಿಂದಲೂ ಪ್ರಮುಖ ಪಾತ್ರ ವಹಿಸುತ್ತಾ ಬಂದಿದ್ದಾರೆ. ಕ್ಯೂಬನ್ ಕಮ್ಯುನಿಸ್ಟ್ ಪಕ್ಷ WSF ನ್ನು ಒಂದು ಪ್ರಮುಖ ಸಾಮ್ರಾಜ್ಯಶಾಹಿ-ವಿರೋಧಿ ವೇದಿಕೆಯಾಗಿ ಪರಿಗಣಿಸುತ್ತದೆ. ಕಮ್ಯುನಿಸ್ಟರು WSF ನಲ್ಲಿ ದೊಡ್ಡ ರೀತಿಯಲ್ಲಿ ಭಾಗವಹಿಸಿದ್ದೇ, ಅದು ಪ್ರಬಲ ಸಾಮ್ರಾಜ್ಯಶಾಹಿ-ಜಾಗತೀಕರಣ ವಿರೋಧಿ ವೇದಿಕೆಯು ರೂಪುಗೊಳ್ಳಲು ಮತ್ತು ಅದು ಹರಿತಗೊಳ್ಳಲು ಕಾರಣವಾಗಿದೆ. ಹೀಗೆ ಸೋಶಲಿಷ್ಟರು ಮತ್ತು ಕಮ್ಯುನಿಸ್ಟರ ನಡುವೆ

ಜಾಗತೀಕರಣವನ್ನು ವಿರೋಧಿಸುವ ಎಲ್ಲಾ ಸಂಘಟನೆಗಳೊಂದಿಗೆ ಅಧಿಕೃತ ಅಥವಾ ಅನಧಿಕೃತ ವೇದಿಕೆಗಳಲ್ಲಿ ಪ್ರಜ್ಞಾಪೂರ್ವಕವಾಗಿ ಪಾಲ್ಗೊಳ್ಳುವ ಬಗ್ಗೆ ವಿಶ್ವಬ್ಯಾಂಕ್ ಈಗಾಗಲೇ ನಿರ್ಧರಿಸಿದೆ. ಜಾಗತೀಕರಣದ ವಿರುದ್ಧ ಪ್ರತಿಭಟನೆಯ ಅಲೆಯನ್ನು ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಚೌಕಟ್ಟಿನೊಳಗೆ ಅಂಕೆಯಲ್ಲಿಡುವ ಪ್ರಜ್ಞಾಪೂರ್ವಕ ಪ್ರಯತ್ನ ಇದು. ಅದೇ ಸಮಯದಲ್ಲಿ ಜನತೆಗೆ ಜಾಗತೀಕರಣ ವಿರುದ್ಧ ಒಮ್ಮೆಲೆ ಭುಗಿಲೆದ್ದು ವ್ಯವಸ್ಥೆ ಪಲ್ಲಟ ಮಾಡದಂತೆ, ಆಗಾಗ ಅದಕ್ಕೆ ಸಣ್ಣ ಗದ್ದಲ

ಸಂಘಟನೆಗಳ ಸೈದ್ಧಾಂತಿಕ ನಿಲುವುಗಳಲ್ಲಿ ಅಲ್ಲಿ ಕೆಲವು ಬದಲಾವಣೆಗಳು ಇರಬಹುದು. ಆದರೆ ಮೇಲೆ ಹೇಳಿದ್ದು ಅದರ ಸ್ಥೂಲ ಸಾರಾಂಶ.

**WSF ಗೆ ವಿದೇಶಿ ಧನಸಹಾಯದ ಪ್ರಶ್ನೆ**

WSF ಗೆ ವಿದೇಶಿ ಧನಸಹಾಯದಲ ಪ್ರಶ್ನೆ ಈ ಸಂದರ್ಭದಲ್ಲಿ ಚರ್ಚಾಸ್ಪದವಾಗಿರುವ ಇನ್ನೊಂದು ವಿಷಯ. ಸ್ವಯಂ-ಸೇವಾ ಸಂಘಟನೆಗಳಿಗೆ ಸಾಮ್ರಾಜ್ಯಶಾಹಿ ವಿದೇಶಿ ಸಂಸ್ಥೆಗಳ ಧನಸಹಾಯದ ಬಗ್ಗೆ ಸಿಪಿಐ(ಎಂ) ತನ್ನ ದನಿ ಎತ್ತುತ್ತಾ ಬಂದಿದೆ. ಬೆಳೆಯುತ್ತಿರುವ ಪ್ರಗತಿಪರ ಪ್ರಜಾಸತ್ತಾತ್ಮಕ ಚಳುವಳಿ, ಸಂಘಟನೆಗಳ ದಾರಿ ತಪ್ಪಿಸುವ / ಬಲಹೀನಗೊಳಿಸುವ ಮತ್ತು ಸಾಮ್ರಾಜ್ಯಶಾಹಿ ಅಜೆಂಡಾ ಮುಂದೊತ್ತುವ - ಪ್ರಯತ್ನ ಇಂತಹ ಧನಸಹಾಯಗಳ ಹಿಂದಿದೆ ಎಂಬುದು ಸಿಪಿಐ(ಎಂ)ನ ನಿಲುವು. ಸಾಮ್ರಾಜ್ಯಶಾಹಿ ಪ್ರತಿಭಟನಾ ಚಳುವಳಿಗಳನ್ನು NGO-ಕರಿಸುವ ಪ್ರಯತ್ನವನ್ನು ಸಿಪಿಐ(ಎಂ) ತನ್ನೆಲ್ಲಾ ಶಕ್ತಿಯಿಂದ ವಿರೋಧಿಸುತ್ತಾ ಬಂದಿದೆ. WSF ನಲ್ಲಿ ಭಾಗವಹಿಸುವ ಮೂಲಕ ಸಿಪಿಐ(ಎಂ) ಇಂತಹ ಧನಸಹಾಯದ ಬಗ್ಗೆ ತನ್ನ ವಿರೋಧ ಬಿಟ್ಟುಕೊಟ್ಟಿದೆ ಅಥವಾ ನಿಲುವು ಸಡಿಲಿಸಿದೆ ಎಂದರ್ಥವಲ್ಲ.

ಸಾಮ್ರಾಜ್ಯಶಾಹಿ ಜಾಗತೀಕರಣವನ್ನು ಬೆಳೆಸುವ ಶಕ್ತಿಗಳು WSF ಗೆ ಕೊಡುವ ಧನಸಹಾಯ ಮತ್ತು ಅದರ ಹಿಂದಿರುವ ಗೋಮುಖವ್ಯಾಘ್ರ ನೀತಿಯನ್ನು ಸಿಪಿಐ(ಎಂ) ಖಂಡಿತ ವಿರೋಧಿಸುತ್ತಿದೆ. ಇಂಡಿಯಾದಲ್ಲಿ WSF ನ ಪ್ರಕ್ರಿಯೆಯಲ್ಲೂ ಮೊದಲಿಂದಲೂ ಈ ನಿಲುವಿಗೆ ಒತ್ತಾಯಿಸುತ್ತಾ ಬಂದಿದೆ. ಮುಂಬಯಿಯಲ್ಲಿ ನಡೆಯುವ WSF ನಲ್ಲಿ ಬ್ರಿಟಿಷ್ ಸರ್ಕಾರದ DFID, ಅಮೆರಿಕನ್ ಸರ್ಕಾರದ USAID ಮತ್ತು ಫೋರ್ಡ್ ಮತ್ತು ರಾಕ್‌ಫೆಲ್ಲರ್ ಫೌಂಡೇಶನ್‌ಗಳ ಧನ ಸಹಾಯ ತೆಗೆದುಕೊಳ್ಳದಿರುವಂತೆ ಮಾಡುವುದು ಸಾಧ್ಯವಾಗಿದೆ. ಜಾಗತೀಕರಣ-ಪರವಾಗಿರುವ ಇಂಡಿಯಾದ ದೊಡ್ಡ ಕಂಪನಿಗಳಿಂದಲೂ ಧನ ಸಹಾಯ ತೆಗೆದುಕೊಳ್ಳದಂತೆ ಮಾಡುವುದೂ ಸಾಧ್ಯವಾಗಿದೆ.

WSF ನ ನಿಯಮಗಳ ಪ್ರಕಾರ, ಹೆಚ್ಚಿನ ವೆಚ್ಚ ಭಾಗವಹಿಸುವ ಸಂಘಟನೆಗಳು ಮಾಡುತ್ತವೆ. ಭಾಗವಹಿಸುವ ಹಲವು ಸ್ವಯಂಸೇವಾ ಸಂಘಟನೆಗಳು ವಿದೇಶಿ ಧನಸಹಾಯ ಪಡೆಯುವಂತಹವುಗಳು. ಆದರೆ WSF ನಡೆಸುತಿರುವ ಇಂಡಿಯಾ ಸಮಿತಿ ಇಂತಹ ಧನ

8ನೇ ಪುಟ ನೋಡಿ

## ...ರ್ಯಾಯ ಮತ್ತು ಪರಿವರ್ತನೆ




ಸೈದ್ಧಾಂತಿಕ ಸಂಘರ್ಷ WSF ನಲ್ಲಿ ಮುಂದುವರಿದಿದೆ.

**ಸ್ವಯಂ ಸೇವಾ ಸಂಘಟನೆಗಳ ಪಾತ್ರ**

WSF ನಲ್ಲಿ ದೊಡ್ಡ ಪ್ರಮಾಣದಲ್ಲಿ ಸರ್ಕಾರೇತರ ಸ್ವಯಂ - ಸೇವಾ ಸಂಘಟನೆಗಳು



ಭಾಗವಹಿಸುತ್ತಿವೆ. ಸ್ವಯಂ ಸೇವಾ ಸಂಘಟನೆಗಳಲ್ಲಿ ಎರಡು ವಿಧ - 'ಜನತಾ ಚಳುವಳಿ' ಎಂದು ಕರೆಸಿಕೊಳ್ಳುವ ಸ್ವತಂತ್ರ ಜನಸಂಘಟನೆಗಳು. ಇವುಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಸಾಮೂಹಿಕ ಸಂಘಟನೆಗಳು ಇವೆ. ಇನ್ನೊಂದು ಕಡೆ ಜಾಗತೀಕರಣ ಹೇರುವ ಪ್ರಮುಖ ಸಾಮ್ರಾಜ್ಯಶಾಹಿ ದೇಶಗಳ ಸರ್ಕಾರಗಳ ಮತ್ತು ಇತರ ಬಹುರಾಷ್ಟ್ರೀಯ ಕಂಪನಿಗಳ ಧನ ಸಹಾಯ ಪಡೆಯುವ ಸ್ವಯಂ ಸೇವಾ ಸಂಘಟನೆಗಳು. ಎರಡನೇ ರೀತಿಯ ಸಂಘಟನೆಗಳು WSF ನಲ್ಲಿ ಜಾಗತೀಕರಣದ ವಿರುದ್ಧ ಏಕೆ ಭಾಗವಹಿಸುತ್ತವೆ? ಇದರ ಹಿಂದೆ ಸೈದ್ಧಾಂತಿಕ ಕಾರಣಗಳಿವೆ.

ಮಾಡಲು ಅವಕಾಶ ಮಾಡಿಕೊಡಬೇಕು. **ಈ ಸ್ವಯಂ-ಸೇವಾ ಸಂಘಟನೆಗಳು ಸಂಘಟಿಸುವ ಜಾಗತೀಕರಣ-ವಿರೋಧಿ ಪ್ರತಿಭಟನೆಗಳು ಪ್ರೆಶರ್ ಕುಕ್ಕರ್‌ನಲ್ಲಿ ಸೇಫ್ಟಿ ವಾಲ್ವ್ ಕೆಲಸ ಮಾಡುವ ರೀತಿಯಲ್ಲದೆ, ಕುಕ್ಕರ್ ಒಡೆದುಹೋಗದಂತೆ, ಆಗಾಗ ಸ್ವಲ್ಪ ಉಗಿ ಬಿಡುತ್ತಿರುತ್ತದೆ. ಜಾಗತೀಕರಣದ - ವಿರೋಧದ ಉಗಿ ಆಗಾಗ ಬಿಡುತ್ತಿರಬೇಕು, ಬಂಡವಾಳಶಾಹಿ - ಸಾಮ್ರಾಜ್ಯಶಾಹಿಯ ಪ್ರೆಶರ್ ಕುಕ್ಕರ್ ಒಡೆದು ಹೋಗದಂತೆ!**

ಆದರೆ ಇಂತಹ ಪ್ರಯತ್ನಕ್ಕೂ ಒಂದು ಸೈದ್ಧಾಂತಿಕ ಹೂರಣ ಬೇಕಾಗುತ್ತದಲ್ಲ. ಅವರು ಜನರ ಮುಂದಿಟ್ಟಿರುವ 'ಸಿದ್ಧಾಂತ' ಸಾರಾಂಶ ಹೀಗಿದೆ: ಜಾಗತೀಕರಣಕ್ಕೆ ಬದಲಿ ಜನತೆ ಸಂಪತ್ತಿನ ಸಾಧನಗಳ ಮೇಲೆ ನೇರ ನಿಯಂತ್ರಣ ಸಾಧಿಸಿದಾಗ ಮಾತ್ರ ಸಾಧ್ಯ. ಇದಕ್ಕಾಗಿ ಇಂತಹ ಸಾಧನಗಳ ಮೇಲೆ ದೈತ್ಯ ಕಂಪನಿಗಳ ಮತ್ತು ಸರ್ಕಾರದ ನಿಯಂತ್ರಣ ಎರಡನ್ನೂ ವಿರೋಧಿಸಬೇಕು. ಸಂಸಾಧನಗಳ ಮೇಲೆ ದೈತ್ಯ ಕಂಪನಿಗಳ ನಿಯಂತ್ರಣ ವಿರೋಧಿಸುತ್ತಾ, ತಾವು ಬಂಡವಾಳಶಾಹಿಗೆ ವಿರೋಧ ಎಂದು ಫೋಸು ಕೊಡುತ್ತಾರೆ! ಸರ್ಕಾರದ ನಿಯಂತ್ರಣ ವಿರೋಧಿಸುತ್ತಾ ಸಮಾಜವಾದಿ ದೇಶಗಳಲ್ಲಿ ನಡೆದ 'ಸಮಾಜವಾದದ ಪ್ರಯೋಗಕ್ಕೆ ನಾವು ವಿರುದ್ಧ ಎನ್ನುತ್ತಾರೆ. ಒಟ್ಟಾರೆಯಾಗಿ ಜಾಗತೀಕರಣವಿರೋಧ ಚಳುವಳಿ ಸಮಾಜವಾದಿ ಬದಲಿಯತ್ತ ಹೊರಳದಂತೆ ಮಾಡುವುದು - ಈ ಸಿದ್ಧಾಂತದ ಹೂರಣ. ಹಲವು ಸ್ವಯಂಸೇವಾ

### ಕಮ್ಯುನಿಸ್ಟರು ಹಿಂದೆ ನಿಂತು ಟೀಕಿಸುತ್ತಾ ಕೂಡಬೇಕೆ?

ಇಲ್ಲಿ ಮಾವೋ ಪೂರ್ತಿ ಬೇರೆಯಾದ ಸಂದರ್ಭದಲ್ಲಿ ಹೇಳಿದ್ದ ಮಾತುಗಳು ಪ್ರಸ್ತುತ ಎನಿಸುತ್ತವೆ. 'ಮಾವೋ ನಮ್ಮ ಚೇರ್‌ಮನ್' ಎಂಬ ಮಂತ್ರ ಜಪಿಸುತ್ತಿದ್ದ ನಮ್ಮ ಎಡ-ಮಿತ್ರರು ಇದನ್ನು ಮನನ ಮಾಡುವುದು ಒಳ್ಳೆಯದು -

"ಈಗಿನ ರೈತ ಚಳುವಳಿ ಮಹಾನ್ ಘಟನೆ. ಸ್ವಲ್ಪ ಸಮಯದಲ್ಲೇ ಚೀನಾದ ದಕ್ಷಿಣ, ಮಧ್ಯ ಮತ್ತು ಉತ್ತರದ ಪ್ರಾಂತ್ಯಗಳಲ್ಲಿ ಕೋಟ್ಯಾಂತರ ರೈತರು ಬಿರುಗಾಳಿಯಂತೆ ಎದ್ದು ನಿಲ್ಲುತ್ತಿದ್ದಾರೆ. ಈ ಬಿರುಗಾಳಿ ಎಷ್ಟು ಪ್ರಬಲ ಮತ್ತು ಹಿಂಸಾತ್ಮಕವಾಗಿರುತ್ತದೆಂದರೆ, ವಿಶ್ವದ ಯಾವುದೇ ಶಕ್ತಿ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ. ಅವರನ್ನು ಕಟ್ಟಿಹಾಕಿರುವ ಎಲ್ಲಾ ಬಂಧನಗಳನ್ನು ಕಿತ್ತೊಗೆದು, ರೈತರು ವಿಮೋಚನೆಯ ಹಾದಿಯತ್ತ ಧುಮುಕುತ್ತಾರೆ. ಸಾಮ್ರಾಜ್ಯಶಾಹಿಗಳನ್ನು, ಯುದ್ಧಕೋರರು, ಭ್ರಷ್ಟ ಅಧಿಕಾರಿಗಳು, ಸ್ಥಳೀಯ ಕ್ರೂರ ಯಜಮಾನರು -. ಎಲ್ಲರನ್ನು ಅವರ ಗೋರಿಗಳಿಗೆ ಅಟ್ಟುತ್ತಾರೆ. ಪ್ರತಿಯೊಬ್ಬ ಕ್ರಾಂತಿಕಾರಿ ಪಕ್ಷ ಮತ್ತು ಸಂಗಾತಿಯ ಪರೀಕ್ಷೆಯ ಕಾಲ ಇದು. ಈ ಪರೀಕ್ಷೆ ಜನ ನಿಮ್ಮನ್ನು ಅಂಗೀಕರಿಸುತ್ತಾರೋ ಅಥವಾ ತಿರಸ್ಕರಿಸುತ್ತಾರೋ ಎಂಬುದನ್ನು ನಿರ್ಧರಿಸುತ್ತದೆ. ಪ್ರತಿಯೊಬ್ಬರ ಮುಂದೆ ಮೂರು ಆಯ್ಕೆಗಳಿವೆ - ರೈತರ ಜಾಥಾದ ಮುಂಚೂಣಿಯಲ್ಲಿ ಅವರ ನಾಯಕತ್ವ ವಹಿಸುವುದು; ಅವರ ಹಿಂದೆ ಕೈತೋರಿಸುತ್ತಾ ಟೀಕಿಸುತ್ತಾ ನಡೆಯುವುದು, ಅವರ ಹಾದಿಯಲ್ಲಿ ನಿಂತು ವಿರೋಧಿಸುವುದು. ಪ್ರತಿಯೊಬ್ಬ ಈ ಆಯ್ಕೆ ಮಾಡಲೇಬೇಕಾಗುತ್ತದೆ."

ಕ್ರಾಂತಿಪೂರ್ವ ಚೀನಾದ ಮತ್ತು ಇಂದಿನ ಜಾಗತೀಕರಣ-ವಿರೋಧಿ ಚಳುವಳಿಯ ಸಂದರ್ಭಗಳು ಬಹಳ ಭಿನ್ನವಾಗಿವೆ. ನಿಜ. ಆದರೆ ಕೇಂದ್ರ ಪ್ರಶ್ನೆ ಮತ್ತು ಆಯ್ಕೆಯಲ್ಲಿ ಸಾಮ್ಯವಿದೆ. ಜನ ಮಹಾನ್ ಜಾಗತೀಕರಣ-ವಿರೋಧಿ ಚಳುವಳಿಯಲ್ಲಿ ಧುಮುಕುತ್ತಿರುವಾಗ ಕಮ್ಯುನಿಸ್ಟರು ಹಿಂದೆ ನಿಂತು ಟೀಕಿಸುತ್ತಾ ಕೂರಬೇಕೆ?

## ಸೈದ್ಧಾಂತಿಕ ಸಮರಕ್ಕೆ ಮುನ್ನಡೆಯೋಣ....


ಈ ಸೈದ್ಧಾಂತಿಕ ಸಮರಕ್ಕೆ ಕಮ್ಯುನಿಸ್ಟರು ಮುನ್ನಡೆಯಬೇಕಾಗಿದೆ. ನಿಜವಾಗಿಯೂ ಹೇಳಬೇಕಾದರೆ, ಸಾಮಾಜಿಕ ಚಟುವಟಿಕೆ ಮತ್ತು ಸಂಸಾಧನೆಗಳ ಮೇಲೆ ಜನರ ನಿಜವಾದ ಮತ್ತು ಸಾರ್ವಭೌಮ ನಿಯಂತ್ರಣ ಇರಬೇಕು ಎಂದು ಕಮ್ಯುನಿಸ್ಟರ ನಿಲುವು ಕೂಡ. ಆದರೆ ಯಾವ ಸಾಮಾಜಿಕ, ಆರ್ಥಿಕ ವ್ಯವಸ್ಥೆ ಇಂತಹ ನಿಯಂತ್ರಣ ಸಾಧಿಸಲು ಅಗತ್ಯ ಪರಿಸ್ಥಿತಿ ನಿರ್ಮಾಣ ಮಾಡುತ್ತದೆ. ಜನತಾ ಶಕ್ತಿ ನಿಯಂತ್ರಣ ನಿಜವಾಗಿ ಸಾಧ್ಯವಾಗಿಸಲು ಸಮಾಜವಾದಿ ವ್ಯವಸ್ಥೆ ಅಗತ್ಯ. ಆದ್ದರಿಂದ ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ಸಮಾಜವಾದವೇ ನಿಜವಾದ ಬದಲಿ.

20 ನೇ ಶತಮಾನದ ಸಮಾಜವಾದದ ಪ್ರಯೋಗಗಳು ಅನುಭವ ಏನು ಎಂಬುದನ್ನು ಚರ್ಚೆ, ಸಂವಾದಗಳ ಮೂಲಕ ಕಮ್ಯುನಿಸ್ಟರು ಗಂಭೀರವಾಗಿ ಪರಿಶೀಲಿಸಬೇಕು. 20ನೇ ಶತಮಾನದ ಸಮಾಜವಾದದ ಅನುಭವಗಳು - ಯಾವುದೇ ರೀತಿಯಲ್ಲಿ ಸಮಾಜವಾದಿ ಆದರ್ಶದ ಅನಿವಾರ್ಯತೆ ಮತ್ತು ಅಗತ್ಯತೆಗಳನ್ನು ಅಲ್ಲಗಳೆಯುವುದಿಲ್ಲ. ಇಂದಿನ ವಿಶ್ವ ವಿದ್ಯಮಾನಗಳು ಹಿಂದೆ ರೋಸಾ ಲಕ್ಸಂಬರ್ಗ್ ಮತ್ತು ಇಂದು ಫಿಡೆಲ್ ಕ್ಯಾಸ್ಟ್ರೋ ಹೇಳಿಕೆಯನ್ನು ವ್ಯಕ್ತಗೊಳಿಸುತ್ತಿವೆ. ಆ ಹೇಳಿಕೆ ಮಾನವ ಸಮುದಾಯದ ಮುಂದಿರುವುದು ಎರಡೇ ಆಯ್ಕೆ - ಸಮಾಜವಾದ ಅಥವಾ ಬರ್ಬರತೆ.

ಡಬ್ಲ್ಯುಎಸ್‌ಎಫ್ ನ ಮುಕ್ತ ವೇದಿಕೆಯ ಮೇಲೆ ಇಂತಹ ಸೈದ್ಧಾಂತಿಕ ಸಮರಕ್ಕೆ ನಾವು ಕಮ್ಯುನಿಸ್ಟರು ಮುನ್ನಡೆಯಬೇಕಾಗಿದೆ. ಕಮ್ಯುನಿಸ್ಟೇತರ ಜಾಗತೀಕರಣ - ವಿರೋಧಿಗಳು (ಸೋಶಲಿಸ್ಟರು ಇರಬಹುದು, ಸ್ವಯಂಸೇವಾ ಸಂಘಟನೆಗಳು) ಈ ಸೈದ್ಧಾಂತಿಕ ಚರ್ಚೆಯನ್ನು ಮಸುಕುಗೊಳಿಸಲು ಪ್ರಯತ್ನಿಸುತ್ತಾರೆ. ಕಮ್ಯುನಿಸ್ಟರು ಈ ಚರ್ಚೆಯಲ್ಲಿ ಧುಮುಕಿ ಭಾಗವಹಿಸದಿದ್ದರೆ ಜಾಗತೀಕರಣ - ವಿರೋಧಿ ಜನಸಮೂಹಗಳ ಮಧ್ಯೆ ಸೈದ್ಧಾಂತಿಕ ಗೊಂದಲ ಬಿತ್ತಲು ಅನುವು ಮಾಡಿಕೊಟ್ಟಂತಾಗುತ್ತದೆ. ಸಿಪಿಐ(ಎಂ) ಈ ಸೈದ್ಧಾಂತಿಕ ಸಮರದಲ್ಲಿ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಇಚ್ಛಿಸುವುದಿಲ್ಲ.

ಯುರೋಪು ಮತ್ತು ಉತ್ತರ ಅಮೇರಿಕದ ಜಾಗತೀಕರಣ ವಿರೋಧಿ ಚಳುವಳಿಯಲ್ಲಿ ಇನ್ನೊಂದು 'ಟ್ರೆಂಡ್' ಕಂಡಿದೆ. ಅದು 'ಅರಾಜಕತಾವಾದಿ' ಗುಂಪುಗಳ ಅರ್ಥಹೀನ ಹಿಂಸಾಚಾರವನ್ನು ಸರ್ಕಾರ ಜಾಗತೀಕರಣ-ವಿರೋಧಿ ಚಳುವಳಿಯ ಮೇಲೆ ದಮನಚಕ್ರ ಹೇರಲು ಬಳಸಿಕೊಂಡಿದೆ. ಜಾಗತೀಕರಣ - ವಿರೋಧಿ ಚಳುವಳಿ ಅರಾಜಕತಾವಾದಿ' ಗಳಿಂದ ಪ್ರತ್ಯೇಕಗೊಳ್ಳುವುದರ ಜತೆ ಇದಕ್ಕೆ ಪರಿಹಾರ ಕಂಡಿದೆ. ಜುಲೈ 2003 ರಲ್ಲಿ ಗ್ರೀಸ್‌ನಲ್ಲಿ ಇದರ ಒಳ್ಳೆ ಉದಾಹರಣೆ ಕಂಡುಬಂತು.





***ಕರ್ನಾಟಕದ ಕೆಲವೆಡೆ ನಕ್ಸಲೀಯರ ಚಟುವಟಿಕೆಗಳು ಚಿಗುರೊಡೆಯುತ್ತಿವೆ. ಕಣ್ಣು ಕೋರೈಸಿ ತಣ್ಣಗಾಗುವ ಈ ವಾದ ಒಳ ಹೊರಗಿನ ಹೂರಣ, ನಡೆದು ಬಂದ ಹಾದಿ, ಸನ್ನಿವೇಶಗಳನ್ನು ಮತ್ತು ನಕ್ಸಲೀಯರ ಮೇಲೆ ಸರ್ಕಾರ-ಪ್ರಭುತ್ವದ ಎನ್‌ಕೌಂಟರ್‌ಗಳ ಧಾಳಿ ಕುರಿತ ನಿಲುವನ್ನು ಹಿಂದಿನ ಲೇಖನದಲ್ಲಿ ವಿವರಿಸಲಾಗಿತ್ತು. ಈಗ ಭಾರತದ ಕ್ರಾಂತಿಕಾರಿ ಪರಿವರ್ತನೆಗೆ ಹೋರಾಡಬೇಕಾದಲ್ಲಿ ಭಾರತೀಯ ಸಮಾಜದ ನಿರ್ದಿಷ್ಟ-ವಾಸ್ತವಿಕ ಸ್ಥಿತಿಯ ವಿಶ್ಲೇಷಣೆ ಅತ್ಯಗತ್ಯ. ಈ ಬಗ್ಗೆ ನಕ್ಸಲ್‌ವಾದ ಏನು ಹೇಳುತ್ತದೆ? ಅದು ಹೇಗೆ ತಪ್ಪಾದದ್ದು ಎಂಬುದರ ಬಗ್ಗೆ ಕಳೆದ ಸಂಚಿಕೆಯಲ್ಲಿ ಚರ್ಚಿಸಿದ್ದೆವು ಅದರ ಮುಂದುವರಿದ ಭಾಗ***

# ‘ಜನತಾಯುದ್ಧ’ವೆಂಬ ವ್ಯಯುಕ್ತಿಕ ಭಯೋತ್ಪಾದನೆಯ ಹಾದಿ

**ಜಿ.ಎನ್.ನಾಗರಾಜ್**

ನಕ್ಸಲೀಯರು ಈ ತಾಳ್ಮೆಯ, ನಿರಂತರವಾದ ಕೆಲಸ ಮಾಡಲು ನಿರಾಕರಿಸುತ್ತಾರೆ ಎಂಬುದನ್ನು ಈಗಾಗಲೇ ಹೇಳಲಾಗಿದೆ. ಹಾಗಾದರೆ ಭಾರತದ ಕ್ರಾಂತಿಕಾರಿ ಪರಿವರ್ತನೆಯನ್ನು ಸಾಧಿಸಲು ಅವರು ಹಿಡಿದಿರುವ ಮಾರ್ಗವೇನು? ನಕ್ಸಲೀಯರಲ್ಲಿ ಒಂದು ಪ್ರಧಾನ ಗುಂಪಾದ ಪೀಪಲ್ಸ್ ವಾರ್ ಗ್ರೂಪ್(PWG) ಎಂಬುದರ ಹೆಸರೇ ಹೇಳುವಂತೆ “ಜನತಾ ಯುದ್ಧ” ವೊಂದೇ ಮಾರ್ಗ ಎಂಬುದು ಅವರ ಘೋಷಣೆ. ಸಶಸ್ತ್ರ ಕ್ರಾಂತಿ ಎಂದು ಅದನ್ನು ಕರೆದುಕೊಳ್ಳುತ್ತಾರೆ. ಇದೊಂದೇ ಭಾರತದ ಮಾರ್ಗ ಎಂದು ನಂಬಿರುವ ಅವರು ಅದಕ್ಕಾಗಿಯೇ ಜನರನ್ನು ವ್ಯಾಪಕವಾಗಿ ಸಂಘಟಿಸುವ ಅವರಲ್ಲಿ ಎಚ್ಚರ ಮೂಡಿಸುವ ಸಾಮೂಹಿಕ ಸಂಘಟನೆಗಳ ಮೂಲಕ ಜನರೊಂದಿಗೆ ಸಂಬಂಧ ಬೆಸೆದುಕೊಳ್ಳುವ ಕೆಲಸವನ್ನು ಹಾಗೂ ಸಂಸತ್ತು ವಿಧಾನಸಭೆ, ಪಂಚಾಯತ್ ರಾಜ್ಯದ ಚುನಾಯಿತ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವ, ಚುನಾವಣೆಗಳಲ್ಲಿ ಪಾಲ್ಗೊಳ್ಳುವ ಮೂಲಕ ಜನರಲ್ಲಿ ಎಚ್ಚರ ಮೂಡಿಸುವ ಸಾಧನವಾಗಿ ಅವುಗಳನ್ನು ಬಳಸಿಕೊಳ್ಳುವ ಸಾಧ್ಯತೆಗಳನ್ನು ಅನೇಕ ನಕ್ಸಲ್‌ವಾದಿ ಗುಂಪುಗಳು ನಿರಾಕರಿಸುತ್ತವೆ.

**ಲಿನ್‌ಪಿಯಾವೋ ಎಂಬ ಕ್ರಾಂತಿ ವಿರೋಧಿಯ ಘೋಷಣೆ**

ಪೀಪಲ್ಸ್‌ವಾರ್ ಅಥವಾ ಜನತಾ ಯುದ್ಧವೆಂಬುದು ಚೀನಾದಲ್ಲಿ ಜನತೆಯ ಅತ್ಯಂತ ದ್ವೇಷಕ್ಕೊಳಗಾದ ಲಿನ್‌ಪಿಯಾವೋ ಎಂಬ ಕ್ರಾಂತಿವಿರೋಧಿಯಿಂದ 60 ರ ದಶಕದಲ್ಲಿ ಮಂಡಿತವಾದ ಘೋಷಣೆ. ಇದನ್ನೇ ಮಾವೋವಾದದ ಸಾರ ಎಂಬಂತೆ ಭಾರತದ ನಕ್ಸಲ್‌ವಾದಿ ಗಳು ಸ್ವೀಕರಿಸಿದರು. ಭಾರತದ ಇಂದಿನ ಸಮಾಜರಚನೆಯ ಬಗ್ಗೆ ವೈಜ್ಞಾನಿಕ ಅನ್ವೇಷಣೆ ನಡೆಸುವ ಹಾಗೂ ವಾಸ್ತವಿಕ ತೀರ್ಮಾನಗಳಿಗೆ ಬರುವ ಬದಲು ಚೀನಾದ ಕ್ರಾಂತಿಪೂರ್ವ ಸಮಾಜದ ರಚನೆಯನ್ನೇ ಭಾರತಕ್ಕೂ ಕಾಪಿ ಹೊಡೆದು ಯಾಂತ್ರಿಕವಾಗಿ ಅನ್ವಯಿಸುವಂತೆ ತಪ್ಪು ಘೋಷಣೆಯನ್ನೇ ಭಾರತಕ್ಕೂ ಕಾಪಿ ಹೊಡೆದು ಅನ್ವಯಿಸುವ ದುಸ್ಸಾಹಸವನ್ನು ಪೀಪಲ್ಸ್‌ವಾರ್ ಗುಂಪಿನವರು ಮತ್ತು ಇನ್ನೂ ಕೆಲವು ನಕ್ಸಲ್‌ವಾದಿ ಗುಂಪುಗಳು ಇಂದಿಗೂ ಪ್ರಧಾನವಾಗಿ ಮಾಡುತ್ತಿದ್ದಾವೆ.

‘ಜನತಾಯುದ್ಧ’ ಎಂಬ ಈ ಲಿನ್‌ಪಿಯಾವೋ ಘೋಷಣೆಯನ್ನು ಭಾರತಕ್ಕೆ ಅನ್ವಯಿಸುವಾಗ ನಕ್ಸಲೀಯ ನಾಯಕರಲ್ಲಿ ಪ್ರಮುಖನಾದ ಚಾರು ಮುಜುಂದಾರ್ ವ್ಯೆಯುಕ್ತಿಕ ಭಯೋತ್ಪಾದನೆಯ ತಂತ್ರವೆಂದು ಅರ್ಥೈಸಿದರು. ಆಳುವ ವರ್ಗಗಳ ವ್ಯೆಯುಕ್ತಿಕ ಪ್ರತಿನಿಧಿಗಳನ್ನು ಹತ್ಯೆ ಮಾಡುವ ಮೂಲಕ ಅವರಲ್ಲಿ ಭಯ ಹುಟ್ಟಿಸುವುದು ಎಂಬುದು ಅವರ ವ್ಯಾಖ್ಯಾನ. ಇದು ಈಗ ಕೆಲವು ಪ್ರದೇಶದ ಕೆಲವು ಭೂಮಾಲಕ ಶಾಸಕರ, ಅಧಿಕಾರಿಗಳ ಹತ್ಯೆ ಮಾಡುವುದೇ ಕ್ರಾಂತಿಕಾರಿ ಕೆಲಸ ಎಂಬಂತೆ ಪರಿವರ್ತಿತವಾಗಿದೆ.

ಜನಸಮುದಾಯದ ಸಂಘಟನೆ ಹೋರಾಟಗಳ ಮೂಲಕ ಆಳುವ ವರ್ಗವನ್ನು ಆಳುವ ವರ್ಗದ ಹಿಡಿತದಲ್ಲಿರುವ ಪ್ರಭುತ್ವವನ್ನು ಇಡಿಯಾಗಿ ವಶಪಡಿಸಿಕೊಳ್ಳುವುದು ಅದು ಮಾತ್ರವೇ ಕ್ರಾಂತಿಕಾರಿ ಪರಿವರ್ತನೆಯ ದಾರಿ ಎನ್ನುವುದಕ್ಕೆ ಬದಲಾಗಿ ವೈಯಕ್ತಿಕ ಭಯೋತ್ಪಾದನೆಯ ಮೂಲಕ ಈ ವ್ಯವಸ್ಥೆಯನ್ನು ಅಲುಗಾಡಿಸಲಾಗುವುದಿಲ್ಲ. ಹತ್ಯೆಯಾದ ವ್ಯಕ್ತಿಗಳ ಜಾಗಕ್ಕೆ ಮತ್ತೊಬ್ಬ ವ್ಯಕ್ತಿ ಬರುತ್ತಾನೆ ಮತ್ತು ಇಡೀ ವ್ಯವಸ್ಥೆ ಈ ಹತ್ಯೆಗಳನ್ನೇ ಎತ್ತಿ ತೋರಿಸಿ ಮತ್ತಷ್ಟು ವ್ಯಗ್ರವಾಗಿ ಜನ ಸಮುದಾಯದ ಮೇಲೆ ಎರಗುತ್ತದೆ. ಆಳುವ ವರ್ಗ ಪ್ರಭುತ್ವದ ಕ್ರೌರ್ಯವನ್ನು ಎದುರಿಸಲು ಇನ್ನೂ ಸಜ್ಜಾಗದ, ಪ್ರಭುತ್ವದ ಸ್ವರೂಪವನ್ನು ಅರಿತುಕೊಳ್ಳದ ಅಸಹಾಯಕ ಜನತೆಯ ಮೇಲೆ ಪೊಲೀಸರು, ಸೈನ್ಯ, ಆಳುವ ವರ್ಗಗಳ ದಮನ ಎರಗುತ್ತದೆ. ಆಗ ತಾನೇ ಮೊಳೆಯುತ್ತಿರುವ ಚಳುವಳಿಯನ್ನು ಹೊಸಕಿ ಹಾಕುತ್ತದೆ. ಜನಸಮುದಾಯದ ಪ್ರಜ್ಞೆ ಎಚ್ಚರಗೊಳ್ಳುವ ಮತ್ತಷ್ಟು ಎತ್ತರಕ್ಕೇರುವ ಬದಲಾಗಿ ಜನತೆ ಭಯಭೀತ ರಾಗುತ್ತಾರೆ. ಕಂಗಾಲಾಗುತ್ತಾರೆ. ಜನತೆಯ ಸಂಘಟನೆಯಾಗುವುದಕ್ಕೆ ಬದಲಾಗಿ ವಿಘಟನೆಯಾಗುತ್ತದೆ.

> **ಜನಸಮುದಾಯದ ಸಂಘಟನೆ ಹೋರಾಟಗಳ ಮೂಲಕ ಆಳುವ ವರ್ಗವನ್ನು ಆಳುವ ವರ್ಗದ ಹಿಡಿತದಲ್ಲಿರುವ ಪ್ರಭುತ್ವವನ್ನು ಇಡಿಯಾಗಿ ವಶಪಡಿಸಿಕೊಳ್ಳುವುದು ಅದು ಮಾತ್ರವೇ ಕ್ರಾಂತಿಕಾರಿ ಪರಿವರ್ತನೆಯ ದಾರಿ ಎನ್ನುವುದಕ್ಕೆ ಬದಲಾಗಿ ವೈಯಕ್ತಿಕ ಭಯೋತ್ಪಾದನೆಯ ಮೂಲಕ ಈ ವ್ಯವಸ್ಥೆಯನ್ನು ಅಲುಗಾಡಿಸಲಾಗುವುದಿಲ್ಲ.**

ವೈಯಕ್ತಿಕ ಹತ್ಯೆಗಳ ಮೂಲಕ ಭಯೋತ್ಪಾದನೆ ಕ್ರಾಂತಿಕಾರಿ ಚಳುವಳಿಯನ್ನು ವಿಘಟಿಸುವ ಮೂಲಕ ಹಿಂದೂಡುತ್ತದೆ. ಹೀಗೆ ಕ್ರಾಂತಿಕಾರಿ ಚಳುವಳಿಗೆ ಬಹಳ ಹಾನಿಯನ್ನುಂಟುಮಾಡುತ್ತದೆ. ಅಷ್ಟೇ ಅಲ್ಲ ಜನರನ್ನು ಕ್ರಿಯಾಶೀಲಗೊಳಿಸುವ ಬದಲಾಗಿ ಅವರನ್ನು ಪ್ರೇಕ್ಷಕರನ್ನಾಗಿ ಮಾಡುತ್ತದೆ. ಈ ಬಗ್ಗೆ ವಿಶ್ವದಾದ್ಯಂತ ಅನೇಕ ಗೆರಿಲ್ಲಾ ಹೋರಾಟಗಳನ್ನು ಸಂಘಟಿಸಿದ, ಯಶಸ್ಸು ಗಳಿಸಿದ ಅಪಾರ ಅನುಭವವುಳ್ಳ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಅನುಭವವನ್ನು ತೆಲಂಗಾಣ ಹೋರಾಟದ ಅಪ್ರತಿಮ ನಾಯಕರಾದ ಕಾಂ. ಪಿ.ಸುಂದರಯ್ಯ ಹಾಗೂ ಎಂ.ಬಸವ ಪುನ್ನಯ್ಯನವರು ಈ ರೀತಿ ಸಂಗ್ರಹಿಸಿದ್ದಾರೆ.

ವೈಯಕ್ತಿಕ ಭಯೋತ್ಪಾದನೆಯು, ಪಾಳೇಗಾರಿ ಶೋಷಣೆಯ ಮತ್ತು ಜನತೆಯ ಮೇಲೆ ದಬ್ಬಾಳಿಕೆ ನಡೆಸುವ ಆಡಳಿತವನ್ನು ನಾಶ ಮಾಡುವ ಉದ್ದೇಶವನ್ನು ಹೊಂದಿರದೆ, ನಿರ್ದಿಷ್ಟ ವ್ಯಕ್ತಿಗಳನ್ನು ನಾಶ ಮಾಡುವುದು ಅದರ ಉದ್ದೇಶವಾಗಿರುತ್ತದೆ.

ವೈಯಕ್ತಿಕ ಭಯೋತ್ಪಾದನೆಯನ್ನು ಭಯೋತ್ಪಾದಕ ವ್ಯಕ್ತಿಗಳು ಅಥವಾ ಭಯೋತ್ಪಾದಕರ ತಂಡಗಳು ಮಾಡುತ್ತವೆ ಹಾಗೂ ಅವುಗಳು ಜನಸಮೂಹಗಳಿಂದ ಪ್ರತ್ಯೇಕವಾಗಿದ್ದು ಕಾರ್ಯಾಚರಣೆ ಮಾಡುತ್ತವೆ.

ವೈಯಕ್ತಿಕ ಭಯೋತ್ಪಾದನೆಯು “ಆಡಳಿತದ ವೈಯಕ್ತಿಕ ಪ್ರತಿನಿಧಿಗಳನ್ನು ನಾಶ ಮಾಡುವ ಮೂಲಕ ಆಡಳಿತವನ್ನು ನಾಶ ಮಾಡಲು ಸಾಧ್ಯವಿದೆ ಎಂಬ ಹಾಗೂ ಆಡಳಿತದ ಅಸ್ತಿತ್ವವಲ್ಲ, ಆಡಳಿತದ ಅತ್ಯಂತ ಕೆಟ್ಟ ಪ್ರತಿನಿಧಿಗಳೇ ಮುಖ್ಯ ಪಿಡುಗು ಮತ್ತು ನಿರ್ದಿಷ್ಟವಾಗಿ ಅವರನ್ನು ನಾಶ ಮಾಡುವುದು ಅಗತ್ಯವಿದೆ ಎಂಬ ಅಪಾಯಕಾರಿ ಭ್ರಮೆಯೊಂದನ್ನು ಜನಸಮೂಹಗಳ ಮನಸ್ಸಿನಲ್ಲಿ ನಿರ್ಮಿಸುತ್ತದೆ. ವೈಯಕ್ತಿಕ ಭಯೋತ್ಪಾದನೆಯಿಂದ ನಿರ್ಮಿಸಲಾಗಿರುವ ಇಂತಹ ಭಾವನೆಯು ಆಡಳಿತದ ವಿರುದ್ಧ ಜನಸಮೂಹಗಳ ದಾಳಿಯನ್ನು ದುರ್ಬಲಗೊಳಿಸಿ ಆ ಮೂಲಕ ಜನತೆಯ ವಿರುದ್ಧ ಸರಕಾರದ ಹೋರಾಟಕ್ಕೆ ಅನುಕೂಲ ಮಾಡಿಕೊಡಬಹುದೆಂಬುದು ಸ್ಪಷ್ಟವಾಗಿದೆ”.

ವೈಯಕ್ತಿಕ ಭಯೋತ್ಪಾದನೆಯ ಸಾಮೂಹಿಕ ಚಳುವಳಿಯ ಪಾತ್ರವನ್ನು ಅತಿಯಾಗಿ ಕಡಿಮೆ ಮಾಡುತ್ತದೆ ಹಾಗೂ ಭಯೋತ್ಪಾದಕರ ಪಾತ್ರವನ್ನು ಅಷ್ಟೇ ಅತಿಯಾಗಿ ಉತ್ಪ್ರೇಕ್ಷೆ ಮಾಡಿ, ತಮ್ಮದೇ ಶಕ್ತಿಗಳ ಮೂಲಕ ಅವರು ಜನತೆಯ ವಿಮೋಚನೆಯನ್ನು ಗಳಿಸುವ ಸಾಮರ್ಥ್ಯ ಹೊಂದಿದ್ದಾರೆಂದು ತೋರಿಸಲು ಪ್ರಯತ್ನಿಸಲಾಗುತ್ತದೆ.

ಮುಖ್ಯ ಪಿಡುಗು ಆಡಳಿತವಲ್ಲ, ವ್ಯಕ್ತಿಗಳು ಎಂಬ ಹಾಗೂ ಇನ್ನೂ ಕೆಲವರನ್ನು ನಾಶ ಮಾಡಿದರೆ ಆಡಳಿತವನ್ನು ಮುಗಿಸಿಬಿಡಬಹುದು ಎಂಬ ಭ್ರಮೆಯನ್ನು ವೈಯಕ್ತಿಕ ಭಯೋತ್ಪಾದನೆಯು ಹುಟ್ಟಿಸುತ್ತದೆ. ಜನ ಸಮೂಹಗಳು ಇದರಿಂದ ಯಾವ ತೀರ್ಮಾನಕ್ಕೆ ಬರಬಹುದು? ಈ ರೀತಿಯ ಭಯೋತ್ಪಾದನೆಯ ಸಹಾಯದಿಂದ ದೀರ್ಘ ಹೋರಾಟದ ನಂತರ ಆಡಳಿತವನ್ನು ನಾಶ ಮಾಡಲು ಸಾಧ್ಯವಿದೆಯೆಂದು ಅವರು ತಿಳಿದುಕೊಳ್ಳಬಹುದು. ರೈತರು ಅಂತಹ ತೀರ್ಮಾನಗಳಿಗೆ ಬಂದರೆ ಅವರು ಹೇಳಬಹುದು “ಆಡಳಿತದ ವಿರುದ್ಧ ಹೋರಾಟಗಳನ್ನು ಬೆಳೆಸುವುದರಿಂದ ಪ್ರಯೋಜನವಿಲ್ಲ. ಆ ಕೆಲಸವನ್ನು ನಮ್ಮ ಉಜ್ವಲ ಭಯೋತ್ಪಾದಕರ್ರು ಮಾಡಿಯಾರು”. ಅಂತಹ ಭಾವನೆಗಳು ಆಡಳಿತದ ವಿರುದ್ಧ ಜನ ಸಮೂಹಗಳ ದಾಳಿಗಳನ್ನು ದುರ್ಬಲಗೊಳಿಸುತ್ತವೆ. ಆದುದರಿಂದ, ಅದು ಹಾನಿಕಾರಿ ಮತ್ತು ಅಪಾಯಕಾರಿ.

“ಪ್ರಧಾನ ಶಕ್ತಿಯು ವೀರ ಕ್ರಾಂತಿಕಾರಿಗಳಲ್ಲದೆ, ಜನ ಸಮೂಹಗಳಲ್ಲಿ ಅಲ್ಲ, ಎಂಬ ನಂಬಿಕೆಯನ್ನು ವೈಯಕ್ತಿಕ ಭಯೋತ್ಪಾದನೆಯು ಸೃಷ್ಟಿಸುತ್ತದೆ. ವೀಕ್ಷಣೆ ಮತ್ತು ಹರ್ಷೋದ್ಗಾರವು ಜನ ಸಮೂಹಗಳ ಪಾತ್ರವಾಗುತ್ತದೆ. ಅದರ ಅರ್ಥ, ನಿರ್ಲಿಪ್ತತೆಯನ್ನು ಬೆಳೆಸುವುದು. ಜನತೆಯ ವಿಮೋಚನೆಯನ್ನು ಜನತೆ ತಾವಾಗಿಯೇ ಗಳಿಸಬೇಕೆಂದು ಮಾರ್ಕ್ಸ್ ಮತ್ತು ಎಂಗೆಲ್ಸರು ಕಲಿಸಿದ್ದಾರೆ. ಅದನ್ನೇ ನೀವು ಅವರ ಹತ್ತಿರ ಹೇಳಬೇಕು. ವೈಯಕ್ತಿಕ ಭಯೋತ್ಪಾದನೆಯಿಂದ ವಿರುದ್ಧ ಪರಿಣಾಮಗಳು ಉಂಟಾಗುತ್ತವೆ. ಜನಸಮೂಹಗಳು ಭಯೋತ್ಪಾದಕರನ್ನು ವೀರರೆಂದೂ ವಿಮೋಚಕರೆಂದೂ ನೋಡುತ್ತವೆ.

“ಕ್ರಾಂತಿಯು ಇಳಿಮುಖವಾಗುವಾಗ ವೈಯಕ್ತಿಕ ಭಯೋತ್ಪಾದನೆಯ ತತ್ವವು ಮುಂದಕ್ಕೆ ಬರುತ್ತದೆ. ಅದು ಚಳುವಳಿಯ ದೌರ್ಬಲ್ಯವನ್ನು ಪ್ರತಿಬಿಂಬಿಸುತ್ತದೆ. ಕ್ರಾಂತಿಕಾರಿ ಚಳುವಳಿಯು ಮೇಲೇರುವಾಗ ಜನಸಮೂಹಗಳು ತಾವಾಗಿಯೇ ಮೇಲಕ್ಕೆ ಏರುತ್ತವೆ ಹಾಗೂ ವೈಯಕ್ತಿಕ ಭಯೋತ್ಪಾದನೆಯು ದಿಗಂತದಿಂದ ಕಣ್ಮರೆಯಾಗುತ್ತದೆ. ಪ್ರತಿ ಸಂಗಾತಿಯು ಅದನ್ನು ನೆನಪಿನಲ್ಲಿಡಬೇಕು.

**(ಸಶೇಷ)**

# ವಿಶ್ವ ಸಾಮಾಜಿಕ ವೇದಿಕೆ ಸಮಾವೇಶ.......

ಸಹಾಯ ಪಡೆಯುತ್ತಿಲ್ಲ. WSF ನಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳು, ವಿವಿಧ ಸಂಸಾಧನ ಮೂಲಗಳ ವಿನಿಯೋಗ - ಇವೆಲ್ಲದರ ಸಂದರ್ಭದಲ್ಲಿ ಕೆಲವು ಸಾಮ್ರಾಜ್ಯಶಾಹಿ ಸಂಘಟನೆಗಳು ಇಡೀ WSF ಹಿಡಿಯುವ ಹಾದಿಯನ್ನು ನಿರ್ದೇಶಿಸುವ ಅಥವಾ ದಾರಿ ತಪ್ಪಿಸುವ ಸಾಧ್ಯತೆ ಇಲ್ಲ ಎಂಬುದು ಸಿಪಿಐ(ಎಂ)ನ ಅಭಿಪ್ರಾಯ. ಸಿಪಿಐ(ಎಂ) ಚಳುವಳಿ, NGO-ಕರಣ ಮತ್ತು ವಿದೇಶಿ ಧನ ಸಹಾಯದ ಬಗ್ಗೆ ತನ್ನ ವಿರೋಧದ ನಿಲುವನ್ನು ಮುಂದುವರೆಸುತ್ತಲೇ, ಈ ಒಂದೇ ಕಾರಣಕ್ಕೆ WSF ನ ಪ್ರಕ್ರಿಯೆಯಿಂದ ದೂರ ನಿಲ್ಲುವುದು ತರವಲ್ಲ ಎಂದು ಭಾವಿಸಿದೆ.

ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಕೋಟ್ಯಾಂತರ ಜನ ಬೀದಿಗಳಿದು ಪ್ರತಿಭಟನೆ ಮಾಡುತ್ತಿದ್ದಾರೆ. ಈ ಪ್ರತಿಭಟನೆ ಎಷ್ಟು ತೀವ್ರವಾಗಿದೆಯೆಂದರೆ - ಫಿಡೆಲ್ ಕ್ಯಾಸ್ಟ್ರೋ ಹೇಳಿದಂತೆ ಜಾಗತೀಕರಣದ ನಾಯಕರು ಸುರಕ್ಷಿತವಾಗಿ ಎಲ್ಲಾದರೂ ಸಭೆ ಸೇರಬೇಕೆಂದರೆ ಅದು ಬಾಹ್ಯಾಕಾಶದಲ್ಲಿ ಮಾತ್ರ. ಈ ಚಳುವಳಿ ಯುದ್ಧ ಮತ್ತು ಇರಾಕಿನಲ್ಲಿ ಅಮೆರಿಕದ ಅತಿಕ್ರಮಣದ ಪ್ರಶ್ನೆಯನ್ನು ದೊಡ್ಡದಾಗಿ ಎತ್ತಿಕೊಂಡಿದೆ. ಕೋಟ್ಯಾಂತರ ಜನ ಭಾಗವಹಿಸಿದ ಫೆಬ್ರವರಿ 15 ರ ಯುದ್ಧ-ವಿರೋಧಿ ಪ್ರದರ್ಶನಗಳಿಗೆ ಕರೆ ಕೊಟ್ಟಿದ್ದು 2003 ರ WSF ಅಧಿವೇಶನ. ಇಂತಹ ಮಹಾನ್ ಚಳುವಳಿಗಳು ಮತ್ತು ಇಂತಹ ಚಳುವಳಿಗಳ ಸ್ವಾಭಾವಿಕ ನೇತಾರರಾಗಬೇಕಾದ ಕಮ್ಯುನಿಸ್ಟರ ಕರ್ತವ್ಯ ಏನು?

ಸಿಪಿಐ(ಎಂ) ನಿಲುವು ಈ ವಿಷಯದಲ್ಲಿ ಸ್ಪಷ್ಟ. ನಾವು ಈ ಚಳುವಳಿಯಲ್ಲಿ ಭಾಗವಹಿಸುತ್ತೇವೆ. ಸೈದ್ಧಾಂತಿಕ ಚರ್ಚೆಯಲ್ಲಿ ತೊಡಗುತ್ತೇವೆ. ಸಮಾಜವಾದ ಸಾಮ್ರಾಜ್ಯಶಾಹಿ-ಜಾಗತೀಕರಣಕ್ಕೆ ಏಕಮಾತ್ರ ಬದಲಿ ಎಂಬುದನ್ನು ಮಸಕುಗೊಳಿಸುವ ಎಲ್ಲಾ ಪ್ರಯತ್ನಗಳನ್ನು ವಿರೋಧಿಸುತ್ತೇವೆ. ಸಾಮ್ರಾಜ್ಯಶಾಹಿ ವಿರುದ್ಧ ಚಳುವಳಿಯನ್ನು ಬಲಗೊಳಿಸಲು ಪ್ರಯತ್ನಿಸುತ್ತೇವೆ.

ಇದು WSF ಬಗ್ಗೆ ಸಿಪಿಐ(ಎಂ) ನಿಲುವುಗಳ ಸಾರ. ಬರುವ ದಿನಗಳಲ್ಲಿ ಜಾಗತೀಕರಣ ವಿರೋಧಿ ಚಳುವಳಿಯ ಸ್ವರೂಪ, ಮೂಡುವ ಹಾದಿ ಬಗ್ಗೆ ತೀವ್ರ ಚರ್ಚೆಗಳು ನಡೆಯುತ್ತವೆ. WSF ಮೇಲೂ ಇದರ ಪರಿಣಾಮಗಳಾಗುತ್ತವೆ. WSF ನಲ್ಲೇ ಪ್ರಮುಖ ಬದಲಾವಣೆಗಳಾಗಬಹುದು. ಈ ಹೋರಾಟದ ಪ್ರಕ್ರಿಯೆಯಲ್ಲಿ ಸಾಮ್ರಾಜ್ಯಶಾಹಿಗೆ ಏಕಮಾತ್ರ ನಿಜವಾದ ಬದಲಿಯಾಗಿ **ಸಮಾಜವಾದಿ ಬದಲಿಯ ಅಗತ್ಯತೆ ಅನಿವಾರ್ಯತೆಯನ್ನು ಎತ್ತಿಹಿಡಿಯುವುದು, ಬಲಪಡಿಸುವುದು ನಮ್ಮೆಲ್ಲರ ಕರ್ತವ್ಯ.**

ಉತ್ತರ ಕನ್ನಡ

# ಬೆಂಕಿ ಹಚ್ಚುತ್ತಲೇ ಇರುವ ಬಿಜೆಪಿ – ತಾರಕಕ್ಕೇರಿದ ಕಿತ್ತಾಟದಲ್ಲಿ ಕಾಂಗ್ರೆಸ್

**ಮೂಲಕಾಂಗ್ರೆಸ್-ವಲಸೆ ಕಾಂಗ್ರೆಸ್ ಎಂದು ಭಿನ್ನಬಣಗಳ ಗುದ್ದಾಟದಲ್ಲಿ ನಿರತವಾಗಿದ್ದರೆ ಜಾತಿ, ಕೋಮುಗಳ ಗಲಭೆಯೆಬ್ಬಿಸಿ ಮೈಚಳಿ ಕಾಯಿಸಿಕೊಳ್ಳಲು ಬಿಜೆಪಿ ಯತ್ನಿಸುತ್ತಿದೆ. ಈ ಎರಡು ಕ್ಷಗಳಿಗೂ ಜನರ ಸಮಸ್ಯೆಗಳತ್ತ ಕಿಂಚಿತ್ತೂ ಕಾಳಜಿಯಿಲ್ಲದೇ ಇನ್ನೊಬ್ಬರನ್ನು ಹೂಳಲು ಗುಂಡಿ ತೋಡುತ್ತಿವೆ.**

ಉತ್ತರಕನ್ನಡ ಭ್ರಷ್ಟರಾಜಕಾರಣಿದ ತೆವಲಿಗೆ ಬಡವಾಗುತ್ತಿದೆ. ಕೃಷಿರಂಗದ ಬಿಕ್ಕಟ್ಟು, ಕೈಗಾರಿಕಾ ಬಿಕ್ಕಟ್ಟು, ಮೀನುಗಾರಿಕೆ ಬಿಕ್ಕಟ್ಟು, ಸಮುದ್ರಕೊರೆತ, ನಿರಾಶ್ರಿತರ ಅತಂತ್ರ ಸ್ಥಿತಿಗಳಿಂದ ಕಂಗೆಟ್ಟ ಜಿಲ್ಲೆಗೆ ಸಾಂತ್ವನ ಹೇಳುವ ಸ್ಥಿತಿಯಲ್ಲಿ ಅಧಿಕಾರ ನಡೆಸುವವರು ಇಲ್ಲ. ಹಾಗಾಗಿ ಜಿಲ್ಲೆಯಲ್ಲಿ ಪ್ರತಿಭಟನೆಗಳಲ್ಲಿನ ವಾದಗಳೇ ಕಡಿಮೆ ಆಗುತ್ತಿವೆ.

ಇನ್ನೊಬ್ಬರಿಗಾಗಿ ಗುಂಡಿತೋಡುತ್ತಿದ್ದೇವೆ, ಗುಂಡಿಯಿಂದ ಹೊರತೆಗೆದ ಮಣ್ಣು ಗುಪ್ಪೆ (ರಾಶಿ) ಬಿದ್ದಾಗ, ಅದನ್ನೇ ತಾನು ಸಿಂಹಾಸನ ಮಾಡಿ ಕುಳಿತುಕೊಳ್ಳಬಹುದೆಂಬ ಆಲೋಚನೆಯಲ್ಲಿಯೇ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳೆರಡೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಗುಂಡಿ ತೋಡುತ್ತಿವೆ. ಆದರೆ ಸಿಂಹಾಸನವೆಂದು ತಿಳಿದ ಮಣ್ಣುಗುಡ್ಡೆ (ರಾಶಿ) ಜಾರಿ ಇವರೇ ಗುಂಡಿಯಲ್ಲಿ ಬೀಳುವ ದಿನ ದೂರವಿಲ್ಲ. ಬಿದ್ದವರ ಮೇಲೆ ಮಣ್ಣು ಮುಚ್ಚಲು ಮಾತ್ರ ಸಾಮಾನ್ಯ ದರ್ಜೆಯ ಗುದ್ದಲಿ ಪಿಕಾಸು ಹಿಡಿದ ಜನರ ಗುಂಪು ಸಾಕು.

ಪರಸ್ಪರ ವಿರೋಧಿಪಕ್ಷದವರನ್ನು ಹೂತು ಹಾಕಲು ಇವರು ಗುಂಡಿ ತೋಡುತ್ತಿದ್ದಾರೆಂದು ತಿಳಿದು ನಾವು ಕೇಳಿದರೆ ಬೇಸ್ತು ಬೀಳುತ್ತೇವೆ. ಯಾಕೆಂದರೆ ಇನ್ನೊಂದು ಪಕ್ಷದವರಿಗಾಗಿ ತೋಡಿದ ಗುಂಡಿಯಲ್ಲಿ ಈಗ ಅವರವರ ಪಕ್ಷದ ಮತ್ತೊಂದು ಗುಂಪನ್ನು ಸಮಾಧಿ ಮಾಡಲು ಮುಂದಾಗಿದ್ದಾರೆ. ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಮುಖ್ಯ ಪಕ್ಷಗಳೆರಡು ಹೀಗೆ ಅವಸಾನದತ್ತ ದಾಪುಗಾಲಿಡುತ್ತಿರುವ ಸಂದರ್ಭದಲ್ಲಿಯೇ ಪರ್ಯಾಯವೊಂದನ್ನು ಕಂಡುಕೊಳ್ಳಲು ಜನ ಆಲೋಚಿಸುತ್ತಿದ್ದಾರೆ.

**ಕಾಂಗ್ರೆ ಕಚ್ಚಾಟ :**


ಜಿಲ್ಲೆಯಲ್ಲಿ ಕಾಂಗ್ರೆಸ್ಸಿನ ಕಚ್ಚಾಟ ತಾರಕಕ್ಕೇರಿದೆ. ರಾಜ್ಯದಲ್ಲಿ, ಜಿಲ್ಲಾ ಪಂಚಾಯತ್ ನಲ್ಲಿ, ಬಹುತೇಕ ತಾಲೂಕು ಪಂಚಾಯತ್‌ಗಳಲ್ಲಿ ಅಧಿಕಾರದಲ್ಲಿರುವ ಕಾಂಗ್ರೆ ಪಕ್ಷಕ್ಕೆ ಈ ಜಿಲ್ಲೆಯಲ್ಲಿ ತೀರಾ ಜವಾಬ್ದಾರಿಯುತ ಸ್ಥಾನವಿತ್ತು. ಜಿಲ್ಲೆಯ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದಾಗಿತ್ತು. ಆದರೆ ಅವೆಲ್ಲವನ್ನು ಮರೆತು ಪರಸ್ಪರ ಬೀದಿಕಾಳಗಕ್ಕೆ ಇಳಿದಿದ್ದು ಮಾತ್ರ ನಾಚಿಕೆಗೇಡು.

ಮೂಲ ಕಾಂಗ್ರೆಸ್ ಮತ್ತು ವಲಸೆ ಕಾಂಗ್ರೆಸ್ ಎನ್ನುವ ಭಿನ್ನ ಬಣಗಳ ನಡುವೆ ಕಳೆದ ಚುನಾವಣೆಯಿಂದಲೇ ಮುಸುಕಿನ ಗುದ್ದಾಟ ನಡೆಯುತ್ತಿದ್ದುವು ಈಗ ಬಹಿರಂಗ ಹೊಡೆದಾಟವಾಗಿ ಮಾರ್ಪಟ್ಟಿದೆ. ವಲಸೆ ಕಾಂಗ್ರೆಸ್ಸಿಗರ ಗುಂಪು ಆರ್.ವಿ ದೇಶಪಾಂಡೆಯವರನ್ನು ನಾಯಕರೆಂದು ನಂಬಿದ್ದರೆ, ಮೂಲ ಕಾಂಗ್ರೆಸ್ಸಿಗರು ಮಾರ್ಗರೇಟ್ ಆಳ್ವರನ್ನು ನಾಯಕರೆಂದು ನಂಬಿದ್ದಾರೆ. ಈ ಇಬ್ಬರು ನಾಯಕರ ಬಾವಚಿತ್ರದಡಿಯಲ್ಲಿ ಗುಂಪುರಚನೆ ಪರಸ್ಪರ ಆರೋಪ, ಪ್ರತ್ಯಾರೋಪ ಮತ್ತು ಮೇಲಾಟ ನಡೆದಿದೆ. ದೇಶಪಾಂಡೆಯವರ ಆಗಮನದೊಂದಿಗೆ ಹಳೆಕಾಂಗ್ರೆಸ್ಸಿಗರು (ಕಾಂಗ್ರೆಸ್ಸಿನಲ್ಲಿದ್ದೇ ಹಳತಾದವರು, ಹಳಸಿದವರು) ಮೂಲೆಗುಂಪಾದದ್ದಂತೂ ಸತ್ಯ. ಕಾಂಗ್ರೆಸ್ಸಿಗೆ ತನ್ನ ಬೆಂಬಲಿಗರೊಂದಿಗೆ ಬಂದೊಡನೆ ಉಸ್ತುವಾರಿ ಸಚಿವತ್ವವನ್ನು ಕಿಸೆಯಲ್ಲಿಟ್ಟುಕೊಂಡಿರುವುದರಿಂದ ಮತ್ತು ಹಣದ ಥೈಲಿಯಿಂದಾಗಿ ಜಿಲ್ಲೆಯ ಎಲ್ಲಾ ಅಧಿಕಾರಿಗಳು ದೇಶಪಾಂಡೆ ಮತ್ತು ಬೆಂಬಲಿಗರಿಗೆ ಶಿಷ್ಯರಾಗಿ, ಹಳಬರಿಗೆ ಅಶಿಷ್ಯರಾಗಿಬಿಟ್ಟರು.

ಅಂದರೆ ಎರಡು ಬಣಗಳ ನಡುವಿನ ಜಗಳಕ್ಕೆ ಯಾವುದೇ ತಾತ್ವಿಕ ಕಾರಣಗಳಿಲ್ಲ, ಬದಲಾಗಿ ಭ್ರಷ್ಟಾಚಾರ, ಲಂಚಗುಳಿತನದಲ್ಲಿ ಯಾರಪಾಲು ಎಷ್ಟು ಎನ್ನುವ ಭಾಗಾಕಾರ ಗುಣಾಕಾರ (ದೊಡ್ಡಪಾಲು ಯಾರಿಗೆ ಎನ್ನುವ ಪ್ರಶ್ನೆ)ದ ಗೊಂದಲವೇ ಮೂಲ ಕಾರಣ.


ಇತ್ತೀಚಿಗೆ ನಡೆದ ತಾಲ್ಲೂಕು ಪಂಚಾಯತ್ ಚುನಾವಣೆಯಲ್ಲಿ ಮತ್ತು ಅದಕ್ಕೂ ಹಿಂದೆ ನಡೆದ ತಾಲೂಕುಮಟ್ಟದ ಕಾರ್ಯಕರ್ತರ ಸಭೆಯಲ್ಲೂ ಭಿನ್ನಾಭಿಪ್ರಾಯ ಬೀದಿ ರಂಪವಾಯಿತು. ಕುಮಟಾ, ಸಭೆಯಲ್ಲಿ ಖುರ್ಚಿಗಳು ಮಾತನಾಡಿದ್ದರೆ ಹೊನ್ನಾವರದಲ್ಲಿ ಚಪ್ಪಲಿಗಳೇ ಮಾತನಾಡಿದವು. ಜಿಲ್ಲೆಯ ನಿರಾಶ್ರಿತರ ಪ್ರಶ್ನೆ, ಶಾಲಾ-ಕಾಲೇಜುಗಳ ವಂತಿಕೆಯ ಪ್ರಶ್ನೆ, ಅತಿಕ್ರಮಣ ಭೂಮಿಯ ಪ್ರಶ್ನೆಗಳ್ಯಾವುದೂ ಇವರ ಸಭೆಯ ಅಜೆಂಡಾ ಆಗದೆ, ಅಧಿಕಾರವನ್ನು ವಶಪಡಿಸಿಕೊಳ್ಳುವುದು ಮತ್ತು ಎರಡು ಬಣಗಳ ನಡುವಿನ ಆರೋಪ, ಪ್ರತ್ಯಾರೋಪಗಳೇ ಪ್ರಮುಖವಾದದ್ದು ದುರಂತವೇ ಸರಿ.

ಸಿದ್ದಾಪುರ ತಾಲೂಕಿನಲ್ಲಿ ಆಡಳಿತ ಪಕ್ಷದವರೇ ಸೇರಿ ಅಧ್ಯಕ್ಷರ ಮೇಲೆ ಅವಿಶ್ವಾಸ ಗೊತ್ತುವಳಿ



ಅನಿವಾಸಿ ಮತ್ತು ವಲಸಿಗರೆಂಬ ಕಾಂಗ್ರೆಸ್ ನಾಯಕರು

ಸ್ವೀಕರಿಸಿದ್ದು, ಹಿಂದೆಲ್ಲಾ ಭ್ರಷ್ಟಾಚಾರವನ್ನೇ ಮಾಡಿದ ಗೋಪಾಲ ಕಾನಡೆ (ಮಾಜಿ ಎಂ.ಎಲ್.ಎ) ಕಾಂಗ್ರೆನಲ್ಲಿರುವ ಲಂಚ, ಭ್ರಷ್ಟಾಚಾರದ ಬಗ್ಗೆ ಮಾತನಾಡಿ ಪಕ್ಷದಿಂದ ವಜಾಗೊಂಡಿದ್ದು, ಶಿರಸಿಯಲ್ಲಿ ಕಾಂಗ್ರೆನ ಜಿಲ್ಲಾ ಅಧ್ಯಕ್ಷರ ಎದುರೇ ಯುವ ಕಾಂಗ್ರೆನ ಮುಖಂಡರು ಚಪ್ಪಲಿಯಲ್ಲಿ ಹೊಡೆದಾಡಿಕೊಂಡಿದ್ದು, ಕುಮಟಾದಲ್ಲಿ ಸಭೆ ನಡೆದಾಗ ಸಂಸದರ ಎದುರೇ ಗಲಾಟೆ ನಡೆದದ್ದು, ದಾಂಡೇಲಿಯಲ್ಲಿ ತಿಂದು ತೇಗಿ, ನಂತರ ಅಕ್ಕಿಯನ್ನೇ ಮಾರಾಟ ಮಾಡಲು ಹೊರಟಿದ್ದು ತೀರಾ ಹಳೆಯ ಕತೆಯಾದರೆ (6 ತಿಂಗಳ ಈಚೆಯದು) ಹೊನ್ನಾವರದಲ್ಲಿ ತಾಲ್ಲೂಕು ಪಂಚಾಯತ ಅಧ್ಯಕ್ಷರ ಆಯ್ಕೆಯ ಸಂದರ್ಭದಲ್ಲಿ ಇಬ್ಬರು ಶಾಸಕರಾದ ಮೋಹನ.ಕೆ.ಶೆಟ್ಟಿ ಮತ್ತು ಜೆ.ಡಿ.ನಾಯ್ಕರ ಎದುರೇ ಚಪ್ಪಲಿಯಿಂದ ಹೊಡೆದಾಡಿ ಕೊಂಡರು. ಅಧ್ಯಕ್ಷ ಆಕಾಂಕ್ಷಿಗೆ ಹೊಡೆದು ನಾಮಪತ್ರ ವಾಪಸು ತೆಗೆದುಕೊಳ್ಳುವಂತೆ ಮಾಡಿದರು. ಇನ್ನೊಬ್ಬರ ಕಾರನ್ನೇ ಪುಡಿಗೈದರು, ಜನರೆದುರೇ ಒಬ್ಬ ಮಹಿಳಾ ಅಧ್ಯಕ್ಷೆಯ ಕೈಹಿಡಿದು ಜಗ್ಗಾಡಿ ಕಿಡ್ನಾಪ್ ಮಾಡುವ ಹಂತಕ್ಕೆ ಹೋದರು. ಇಲ್ಲಿ ಯಾರು ಯಾರಿಗೆ ಹೊಡೆದರು ಎನ್ನುವುದಕ್ಕಿಂತ ಅಧಿಕಾರ ಕ್ಕಾಗಿ ಏನೆಲ್ಲ ಕಾಂಗ್ರೆನಲ್ಲಿ ನಡೆಯುತ್ತಿದೆ ಎನ್ನುವುದನ್ನು ತೋರಿಸುತ್ತಿದೆ. ಇನ್ನು ಭಟ್ಕಳ ತಾಲೂಕಿನಲ್ಲಿ ಅಧ್ಯಕ್ಷ ಆಗ ಬಯಸಿದವರು ಸಾವಿರಾರು ಜನರನ್ನು ಹೊರಗೆ ನಿಲ್ಲಿಸಿ ಒಳಗಿದ್ದವರಿಗೆ ಭಯಹುಟ್ಟಿಸಿ ಅಧ್ಯಕ್ಷರಾದ ಬಗ್ಗೆ ಜನ ಹೇಳಿಕೊಳ್ಳುತ್ತಿದ್ದಾರೆ. ಇದು ಒಂದು ರಾಷ್ಟ್ರೀಯ ಪಕ್ಷದ ನೈತಿಕ ಅಧಃಪತನವಲ್ಲದೇ ಮತ್ತೇನೂ ಅಲ್ಲ.



**ಮುಂದುವರಿದ ಬಿಜೆಪಿಯ ಬೆಂಕಿ ಇಡುವ ನೀತಿ**

ಬಿಜೆಪಿಯ ಸ್ಥಿತಿ ಕಾಂಗ್ರೆಗಿಂತ ಭಿನ್ನವಾಗಿಲ್ಲ. ಕಳೆದ ಕೆಲವು ವರ್ಷಗಳಿಂದ ಜಿಲ್ಲೆಯಲ್ಲಿ ಬಿಜೆಪಿ ಆಗಾಗ ಪತ್ರಿಕಾಗೋಷ್ಠಿ ಮತ್ತು ಹೇಳಿಕೆಗಳ ಮೂಲಕ ಬೃಹತ್ ಹೋರಾಟ ನಡೆಸುವುದಾಗಿ ಘೋಷಿಸಿದ್ದನ್ನು ಬಿಟ್ಟರೆ ಅಂತಹ ಯಾವುದೇ ಹೋರಾಟ ಮಾಡಿದ ದಾಖಲೆ ಇಲ್ಲ. ಬೃಹತ್ ಎಂದರೆ ನೂರಾರು ಜನ ಎನ್ನುವ ಅರ್ಥ ಬಿಜೆಪಿಯ ಶಬ್ದಕೋಶದಲ್ಲಿ ಇದ್ದಂತಿದೆ. ಉಗ್ರಗಾಮಿ ಅನಂತಕುಮಾರ ಹೆಗಡೆ ಮತ್ತು ನಿದ್ರೆಗಾಮಿ ವಿಶ್ವೇಶ್ವರ ಹೆಗಡೆ ಕಾಗೇರಿ, ಎಂ.ಪಿ.ಕರ್ಕಿ ಮುಂತಾದವರ ಗುಂಪಿನ ನಡುವಿನ ಗುದಮರಗಿಯಲ್ಲಿ ಮತ್ತು ಕೋಮುಗಲಭೆ, ಜಾತಿಗಲಭೆ ಎಬ್ಬಿಸಲು ಅನುಕೂಲಕರ ವಸ್ತುವಿನ ಸಂಶೋಧನೆಯಲ್ಲಿ ಬಿಜೆಪಿ ನಾಯಕತ್ವ ತಲ್ಲೀನವಾಗಿರುವ ವರದಿಯಿದೆ.

**ರಾಷ್ಟ್ರಪ್ರೇಮದ ಬಗ್ಗೆ ವೀರಾವೇಶದ ಮಾತನಾಡುವ ಮಾಜಿ ಎಂಪಿ ಅನಂತ ಕುಮಾರ ಲಕ್ಷಾಂತರ ರೂಪಾಯಿಗಳ ಬಿಲ್ ತುಂಬದೆ ಬಿಎಸ್‌ಎನ್‌ಎಲ್ ಗೆ ಪಂಗನಾಮ ಹಾಕುವ ಕಸರತ್ತು ಇತ್ತೀಚೆಗೆ ಬಯಲಾಯಿತು.** ಜಿಲ್ಲೆಯಲ್ಲಿ ನಾವೊಂದು ಶಕ್ತಿ ಎಂದುಕೊಂಡು ಅಡ್ಡಾಡುವ ಇವರು ಇತ್ತೀಚೆಗೆ ನಡೆದ ವಿಧಾನಪರಿಷತ್ತು ಚುನಾವಣೆಯಲ್ಲಿ ಇಡಿಗಂಟನ್ನೂ ಕಳೆದುಕೊಂಡರು, ಒಮ್ಮೆ ಸಂಸತ್‌ಕ್ಷೇತ್ರ ಗೆದ್ದ ದೇಶಪ್ರೇಮಿ (ಅಂದರೆ ಮುಸ್ಲಿಂ ದ್ವೇಷಿ) ಅನಂತಕುಮಾರ ಮತ್ತು ಸದಸ್ಯ ಅಂಕೋಲಾ, ಸಿರ್ಸಿ-ಸಿದ್ದಾಪುರ ಕ್ಷೇತ್ರದಲ್ಲಿ ಇಬ್ಬರು ಎಂ.ಎಲ್.ಎ. ಗಳಾದ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ವಿವೇಕಾನಂತ ವೈದ್ಯರಿದ್ದೂ ಇಡಿಗಂಟು ಕಳೆದುಕೊಳ್ಳುವ (250 ಮತಕ್ಕಿಂತ ಕಡಿಮೆ) ಸ್ಥಿತಿ ಬಂದಿವೆಯೆಂದರೆ ಜಿಲ್ಲೆಯಲ್ಲಿ ಅವರ ಚಿಂತಾಜನಕ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಹುದು. ಮೇಲಾಗಿ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಪಕ್ಷ ಇದು.

ಜಿಲ್ಲೆಯಲ್ಲಿ ಬಿಜೆಪಿಯ ಖ್ಯಾತಿ ಇರುವುದು ಯಾರಾದರೂ ಪ್ರತಿಭಟನೆ ಹಮ್ಮಿಕೊಂಡರೆ ಅದಕ್ಕಿಂತ 4 ದಿನ ಮೊದಲೇ ತಾನೂ ಒಂದು ಪ್ರತಿಭಟನೆ ಮೆರವಣಿಗೆ ಮಾಡಿ ಮುಗಿಸುವುದು. ಹಿಂದೆ ಅತಿಕ್ರಮಣ ಭೂಮಿ ಸಕ್ರಮಕ್ಕಾಗಿ ಒತ್ತಾಯಿಸಿ ಶಿರಸಿಯಲ್ಲಿ ಹಿಂದುಳಿದ ವರ್ಗದ ವೇದಿಕೆ, ಹಾಲಪ್ಪ ಜಕಣ್ಣವರ, ಭಟ್ಕಳ, ಹೊನ್ನಾವರ, ಅಂಕೋಲಾಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘಗಳು, ಅತಿಕ್ರಮಣ ಹೋರಾಟ ಸಮಿತಿಗಳು ಪ್ರತಿಭಟನೆ ಹಮ್ಮಿಕೊಂಡು ಪೂರ್ವಭಾವಿಯಾಗಿ ತಯಾರಿ ಮಾಡುತ್ತಿದ್ದಾಗ ಇದೇ ಬಿಜೆಪಿ 100-200 ಜನರನ್ನು ಸೇರಿಸಿ ಈ ಸಾಮೂಹಿಕ ಹೋರಾಟಕ್ಕೆ ನಾಲ್ಕು ದಿನ ಮೊದಲು ತಾನು ಒಂದು ಪ್ರತಿಭಟನೆ ಮಾಡಿ ಜನರ ದಿಕ್ಕು ತಪ್ಪಿಸಲು ಪ್ರಯತ್ನಿಸಿತ್ತು. ಈಗ ಹಸಿರುಕಾರ್ಡ್, ಹಳದಿ ಕಾರ್ಡ್‌ಗಾಗಿ ಹೋರಾಟ ನಡೆಯುತ್ತಿದ್ದಾಗ ಎಲ್ಲೆಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಇತ್ಯಾದಿ ಗಳು ಹೋರಾಟ ನಡೆಸುವುದಾಗಿ ದಿನಾಂಕವನ್ನು ಪತ್ರಿಕೆಯಲ್ಲಿ ಪ್ರಕಟಿಸಿದರೋ ಅದಕ್ಕಿಂತ ಎರಡು ದಿನ ಮೊದಲು ಅಂಕೋಲಾ, ಭಟ್ಕಳದಲ್ಲಿ ತಾನೂ ಒಂದು ಪ್ರತಿಭಟನೆ ಮಾಡಿತು. ಹೀಗೆ ಯಾರಾದರೂ ಹೋರಾಟಕ್ಕೆ ಇಳಿದರೆ... ಇವರೂ ಇಳಿಯುವ ನಿರ್ಧಾರ ಮಾಡುತ್ತಾರೆ. ಆದರೆ ನವಿಲು ಕುಣಿಯುತ್ತದೆಂದು ಕೆಂಬೂತವೂ ಕುಣಿದಂತೆ, ನೀಲಿ ಬಣ್ಣದಲ್ಲಿ ಮುಳುಗೆದ್ದ ನರಿಯಂತೆ ಬಿಜೆಪಿಯ ಸ್ಥಿತಿ.

ಇನ್ನು ದಳಪರಿವಾರಗಳು ಒಟ್ಟಾಗುವುದನ್ನು ಜನ ಕಾಯುತ್ತಿದ್ದಾರೆ. ದಳಪರಿವಾರ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳು ಸೇರಿ ಸ್ಪಷ್ಟವಾದ ಕಾರ್ಯಯೋಜನೆಯೊಂದನ್ನು ಸಿದ್ದಪಡಿಸಬೇಕಾಗಿದೆ. ಪ್ರಗತಿಪರ ಜನತಾದಳ ಮತ್ತು ಜಾತ್ಯಾತೀತದಳಗಳು ಪ್ರತ್ಯೇಕವಾಗಿ ಚುನಾವಣೆ ಎದುರಿಸಿದರೆ ಸ್ಥಿತಿ ಏನಾಗುತ್ತದೆಂದು ಇತ್ತೀಚಿನ ವಿಧಾನ ಪರಿಷತ್ ಚುನಾವಣೆ ತೋರಿಸಿಕೊಟ್ಟಿದೆ.

**- ನಿಸರ್ಗ**

## ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ






**ಬಾಯಿ ಹಾಗೂ ಹಲ್ಲುಗಳ ಆರೋಗ್ಯ:**

ನಮ್ಮ ಬಾಯಿಯಲ್ಲಿ ಅನೇಕ ಅಪಾಯಕಾರಿ ರೋಗಾಣುಗಳಿದ್ದು ಸದಾ ವೃದ್ಧಿಯಾಗುತ್ತಿರುತ್ತದೆ. ಉಗುಳಿನ ಮೂಲಕ ಈ ರೋಗಾಣುಗಳು ಹರಡುತ್ತವೆ.

ನಮ್ಮ ದೇಶದಲ್ಲಿ ಸುಮಾರು ಶೇಕಡ 50 ರಷ್ಟು ಮಕ್ಕಳು ದಂತ ಕ್ಷಯದಿಂದ, 40 ರಷ್ಟು ಮಕ್ಕಳು ವಸಡು ರೋಗದಿಂದ ಬಳಲುತ್ತಿರುತ್ತಾರೆಂದು ಅಧ್ಯಯನಗಳಿಂದ ತಿಳಿದುಬಂದಿದೆ. ಸುಮಾರು ಎಲ್ಲ ದಂತಕ್ಷಯಗಳನ್ನು ತಡೆಗಟ್ಟಬಹುದಾಗಿದೆ. ಆದ್ದರಿಂದ ಹಲ್ಲಿನ ರಕ್ಷಣೆಯನ್ನು ಮಗುವಿನಿಂದಲೇ ಪ್ರಾರಂಭಿಸಬೇಕು. ಆಹಾರ ಪದಾರ್ಥ ಬಾಯಲ್ಲಿ ಉಳಿದು, ರೋಗಾಣುಗಳಿಂದ ಅದು ಆಮ್ಲವಾಗಿ ಪರಿವರ್ತನೆಹೊಂದಿ, ಹಲ್ಲಿನ ಮೇಲೆ ಪರಿಣಾಮ ಬೀರಿದಾಗ ದಂತಕ್ಷಯ ಹಾಗೂ ವಸಡಿನ ತೊಂದರೆ ಉಂಟಾಗುತ್ತದೆ. ಇದನ್ನು ತಡೆಗಟ್ಟಲು

ಹಲ್ಲು ಹಾಗೂ ಬಾಯಿ ಸ್ವಚ್ಛತೆ ಕಾಪಾಡಿ, ದಿನವೂ ಎರಡೂ ಬಾರಿ ಊಟದ ನಂತರ ಬ್ರಶ್ ಮಾಡಿ.

ಆಹಾರ, ಸಿಹಿ ಪದಾರ್ಥ, ಚಾಕಲೇಟ್ ಮುಂತಾದವುಗಳನ್ನು ತಿಂದ ಕೂಡಲೇ ಬಾಯಿ ಮುಕ್ಕಳಿಸಿ, ಇಲ್ಲವೆ ಬ್ರಶ್ ಮಾಡಿ.

ಹಣ್ಣು, ಹಸಿತರಕಾರಿ ತಿನ್ನುವುದರಿಂದ ಹಲ್ಲು ಹಾಗೂ ವಸಡಿನ ಆರೋಗ್ಯ ಕಾಪಾಡಬಹುದು:

ಉಗುರು ಕಚ್ಚುವುದು, ಬೆರಳು ಚೀಪುವುದು, ಪೆನ್ಸಿಲ್ ಕಡಿಯುವುದು ತಡೆಗಟ್ಟಿ. ಎಲೆ ಅಡಿಕೆ, ಹೊಗೆಸೊಪ್ಪು ಅಭ್ಯಾಸ ಅಪಾಯಕಾರಿ.

ವರ್ಷಕ್ಕೆರಡುಬಾರಿ ದಂತವೈದ್ಯರನ್ನು ಭೇಟಿಮಾಡಿ

**ಅಪಘಾತ ತಡೆಯಿರಿ :**

ಇಂದು ವಾಹನಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಅಪಘಾತಗಳ ಸಂಖ್ಯೆಯೂ ಹೆಚ್ಚುತ್ತಲಿದೆ. ಈ ಅಪಘಾತಗಳಿಗೆ ಮುಖ್ಯ ಕಾರಣ ಬೇಜವಾಬ್ದಾರಿ. ಈ ಅಪಘಾತಗಳನ್ನು ತಡೆಯಲೇಬೇಕಾಗಿದೆ.

ವಾಹನ ಉಳ್ಳವರು ರಸ್ತೆ ನಿಯಮಗಳನ್ನು ಪಾಲಿಸಬೇಕು

ವಾಹನದ ಮೇಲೆ ಚಲಿಸುವಾಗ ರಸ್ತೆಯ ಮೇಲೆ ಗಮನವಿಡಿ. ವಾಹನ ಓಡಿಸಲು ಯೋಗ್ಯವೆ, ಎಂದು ಮೊದಲೇ ತೀರ್ಮಾನಿಸಿ

ಮಕ್ಕಳಲ್ಲಿಯೂ ಅಪಘಾತಗಳು ಸಾಮಾನ್ಯ ಅವುಗಳನ್ನು ತಡೆಯಬೇಕು.

ಬೆಂಕಿ ಪೊಟ್ಟಣ, ದೇವರ ದೀಪ, ಗ್ಯಾಸ್, ವಿದ್ಯುತ್‌ಚ್ಚಕ್ತಿ ಉಪಕರಣಗಳು ಮಗುವಿನ ಕೈಗೆ ಸಿಗದಂತೆ ದೂರವಿಡಿ.


ಚಾಕು ಇತ್ಯಾದಿ ಅಪಾಯಕಾರಿ ವಸ್ತುಗಳನ್ನು ಮಕ್ಕಳ ಕೈಗೆ ಸಿಗದಂತೆ ಜೋಪಾನವಾಗಿಡಿ.

ಔಷಧಿಗಳು, ವಿಷಭರಿತ ಕೀಟನಾಶಕಗಳು, ಸೀಮೆ ಎಣ್ಣೆ, ಮುಂತಾದವುಗಳನ್ನು ಮಗುವಿಗೆ ಸಿಗದಂತೆ ದೂರವಿಡಿ.

ಮಗುವೊಂದನ್ನೇ ಬಿಟ್ಟು ಹೋಗಬೇಡಿ. ಚಿಕ್ಕಮಕ್ಕಳ ಜವಾಬ್ದಾರಿಯಲ್ಲಿ ಎಳೇ ಮಗುವನ್ನು ಬಿಟ್ಟು ಹೋಗಬೇಡಿ. ಸಣ್ಣ ವಸ್ತುಗಳಾದ ಬಳಪದ ತುಂಡು, ಮಣಿ, ಪೆನ್ನು, ನಾಣ್ಯ, ಬ್ಲೇಡ್, ಪೆನ್ಸಿಲ್, ಕತ್ತರಿ ಮಗುವಿಗೆ ಸಿಗದಂತೆ ದೂರವಿಡಿ.

ಮಹಡಿ ಮೇಲೆ ಹೋದಾಗ, ರಸ್ತೆಯಲ್ಲಿ ಹೋದಾಗ, ನೀರಿನ ಹತ್ತಿರ ಹೋದಾಗ ಮಗುವಿನ ಬಗ್ಗೆ ಎಚ್ಚರವಹಿಸಿ.

(ಮುಂದುವರಿಯುವುದು)




ಜಿ.ಎಸ್.ಮಣಿ

# ಹೊರಮೂಲದ ವ್ಯಾಪಾರ: ಸಾಮ್ರಾಜ್ಯಶಾಹಿಗಳ ಲಾಭ ಪಿಪಾಸೆಯ ತಂತ್ರ

ಬಿಸಿನೆಸ್ ಪ್ರೊಸೆಸ್ ಔಟ್‌ಸೋರ್ಸಿಂಗ್ (ಬಿಪಿಒ) ಅಂದರೆ ಹೊರಮೂಲಗಳಲ್ಲಿ ವ್ಯಾಪಾರಿ ಪ್ರಕ್ರಿಯೆ ನಡೆಸುವುದು ಅಮೆರಿಕದ ಆರ್ಥಿಕಕ್ಕೆ ಅತ್ಯಂತ ಲಾಭದಾಯಕ ಎಂದು ಮೆಕಿನ್ಸ್ ವರದಿ ತಿಳಿಸಿದೆ. ಬಿಪಿಒ ಎಂದರೆ ಬೇರೆ ದೇಶಗಳಲ್ಲೇ ಉತ್ಪಾದನೆ ನಡೆಯುವಂತೆ ಮಾಡಿ ಅಲ್ಲಿನ ಅಂತಿಮ ಫಲವನ್ನು ಮಾತ್ರ ಪಡೆದುಕೊಳ್ಳುವುದು. ಮಾಹಿತಿ ತಂತ್ರಜ್ಞಾನದಲ್ಲಿ ಇದು ಸಾಮಾನ್ಯ. ಭಾರತದಲ್ಲೇ ಕುಳಿತು ತಂತ್ರಜ್ಞಾನಿ ಸಾಫ್ಟ್‌ವೇರನ್ನು ತಯಾರಿಸಬಹುದು. ಅದನ್ನು ಈ-ಮೇಲ್ ಮೂಲಕ ದೂರದ ದೇಶಕ್ಕೆ ಕಳುಹಿಸಬಹುದು.

ಮೆಕಿನ್ಸೆಯ ಈ ವರದಿಯ ಪ್ರಕಾರ ಇಂತಹ ಪ್ರಕ್ರಿಯೆಯಿಂದ ಅಮೆರಿಕಕ್ಕೆ ಹೆಚ್ಚಿನ ಲಾಭವಂತೆ. ಯಾಕೆಂದರೆ ಈ ಪ್ರಕ್ರಿಯೆಗೆ ಅಮೆರಿಕದಿಂದಲೇ ಉಪಕರಣ/ ಯಂತ್ರಗಳನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ಅತ್ಯಂತ ಕಡಿಮೆ ವೇತನ ದರವಿರುವ ದೇಶದಿಂದ ಸಂಗ್ರಹ ಮಾಡಿದರೆ ಈ ಲಾಭ ಇನ್ನೂ ಹೆಚ್ಚುತ್ತದೆ. ಈ ವರದಿಯ ಪ್ರಕಾರ ಅಮೆರಿಕದಿಂದಾಗುವ ಭಾರತದ ಆಮದು 1990 ರಲ್ಲಿ 2.5 ಶತಕೋಟಿ ಡಾಲರುಗಳಷ್ಟಿದ್ದದ್ದು 3.8 ಶತಕೋಟಿ ಡಾಲರುಗಳಿಗೆ ಏರಿದೆಯಂತೆ.

ಚಿಕ್ಕ ಮೌಲ್ಯದ ಸೇವೆಗಳನ್ನು ಆಮದು ಮಾಡಿಕೊಳ್ಳುವಲ್ಲಿ ಅಮೆರಿಕನ್ನರಿಗೆ ಬೇರೆ ಬೇರೆ ತರಹದ ಉದ್ಯೋಗಗಳೂ ದೊರೆಯುವುದರಿಂದ ಅದರಿಂದಲೂ ಲಾಭವೇ.

1.45 ರಿಂದ 1.47 ಡಾಲರುಗಳ ಮೌಲ್ಯವನ್ನು ಈ ಮೂಲಕ ಸೃಷ್ಟಿಸಿದರೆ ಅಮೆರಿಕಾಕ್ಕೆ 1.12 ರಿಂದ 1.14 ಡಾಲರಿನಷ್ಟು ಸೇರುತ್ತದಂತೆ. ರಫ್ತು ಮಾಡುವ ದೇಶಕ್ಕೆ ಬರೀ 33 ಸೆಂಟಿನಷ್ಟು ಮಾತ್ರ ದೊರೆಯುತ್ತದೆ. ಈ ಬಿಪಿಒ ಬಗ್ಗೆ ಇಷ್ಟೊಂದು ಆಸಕ್ತಿ ಸಾಮ್ರಾಜ್ಯಶಾಹಿಗಳಿಗೆ ಏಕೆ ಎಂದು ಈಗ ಸ್ಪಷ್ಟವಾಗಿ ತಿಳಿಯುತ್ತಿದೆಯಲ್ಲವೇ?

# ಶೇರು ಮಾರುಕಟ್ಟೆಯ ಅಟ್ಟಹಾಸ

ಇದೀಗ ಶೇರು ಮಾರುಕಟ್ಟೆಯ ಅಟ್ಟಹಾಸ ಶುರುವಾಗಿದೆ. ಶೇರು ಬೆಲೆ ಸೂಚ್ಯಾಂಕ 5900 ನ್ನು ದಾಟಿ ಹೋಗಿದೆ. ಶೇರುಗಳ ಬೆಲೆಗಳು ಗಗನಕ್ಕೇರುತ್ತಿದ್ದು ಜಗತ್ತಿನ ಜನರೆಲ್ಲ ಸಂತಸದಿಂದಿದ್ದಾರೆ ಎಂದು ಉದಾರೀಕರಣ ವಾದಿಗಳು ಹೇಳುತ್ತಿದ್ದಾರೆ. ಉದಾರೀಕರಣ ಹೇಗೆ ಜನರಿಗೆಲ್ಲ ಶ್ರೀಮಂತಿಕೆ ತರುತ್ತಿದೆ ಎಂದು ಅವರು ಬೆರಳೆತ್ತಿ ತೋರುತ್ತಿದ್ದಾರೆ.

ಶೇರು ಬೆಲೆಗಳ ಏರಿಕೆ ಇಳಿಕೆಯೇ ಒಂದು ಸಟ್ಟಾ ಅಥವಾ ಜೂಜಿನಂತೆ. ಕಂಪನಿಗಳ ನಿಜಸತ್ವದ ಮೇಲೆ ಈ ಬೆಲೆಗಳು ಅವಲಂಬಿಸಿದ್ದರೆ, ಆಗ ಕಂಪನಿಗಳ ನಿಜ ಬೆಳವಣಿಗೆ ಆಗುತ್ತದೆ, ದೇಶದ ಉತ್ಪಾದನೆ, ಗುಣಮಟ್ಟ ಹೆಚ್ಚುತ್ತಿದೆ ಎಂದು ಹೇಳಬಹುದಿತ್ತು.

ಶೇರು ಮಾರುಕಟ್ಟೆಯ ಏರುಪೇರು ಅಂತಹ ಕಾರಣಗಳಿಂದ ಬಂದಿರುವಂತದ್ದಲ್ಲ. ಅದು ಶೇರು ಮಾರುಕಟ್ಟೆಯಲ್ಲಿ ನಡೆಯುವಂತಹ ವ್ಯವಹಾರಗಳಿಂದಾಗಿ ಬರುವಂತಹದ್ದು. ಬಹಳ ಸಾರಿ ಇದು ನೀರಿನ ಮೇಲಿನ ಗುಳ್ಳೆಯಂತೆ ಯಾವಾಗ ಒಡೆಯುತ್ತದೋ ತಿಳಿಯದು.

ಶೇರು ಬೆಲೆ ಸೂಚ್ಯಾಂಕವನ್ನು ನೋಡಿ ದೇಶದ ಜನಸಾಮಾನ್ಯರ ಪರಿಸ್ಥಿತಿಯನ್ನು ವಿಶ್ಲೇಷಿಸಿದರೆ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಂದೂ ಜನ ಉಪವಾಸದಿಂದ ಸಾಯುತ್ತಿದ್ದಾರೆ. ಬಡತನ, ನಿರುದ್ಯೋಗಗಳು ಹೆಚ್ಚುತ್ತಿವೆ. ಉತ್ತರ ಭಾರತದಲ್ಲಿ ಜನ ಚಳಿಯನ್ನು ತಾಳಲಾರದೆ ಸಾಯುತ್ತಿದ್ದಾರೆ. ಬೇಸಿಗೆಯಲ್ಲಿ ಸೆಖೆಯಿಂದಲೂ ಜನ ಸತ್ತಿದ್ದಾರೆ. ಇದರ ಅರ್ಥ ಜನರಿಗೆ ಕನಿಷ್ಟ ಅವಶ್ಯಕತೆಗಳನ್ನು ಕೊಳ್ಳುವ ಸಾಮರ್ಥ್ಯವೂ ಇಲ್ಲ ಎಂಬುದು.

ಹಿಂದೆ ಇದೇ ರೀತಿ ಶೇರು ಮಾರುಕಟ್ಟೆ ಅಟ್ಟಹಾಸ ಮಾಡಿದ ನಂತರವೇ ಹರ್ಷದ್ ಮೆಹ್ತಾನ ಹಗರಣ ಹೊರಬಂದಿತ್ತು. ಇಂದು ಯಾವ ಹಗರಣ ಒಳಗೆ ಅಡಗಿದೆಯೋ ಗೊತ್ತಿಲ್ಲ. ಸರ್ಕಾರವಂತೂ ಈ ಸಾರಿ ಯಾವುದೇ ಹಗರಣ ಇಲ್ಲ. ಇದು ನಿಜವಾದ ಬೆಳವಣಿಗೆ ಎನ್ನುತ್ತಿದೆ.

ದಿನನಿತ್ಯ ನಡೆಯುತ್ತಿರುವುದೇ ಹಗರಣ ಇದಕ್ಕಿಂತ ಇನ್ನೇನು ಹಗರಣ ಬೇಕು ಎಂಬ ಧೋರಣೆ ಇರಬಹುದೆ ಈ ಮಾತುಗಳಲ್ಲಿ?

# ಜುಟ್ಟಿಗೆ ವಿಶ್ವ ಬ್ಯಾಂಕಿನ ಮಲ್ಲಿಗೆ

ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಎಂಬ ನಾಣ್ಣುಡಿಯಂತೆ ವಿಶ್ವಬ್ಯಾಂಕ್ ಭಾರತ ಶೇ.8 ರಷ್ಟು ದರದಲ್ಲಿ ಬೆಳವಣಿಗೆ ಹೊಂದಬಹುದೆಂದು ಹೇಳಿದೆ. ವಿಶ್ವಬ್ಯಾಂಕಿನ ದೇಶೀ ನಿರ್ದೇಶಕ ಮೈಕೆಲ್ ಕಾರ್ಟರ್‌ನ ಪ್ರಕಾರ ಭಾರತ ಈ ಬೆಳವಣಿಗೆಯ ದರವನ್ನು ಸಾಧಿಸಲು ಸಾಧ್ಯವಂತೆ.

ಈ ಮಹಾಶಯ ಭಾರತ ಶಿಕ್ಷಣ ಮತ್ತು ಆರೋಗ್ಯಗಳಂತಹ ಸೇವೆಗಳಿಗೆ ಒತ್ತು ನೀಡಬೇಕು ಎಂದೂ ಹೇಳಿದ್ದಾನೆ. ಶಿಕ್ಷಣ ಯಾರಿಗೆ ಆರೋಗ್ಯ ಯಾರಿಗೆ ಎಂದು ಆತ ಹೇಳಿಲ್ಲ. ಬಂಡವಾಳಿಗರ ಲಾಭಕ್ಕಾಗಿ ಶಿಕ್ಷಣ ಮತ್ತು ಆರೋಗ್ಯದ ಮೇಲೆ ಒತ್ತು ನೀಡಬೇಕು ಎಂದು ಆತ ಹೇಳಿರಬಹುದು.

ಮುಂದಿನ ಐವತ್ತು ವರ್ಷಗಳಲ್ಲಿ ಭಾರತ ಮತ್ತು ಚೀನಾಗಳಲ್ಲಿ ಅಪಾರ ಬೆಳವಣಿಗೆ ಆಗಲಿದೆ ಎಂಬುದನ್ನು ಗೋಲ್ಡ್‌ಮನ್ ಸಾಕ್ಸ್‌ನ ವರದಿಯನ್ನು ಈತ ಉದ್ಧರಿಸಿದ್ದಾನೆ.

ಬಹುತೇಕ ಮುಂದುವರಿದ ದೇಶಗಳಲ್ಲಿ 2020 ರ ವೇಳೆಗೆ ಕಾರ್ಮಿಕರ ಕೊರತೆ ಇದ್ದರೆ ಭಾರತದಲ್ಲಿ 47 ದಶಲಕ್ಷ ಕಾರ್ಮಿಕರು ಮಿಗತೆಯಾಗಿರುತ್ತಾರೆ ಎಂದೂ ಈ ವರದಿ ಹೇಳಿವೆಯಂತೆ: ಕಾರ್ಮಿಕರ ಮಿಗುತೆಯೆಂದರೆ ನಿರುದ್ಯೋಗಿಗಳು ಎಂದೇ ಅರ್ಥ. ವಿಶ್ವಬ್ಯಾಂಕಿನ ಭಾಷೆ ಚೆನ್ನಾಗಿದೆಯಲ್ಲವೆ?

# ಭೀತಿ-ಜಾತಿ ಜಗತ್ತನ್ನು ಆಳಬಾರದು: ಪ್ರೀತಿ-ನೀತಿಗಳು ಆಳಬೇಕು

**ದಕ್ಷಿಣ ಕನ್ನಡದಲ್ಲಿ ಸತತವಾಗಿ ಕೋಮುಗಲಭೆಗಳನ್ನು ಹುಟ್ಟುಹಾಕುತ್ತಿರುವ ಸಂಘ ಪರಿವಾರದ ಕೃತ್ಯಗಳ ವಿರುದ್ಧ ಶಾಂತಿಸೌಹಾರ್ದತೆಗಾಗಿ ಪ್ರಗತಿಪರರು ಶ್ರಮಿಸುತ್ತಿದ್ದಾರೆ. ಈಚೆಗೆ ಉಳ್ಳಾಲದಲ್ಲಿ ಹೊತ್ತಿ ಉರಿದ ಗಲಭೆಯ ಹಿನ್ನೆಲೆಯಲ್ಲಿ ನಡೆದ ಸೌಹಾರ್ದತಾ ರ್‍ಯಾಲಿಯ ವರದಿಯಿಲ್ಲಿದೆ.**

ದೇಶ ಆಳಲು ಹಿಂದೂ ಕೋಮುವಾದಿಗಳಿಗೆ, ಮುಸ್ಲಿಂ ಮೂಲಭೂತವಾದಿಗಳಿಗೆ ಆಸೆ ಇದೆ, ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಆದರೆ ಭೀತಿವಾದಿಗಳು, ಜಾತಿವಾದಿಗಳನ್ನು ಜಗತ್ತನ್ನು ಆಳಲು ಬಿಡಬಾರದು. ಪ್ರೀತಿ ನೀತಿಗಳು ಆಳುವಂತಾಗಬೇಕು ಎಂದು ನಿಡುಮಾಮಿಡಿ ಮಠದ ಶ್ರೀ ಚನ್ನಮಲ್ಲವೀರಭದ್ರ ಸ್ವಾಮೀಜಿ ಹೇಳಿದ್ದಾರೆ.




'**ಸಹಮತ**'ದ ಆಶ್ರಯದಲ್ಲಿ ಡಿಸೆಂಬರ್ 4 ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ನಡೆದ ಕೋಮುವಾದ ವಿರೋಧಿ ಬೃಹತ್ ಜಾಥಾ ಮತ್ತು ಸಮಾವೇಶದಲ್ಲಿ ಅವರು ಮಾತನಾಡುತ್ತಿದ್ದರು.

ನಾವು ಮೊದಲು ಭಾರತೀಯರು, ನಂತರ ಸ್ವಾಮೀಜಿ ಇತ್ಯಾದಿಯಾಗಿದ್ದೇನೆ. ನಾನು ಹಿಂದೂ ಅಲ್ಲ, ಮುಸ್ಲೀಮನೂ ಅಲ್ಲ, ಕ್ರೈಸ್ತ, ಲಿಂಗಾಯಿತನೂ ಅಲ್ಲ. ಯಾವುದೇ ಸ್ಥಾಪಿತ ಧರ್ಮದ ಅನುಯಾಯಿಯೂ ಅಲ್ಲ: ಮನುಷ್ಯ ಧರ್ಮದ ಪ್ರತಿಪಾದಕನಾಗಿದ್ದು, ಕರ್ತವ್ಯ ನಿರ್ವಹಣೆಗಾಗಿ ಈ ವೇಶದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ ಎಂದು ಸ್ಪಷ್ಟ ಮಾತಿನಲ್ಲಿ ಹೇಳುವ ಮೂಲಕ ಭಾಷಣ ಆರಂಭಿಸಿದ ನಿಡುಮಾಮಿಡಿ ಸ್ವಾಮೀಜಿಯವರು, ಫ್ಯಾಶಿಸ್ಟ್ ಮನೋಭಾವದವರು ಎಲ್ಲಾ ಧರ್ಮದಲ್ಲೂ ಇದ್ದಾರೆ. ಧರ್ಮದ ಹೆಸರಲ್ಲಿ ನಡೆಯುವ ಭಯೋತ್ಪಾದನೆ, ಕೋಮುವಾದ, ಮೂಲಭೂತವಾದ ಮತ್ತು ಇವರನ್ನು ದುಡಿಸುವ ಸಾಮ್ರಾಜ್ಯಶಾಹಿಗಳು ಗುಲಾಮರನ್ನಾಗಿ ಮಾಡುತ್ತಿದ್ದಾರಲ್ಲದೆ ಜಗತ್ತನ್ನು ಕೈಗೆತ್ತಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ ಎಂದರು.

**ಪುರೋಹಿತಶಾಹಿ ಸಮಾಜೋತ್ಸವ**

ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಸಹಮತ ಬಾಂಧವರು ಸ್ವಾಮೀಜಿ ಮಾತುಗಳನ್ನು ಚಪ್ಪಾಳೆ ತಟ್ಟಿಯೇ ಸ್ವಾಗತಿಸಿದಾಗ, ನಾನು ಯಾರನ್ನೂ ಸಂತಸಪಡಿಸಲು ಈ ಮಾತು ಹೇಳುತ್ತಿಲ್ಲ. ಇತ್ತೀಚೆಗೆ ನಡೆಯುತ್ತಿರುವ ಹಿಂದೂ ಸಮಾಜೋತ್ಸವಗಳು ಬಿಜೆಪಿ ಪ್ರಾಯೋಜಿತ, ಪುರೋಹಿತಶಾಹಿ ಸಮಾಜೋತ್ಸವಗಳಾಗಿವೆ. ಅದರಲ್ಲಿ ಅನ್ಯ ಧರ್ಮೀಯರನ್ನು ದ್ವೇಷಿಸುವ ಸಂಘ ಪರಿವಾರದವರೇ ತುಂಬಿಕೊಂಡಿರುವಾಗ ಅದು ಹಿಂದೂ ಸಮಾಜೋತ್ಸವ ಹೇಗೆ ಆಗಲು ಸಾಧ್ಯ? ಎಂದು ಪ್ರಶ್ನಿಸಿದರು.

ಮುಸ್ಲಿಂ ಮೂಲಭೂತವಾದಿಗಳೂ ಅಷ್ಟೆ, ಸೂಫಿ ಸಂತರನ್ನು ಎಷ್ಟರಮಟ್ಟಿಗೆ ಗೌರವಿಸುತ್ತಾರೆ? ಎಂದು ಕೇಳಿದ ನಿಡುಮಾಮಿಡಿ ಸ್ವಾಮೀಜಿ, ಮೊದಲು ನೀವು ಕುರಾನ್ ಓದಿ ಎಂದು ಹೇಳಿದರು. ಇಸ್ಲಾಮ್ ಖಡ್ಗದಿಂದ ಹುಟ್ಟಿದ್ದಲ್ಲ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರೂ ಕೂಡಾ ಅದನ್ನು ಮುಚ್ಚಿಟ್ಟು ಇದೀಗ ಅವರ ಹೇಳಿಕೆಗಳನ್ನು ಸಂಘ ಪರಿವಾರದವರು ತಿರುಚುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆಪಾದಿಸಿದ ಅವರು, ಶೇ 10 ರಷ್ಟಿರುವ ಕೋಮುವಾದಿಗಳು ಮತ್ತು ಮೂಲಭೂತವಾದಿಗಳಿಂದಾಗಿ ಶೇ 90 ರಷ್ಟು ಹಿಂದೂ ಮುಸ್ಲಿಮರು ಭಯದ ವಾತಾವರಣವನ್ನು ತಿಳಿಗೊಳಿಸಲು ರಾಜಕಾರಣಿಗಳೂ ವಿಫಲವಾಗಿದ್ದಾರೆ. ನಿಮಗೆ ಗಾಂಧಿ ಹಿಂದುತ್ವ ಬೇಕೆ, ಮೋದಿ ಹಿಂದುತ್ವ ಬೇಕೆ, ನಿಮಗೆ ಹಿಟ್ಲರ್ ನೀತಿ ಬೇಕೆ, ತೆರೆಸಾರ ನಿಲುವು ಬೇಕೆ, ನಿಮಗೆ ಅಬ್ದುಲ್ ಕಲಾಂ ಆಝಾದ್‌ರ ಆದರ್ಶ ಬೇಕೆ, ಲಾಡೆನ್‌ನ ಕಪಟತನ ಬೇಕೆ? ಎಂದು ಪ್ರಶ್ನಿಸಿದರು.

ಬಾಬರಿ ಮಸೀದಿ ಉರುಳಿಸಿಯಾಗಿದೆ. ಇದೀಗ ಅದೇ ಜಾಗದಲ್ಲಿ ಮಂದಿರವಾಗಬೇಕು ಎನ್ನುತ್ತಾರೆ. ಅದರ ಪಕ್ಕದಲ್ಲೇ ಮಂದಿರ ಕಟ್ಟಿದರೆ ಆಗದೆ, ಇತರ ಕಡೆಯೂ ಮಂದಿರ ಮಸೀದಿ ಅಕ್ಕಪಕ್ಕದಲ್ಲಿಲ್ಲವೆ? ಈ ಸಮಸ್ಯೆ ಜೀವಂತವಾಗಿ ಉಳಿಯಲು ರಾಜಕೀಯ ಪಕ್ಷಗಳು, ಪುರೋಹಿತಶಾಹಿಗಳು ಕಾರಣ. ಹಾಗಾಗಿ ಅವರ ದಾಳಕ್ಕೆ ಯಾರೂ ಸಿಗಬೇಡಿ. ಮನಸ್ಸು ಮಾಡಿದರೆ, ಅಂದಿನ ಪ್ರಧಾನಿ ಬಾಬರಿ ಮಸೀದಿಯನ್ನು ಉಳಿಸಬಹುದಿತ್ತು. ಆದರೆ ಅವರಿಗೆ ಆ ಧೈರ್ಯ ಬರಲಿಲ್ಲ ಎಂದು ಹೇಳಿದರು.

**ಹಿಂದುಗಳಿಂದ ಮೊಹರಂ ಆಚರಣೆ**

ಹಾಸ್ಯ ಮಿಶ್ರಿತ ಮಾತಿನಲ್ಲೇ ಭಾಷಣ ಆರಂಭಿಸಿದ ಗದುಗಿನ ವಿರಕ್ತ ಮಠದ ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿ ಅವರು, ದೇಶದಲ್ಲಿ ಸುಮಾರು 12 ಸಾವಿರ ಸೂಫಿಗಳಿದ್ದು, ಅವರ ಉದಾರತೆಯಿಂದ ಇಂದು ಸಾಮರಸ್ಯ ಬೆಳೆದಿದೆ. ದೇಶಾದ್ಯಂತ ಅನೇಕ ಸೂಫಿ ಸಂತರು ಸಹಬಾಳ್ವೆ, ಸಹಿಷ್ಣುತೆಗೆ ಹೆಸರುವಾಸಿಯಾಗಿದ್ದಾರೆ. ನಮ್ಮ ಕಡೆ ಹಿಂದೂಗಳೇ ಮೊಹರಂ ಆಚರಿಸುತ್ತಾರೆ. ಹಾಗಿರುವಾಗ ಇದೀಗ ಸುಮ್ಮನೆ ಜಗಳ ಯಾಕೆ ಎಂದು ಕೇಳಿದರು.

ಬಾಬಾ ಬುಡನ್‌ಗಿರಿ ಸಮಸ್ಯೆ ಜೀವಂತವಾಗಿ ಉಳಿಯಬಾರದು. ಸರ್ಕಾರ ಈ ಬಗ್ಗೆ ಯಾವತ್ತೋ ಸೂಕ್ತ ಕ್ರಮ ಕೈಗೊಳ್ಳಬೇಕಾಗಿತ್ತು. ಅದರ ನೆಪದಲ್ಲಾದರೂ ಕೂಡಾ ನಾವು ಸೌಹಾರ್ದ ಕಾಪಾಡೋಣ ಎಂದು ತೋಂಟದ ಸಿದ್ಧಲಿಂಗ ಮಹಾಸ್ವಾಮಿ ಅವರು ಕರೆ ನೀಡಿದರು.

## ಮನುಷ್ಯತ್ವ ನಾಶಕ್ಕೆ ಯತ್ನ - ಜಿ.ರಾಜಶೇಖರ್

ಬಡತನ, ನಿರುದ್ಯೋಗ, ಜಾಗತೀಕರಣ ಇತ್ಯಾದಿ ಸಮಸ್ಯೆ ಇದ್ದರೂ ಕೂಡಾ ಸಂಘ ಪರಿವಾರದವರು ಅದರ ವಿರುದ್ಧ ಸೊಲ್ಲೆತ್ತದೆ, ಅದ್ಯಾವುದೋ ಶತ್ರುರಾಷ್ಟ್ರದ ಆಕ್ರಮಣಕಾರರನ್ನು ಎದುರಿಸುವವರ ಹಾಗೆ ವರ್ತಿಸುತ್ತಿದ್ದಾರೆ. ಉಡುಪಿ ಸಮಾಜೊತ್ಸವಕ್ಕೆ ಹಾಕಿದ ಬ್ಯಾನರ್‌ವೊಂದನ್ನು ನೋಡುವಾಗ ಬೆಚ್ಚಿಬಿದ್ದರೆ ಅಚ್ಚರಿ ಇಲ್ಲ. ನರೇಂದ್ರ ಮೋದಿ, ದಾರಾಸಿಂಗ್, ಬಾಳಠಾಕ್ರೆಯನ್ನು ಹೊಗಳಿ ಮನುಷ್ಯತ್ವ ನಾಶಕ್ಕೆ ಯತ್ನಿಸಿದ್ದಾರೆ ಎಂದು ಚಿಂತಕ, ಜಿ.ರಾಜಶೇಖರ್ ಆಪಾದಿಸಿದರು.

ಇತ್ತೀಚೆಗೆ ರೈಲ್ವೆ ಗ್ಯಾಂಗ್‌ಮೆನ್ ಪರೀಕ್ಷೆಗಾಗಿ ಹಾಜರಾದ ಮರಾಠಿಯೇತರ ಅಭ್ಯರ್ಥಿಗಳ ಮೇಲೆ ಶಿವಸೇನೆಯ ಕಾರ್ಯಕರ್ತರು ಹಲ್ಲೆ ಮಾಡಿದರು. ಆ ಬಗ್ಗೆ ಕನ್ನಡದ ಯಾವ ಪತ್ರಿಕೆಗಳೂ ಕೂಡಾ ಸುದ್ದಿಮಾಡಲಿಲ್ಲ ಎಂದು ವಿಷಾದಿಸಿದರು.

ಮತ್ತೋರ್ವ ಭಾಷಣಕಾರ ಸಿಪಿಐ(ಎಂ) ಕಾರ್ಯದರ್ಶಿ ಜಿ.ಎನ್.ನಾಗರಾಜ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಹಮತದ ಗೌರವಾಧ್ಯಕ್ಷ ಸದಾನಂದ ಪೂಂಜಾ, ಅಧ್ಯಕ್ಷ, ಎಂ.ಬಿ.ಸದಾಶಿವ, ಉಪಾಧ್ಯಕ್ಷ, ಪಟ್ಟಾಭಿ ರಾಮ ಸೋಮಯಾಜಿ, ಪ್ರಧಾನ ಕಾರ್ಯದರ್ಶಿ ಉಮರ್ ಯು.ಎಚ್., ಬಿ.ಮಾಧವ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮಾವೇಶಕ್ಕೆ ಮುನ್ನ ಬಾವುಟಗುಡ್ಡೆಯಿಂದ ನೆಹರೂ ಮೈದಾನಕ್ಕೆ ಸಾವಿರಾರು ಮಂದಿ ರ್‍ಯಾಲಿ ನಡೆಸಿದರಲ್ಲದೆ, 'ಹಿಂದೂ ಮುಸ್ಲೀಮರೆಂದೂ ಶತ್ರುಗಳಲ್ಲ, ಕೋಮುವಾದಿಗಳೆಂದೂ ಬಂಧುಗಳಲ್ಲ, ನಮ್ಮಲ್ಲಿಲ್ಲ ಹಿಂದೂ, ಮುಸ್ಲಿಂ, ಕ್ರೈಸ್ತ ರಕ್ತ. ಕೋಮುವಾದಿಗಳೇ ಧಿಕ್ಕಾರ, ಕರ್ನಾಟಕವನ್ನು ಗುಜರಾತ್ ಮಾಡಲು ಬಿಡಲಾರೆವು' ಇತ್ಯಾದಿ ಘೋಷಣೆ ಗಳು ಮುಗಿಲು ಮುಟ್ಟಿದವು.

**ಮಾಧ್ಯಮ ಲೋಕದ ಅಳಲೆಕಾಯಿ ಪಂಡಿತರು ಸ್ಥಳೀಯ ಮಟ್ಟದಿಂದ ಅಂತರಾಷ್ಟ್ರೀಯದವರೆಗೂ ಚಿತ್ರ-ವಿಚಿತ್ರ ಪ್ರತಿಮೆ, ಸುದ್ದಿಗಳನ್ನು ನೇಯುತ್ತಿದ್ದಾರೆ. ಇರಾಕ್‌ನಲ್ಲಿ ಅಮೇರಿಕಾ ಮಿತ್ರರ ಸೈನ್ಯ ಅಲ್ಲಿನ ಜನರ ಪ್ರತಿರೋಧಕ್ಕೆ ತತ್ತರಿಸುತ್ತಿರುವುದು ಸದ್ದಾಂನಿಂದ ಅಲ್ಲ ಎಂಬುದನ್ನು ಮರೆ ಮಾಚುತ್ತಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ಈಚೆಗೆ ವಾಜಪೇಯಿಯವರ ಗೋಸುಂಬೆತನವನ್ನು, ಆಂಧ್ರಪ್ರದೇಶವನ್ನು ಒಂದು ಕಂಪನಿಯಾಗಿಸಿರುವ ಕಾರ್ಯನಿರ್ವಾಹಕಾಧಿಕಾರಿ ನಾಯ್ಡುವಿನ 'ನಾಟಕ'ಗಳನ್ನು ಬಣ್ಣದ ರಂಗಿನಿಂದ ಸಿಂಗರಿಸುತ್ತಾರೆ! ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಸಾಧನೆಗಳನ್ನು ಬೇಕೆಂದೇ ಖಂಡಿಸುತ್ತಾರೆ, ಗೌಣಗೊಳಿಸುತ್ತಾರೆ. ಈ ಅಳಲೆಕಾಯಿ ಪಂಡಿತರ 'ಗೋಬೆಲ್ಸ್' ನೀತಿಗೆ ಏನಾದರೂ ಕಡಿವಾಣ - ಮಿತಿಗಳೆಂಬುದು ಇದೆಯೆ? ಓದಿ.**

# ಎಲ್ಲೆಲ್ಲೂ ಅಳಲೇಕಾಯಿ ಪಂಡಿತರೆ

## ಡೋಂಗಿತನಕ್ಕೆ ರಂಗಿನ ಸಿಂಗಾರ! - ಸತ್ಯಕ್ಕೆ ಸಿಗದ ಪುರಸ್ಕಾರ!

ನಾವು ಹೆಚ್ಚೆಚ್ಚು ಭ್ರಮಾಲೋಕದಲ್ಲಿ ಬದುಕುವಂತೆ ಮಾಡಲಾಗುತ್ತಿದೆ. ವಿವಿಧ ಹಂತಗಳಲ್ಲಿನ ಅಳಲೇಕಾಯಿ ಪಂಡಿತರು ತಂತಮ್ಮ ಅಜೆಂಡಾಗಳನ್ನು ಮುಂದೊತ್ತಲು ಚಿತ್ರ-ವಿಚಿತ್ರ ಪ್ರತಿಮೆಗಳನ್ನು ನೇಯುತ್ತಿದ್ದಾರೆ. ಸ್ಥಳೀಯ ಮಟ್ಟದಿಂದ ಹಿಡಿದು ಅಂತರ್‌ರಾಷ್ಟ್ರೀಯ ಮಟ್ಟದವರೂ ಇದರಲ್ಲಿ ಕಾಣುವ ಒಂದು ಸಾಮಾನ್ಯ ಎಳೆಯೆಂದರೆ ನಾಝಿ (ಹಿಟ್ಲರ್) ಪ್ರಚಾರ ಮಂತ್ರಿ ಗೋಬೆಲ್ಲನ "ಸಾಕಷ್ಟು ದೊಡ್ಡ ಸುಳ್ಳನ್ನು ಅದು ಸತ್ಯ ಎಂದು ಅನಿಸುವವರೆಗೆ ಮತ್ತೆ - ಮತ್ತೆ ಹೇಳುತ್ತಿರಿ" ಎಂಬ ಸೂತ್ರಕ್ಕೆ ಯಾವುದೇ ನಾಚಿಕೆಯಿಲ್ಲದೆ ಇವರೆಲ್ಲಾ ಬದ್ಧರಾಗಿದ್ದಾರೆ!


ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸದ್ದಾಂ ಹುಸೇನರ ಬಂಧನ ಅಮೇರಿಕನ್ ಸಾಮ್ರಾಜ್ಯಶಾಹಿಯ ಒಂದು ಹೊಸ ವಿಜಯವೆಂಬತೆ ಬಿಂಬಿಸಲಾಗುತ್ತಿದೆ. ಆದರೆ ಇದು ಆತನನ್ನು ನಿಜವಾಗಿಯೂ 'ಅಗೆದು ತೆಗೆಯಲು' ಅಮೇರಿಕನ್ ಸಾಮ್ರಾಜ್ಯಶಾಹಿಯ ಅತ್ಯಂತ ಅಮಾನುಷ ಮಿಲಿಟರಿ ಆಕ್ರಮಣಕ್ಕೆ ಎಂಟು ತಿಂಗಳು ಬೇಕಾದವು ಎಂಬುದನ್ನು ಮರೆಮಾಚುತ್ತದೆ. ಅಷ್ಟೇ ಅಲ್ಲ ಇರಾಕ್ ಯುದ್ಧ ಅಧಿಕೃತವಾಗಿ ಮುಗಿದ ನಂತರವೇ ಹೆಚ್ಚು ಸಂಖ್ಯೆಯ ಅಮೇರಿಕನ್ ಮತ್ತು ಬ್ರಿಟಿಷ್ ಸೈನಿಕರನ್ನು ಬಲಿ ತೆಗೆದುಕೊಂಡಿರುವ ಗೆರಿಲ್ಲಾ ಕಾರ್ಯಾಚರಣೆಗಳನ್ನು ಈಗ ವಿಶ್ವದಾದ್ಯಂತ ಟಿ.ವಿಗಳಲ್ಲಿ ತೋರಿಸುತ್ತಿರುವ ಸುಸ್ತಾದ ಎಲ್ಲೆಡೆಗಳಿಂದ ಹೊಡೆತ ತಿನ್ನುತ್ತಿರುವ ಸದ್ದಾಂ ಹುಸೇನ್ ಅಂತೂ ನಿರ್ದೇಶಿಸುತ್ತಿರಲಿಕ್ಕಿಲ್ಲ ಎಂಬ ಸಂಗತಿಯನ್ನು ಮರೆ ಮಾಚಲಾಗುತ್ತಿದೆ. ಇರಾಕೀ ಜನತೆ ತಮ್ಮ ಮೇಲಿನ ವಸಾಹತುಶಾಹೀ ಆಳ್ವಿಕೆಗೆ ಸರ್ವರೀತಿಯಿಂದಲೂ ಪ್ರತಿಕ್ರಿಯಿಸುತ್ತಿದ್ದಾರೆ ಎಂಬುದೇ ವಾಸ್ತವತೆಯಿದ್ದಂತಿದೆ. ಎಲ್ಲಕ್ಕೂ ದೊಡ್ಡ ಸುಳ್ಳೆಂದರೆ ಸಾಮೂಹಿಕ ವಿನಾಶಕ ಅಸ್ತ್ರಗಳನ್ನು ಕುರಿತದ್ದು. ಇರಾಕಿನ ಅತಿಕ್ರಮಣಕ್ಕೆ ಕೊಟ್ಟ ಪ್ರಥಮ ಕಾರಣ ಇದು. ಆದರೆ ಅತ್ಯಂತ ಬರ್ಬರ ಅತಿಕ್ರಮಣದ ನಂತರವೂ ಅಮೇರಿಕನ್ ಸಾಮ್ರಾಜ್ಯ ಶಾಹಿಗೆ ಮತ್ತು ಅದರ ಡೊಳ್ಳು ಬಾರಿಸುವ ಬ್ರಿಟನ್ನಿಗೆ ಯಾವುದೇ ಇಂತಹ ಅಸ್ತ್ರ ಸಿಕ್ಕಿಲ್ಲ. ಸದ್ದಾಂ ಬಳಿ ಎರಡು ಎಕೆ47 ಮತ್ತೊಂದು ಪಿಸ್ತೂಲಷ್ಟೇ ಅವರಿಗೆ ಸಿಕ್ಕಿದ್ದು!.

**ಇನ್ನೂ ಘೋರ**

ನಮ್ಮಲ್ಲಿನ ಅಳಲೇಕಾಯಿ ಪಂಡಿತರಂತೂ ಇನ್ನೂ ಘೋರ. ಡಿಸೆಂಬರ್ 17 ರ 'ಇಕನಾಮಿಕ್ ಟೈಮ್ಸ್'ತನ್ನ ಮುಖಪುಟದಲ್ಲಿ ಒಂದು ಬಣ್ಣ-ಬಣ್ಣದ ಚಿತ್ರ ಪ್ರಕಟಿಸಿದೆ. ಇದು ವಾಜಪೇಯಿ ಸರಕಾರದಡಿ ಭಾರತದಲ್ಲಿ "ಉತ್ತಮ ಅನಿಸಿಕೆ" (feel good) ಹೆಚ್ಚುತ್ತಿದೆ ಎಂದು ವರ್ಣಿಸುತ್ತದೆ. ಏರುತ್ತಿರುವ ಶೇರುದರಗಳು, ಪ್ರಕಾಶಮಾನ ಭಾರತ ಮತ್ತು ಈಗ ಆಸ್ಟ್ರೇಲಿಯಾದಲ್ಲಿ ನಮ್ಮ ಕ್ರಿಕೆಟ್ ತಂಡದ ಚಾರಿತ್ರಿಕ ಗೆಲುವು ಇವೆಲ್ಲಾ ಇದರ ಸಂಕೇತಗಳಂತೆ. ಆಸ್ಟ್ರೇಲಿಯಾದಲ್ಲಿ ಭಾರತದ ಕ್ರಿಕೇಟ್ ತಂಡ 22 ವರ್ಷಗಳ ನಂತರ ಒಂದು ಕ್ರಿಕೆಟ್ ಪಂದ್ಯ ಗೆದ್ದದ್ದು ಕೂಡಾ ವಾಜಪೇಯಿ ಸರಕಾರದಿಂದಾಗಿ ಎಂದು ನಾವು ನಂಬಬೇಕಂತೆ!.

ಎಂದಿನಂತೆ ಇಲ್ಲಿಯೂ ಗಂಭೀರ ವಾಸ್ತವತೆಯನ್ನು ಮರೆ ಮಾಚುವ ಪ್ರಯತ್ನ ನಡೆದಿದೆ. ಈ ಲೇಖನ ಮುದ್ರಣಕ್ಕೆ ಹೋಗುತ್ತಿರುವಂತೆ ದಕ್ಷಿಣ - ಪೂರ್ವ ಭಾರತವನ್ನು ಒಂದು ವಿನಾಶಕಾರೀ ಚಂಡಮಾರುತ ಅಪ್ಪಳಿಸಿದ ಸುದ್ದಿ ಬಂದಿದೆ. ಆಗಲೇ ಸುಮಾರು 50 ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಇದು ಹೆಚ್ಚಾಗಿ ತಟ್ಟಿರುವುದು ಆಂಧ್ರಪ್ರದೇಶವನ್ನು ಸಾವಿರಾರು ಮನೆಗಳು ನೆಲಸಮವಾಗಿ ಜನ ನಿರಾಶ್ರಿತರಾಗಿ ದ್ದಾರೆ. ಹಸುಕರುಗಳು, ಇತರ ಪಶುಸಂಪತ್ತು ನಾಶವಾಗಿದೆ. ಆದರೆ ಇವು ಯಾವುವೂ ನಮ್ಮ ರಾಷ್ಟ್ರೀಯ ದೈನಿಕಗಳ ಮುಖಪುಟಗಳಲ್ಲಿ ಕಾಣುತ್ತಿಲ್ಲ. ಅಲ್ಲಿ ಕಾಣುತ್ತಿರುವುದು ಅದೆ ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಪ್ರಮೋದ್ ಮಹಾಜನ್‌ರ ಕಚೇರಿಗೆ ಭೇಟಿ ನೀಡಿರುವ ಸುದ್ದಿಯಷ್ಟೆ. ಇತ್ತೀಚಿನ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಜಯಗಳಿಸಿದ್ದು ಹೇಗೆ ಎಂಬುದನ್ನು ಕಲಿಯಲು ಆತ ಅಲ್ಲಿಗೆ ಹೋಗಿದ್ದರಂತೆ!

ಆಂಧ್ರಪ್ರದೇಶ ಎಂಬ ರಾಜ್ಯದ ಮುಖ್ಯಮಂತ್ರಿಯೆಂಬುದಕ್ಕಿಂತ ಹೆಚ್ಚಾಗಿ ಆಂಧ್ರಪ್ರದೇಶ ಎಂಬ ಕಂಪನಿಯ ಮುಖ್ಯಸ್ಥನೆಂದೇ ಕರೆಸಿಕೊಳ್ಳಲು ಹೆಚ್ಚು ಇಷ್ಟ ಪಡುವ ಚಂದ್ರಬಾಬುನಾಯ್ಡುಗೆ ಭಾರತದಲ್ಲಿ ರಾಜಕೀಯವನ್ನು ಮತ್ತು ಚುನಾವಣೆಗಳನ್ನು ಒಂದು ಮ್ಯಾನೇಜ್‌ಮೆಂಟ್ ಸಮಸ್ಯೆಯ ಮಟ್ಟಕ್ಕಿಳಿಸುವಲ್ಲಿ ಬಿಜೆಪಿ ಸಹಜ ಮಿತ್ರನಾಗಿ ಕಂಡುಬಂದಿದೆ.



ಅಷ್ಟರಮಟ್ಟಿಗೆ ದೇಶದ ಆರ್ಥಿಕ ಕಂಪನೀಕರಣದ ಬೆನ್ನ ಹಿಂದೆಯೇ ರಾಜಕೀಯ ಕಂಪನೀಕರಣವೂ ನಡೆಯುತ್ತಿರುವಂತೆ ಕಾಣುತ್ತದೆ.

**ಮ್ಯಾನೇಜ್‌ಮೆಂಟ್ ಪ್ರಶ್ನೆಯಲ್ಲ**

ಅಧಿಕಾರಸ್ಥರ ವಿರುದ್ಧದ ಭಾವನೆ ಎಂಬ ಅಂಶವನ್ನು ಪಶ್ಚಿಮ ಬಂಗಾಳದಲ್ಲಿ ಹೇಗೆ ಸತತವಾಗಿ ವಿಫಲಗೊಳಿಸಿ ಆರು ಚುನಾವಣೆಗಳನ್ನು ಗೆಲ್ಲಲಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವಾಗ ಸಿಪಿಐ(ಎಂ) ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡಲಾಗುತ್ತಿದೆ. ವಾಸ್ತವತೆಯನ್ನು ಮರೆಮಾಚಿ ಭ್ರಮಾಲೋಕವನ್ನು ಸೃಷ್ಟಿಸುವ ಈ ಮಂದಿಗೆ ಅಧಿಕಾರಸ್ಥರ ವಿರುದ್ಧದ ಭಾವನೆ ಏಕೆ ಕೆಲಸ ಮಾಡುತ್ತದೆ ಎಂಬುದನ್ನು ಮರೆಮಾಚಲು ಪ್ರಯತ್ನಿಸುತ್ತಾರೆ. ಜನಗಳ ಅಗತ್ಯಗಳು ತಮ್ಮ ಆದ್ಯತೆ ಗಳಾಗಿರದೆ ತಂತಮ್ಮ ಜೇಬುಗಳನ್ನು ತುಂಬಿ ಕೊಳ್ಳುವುದು, ಹಾಗೂ ಅಧಿಕಾರಕ್ಕೆ ಹೇಗಾದರೂ ಮರಳುವ ಕಸರತ್ತುಗಳೇ ಆದ್ಯತೆಗಳಾಗಿರುವ ಸರಕಾರಗಳ ಮೇಲಷ್ಟೆ ಈ ಅಂಶ ಕೆಲಸ ಮಾಡು ತ್ತದೆ ಎಂಬುದನ್ನು ಅವರು ಮರೆಮಾಚುತ್ತಾರೆ.

ಪಶ್ಚಿಮ ಬಂಗಾಳದಲ್ಲಿ ಏನಾಗಿದೆ ಎಂದು ಮತ್ತೊಮ್ಮೆ ನೋಡೋಣ. ಎಡರಂಗ ಸರಕಾರದ ಆಡಳಿತದಲ್ಲಿ ಇದುವರೆಗೆ 13 ಲಕ್ಷ ಎಕ್ರೆ ಜಮೀನನ್ನು ಅದನ್ನು ಕಾನೂನುಬಾಹಿರವಾಗಿ ಹಿಡಿದುಕೊಂಡಿದ್ದ ಭೂಮಾಲಿಕರಿಂದ, ಪಟ್ಟಭದ್ರಹಿತಾಸಕ್ತಿಗಳಿಂದ ಪಡೆದು 25 ಲಕ್ಷ ಭೂಹೀನರಿಗೆ ಹಂಚಲಾಗಿದೆ. ಎಕ್ರೆಗೆ 1 ಲಕ್ಷ ರೂ. ಎಂದಿಟ್ಟುಕೊಂಡರೂ ಹೀಗೆ ಶ್ರೀಮಂತರಿಂದ ಬಡವರಿಗೆ ವರ್ಗಾವಣೆಯಾದ ಸಂಪನ್ಮೂಲದ ಮೊತ್ತ 13000 ಕೋಟಿ ರೂಪಾಯಿಗಳಾಗುತ್ತದೆ. ಹೀಗೆ ಬಡವರಿಗೆ ಹಂಚಿದ ಜಮೀನನ್ನು ಮತ್ತೆ ಕಿತ್ತುಕೊಳ್ಳಬಯಸುವವರು ಅಂದರೆ ಭೂಮಾಲಕರು ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಪ್ರತಿ ಚುನಾವಣೆಯನ್ನು ಸಿಪಿಐ(ಎಂ)ನ್ನು ಸೋಲಿಸಬಯಸುವ ಪಕ್ಷಗಳೊಂದಿಗೆ ಒಟ್ಟುಗೂಡುತ್ತಾರೆ. ಇದರಿಂದಾಗಿ ಎಡರಂಗ ಸರಕಾರದ ಆಳ್ವಿಕೆಯಲ್ಲಿ ತಮ್ಮ ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ಪ್ರಯೋಜನ ಪಡೆದ ಬಡವರು ಒಂದೆಡೆ ಹಾಗೂ ಇನ್ನೊಂದೆಡೆ ಕ್ರೂರ ಶೋಷಕರ ಕೃಷಿ ವ್ಯವಸ್ಥೆಯನ್ನು ಮತ್ತೆ ಹೇರಬಯಸುವ ಶ್ರೀಮಂತರ ನಡುವೆ ಧ್ರುವೀಕರಣ ನಡೆದು, ಬಹುಪಾಲು ಗ್ರಾಮೀಣ ಮತದಾರರು ಸತತವಾಗಿ ಸಿಪಿಐ(ಎಂ)ನಲ್ಲಿ ವಿಶ್ವಾಸವನ್ನು ಪ್ರದರ್ಶಿಸುತ್ತಿದ್ದಾರೆ.

ಹೀಗೆ ಪಶ್ಚಿಮ ಬಂಗಾಳದಲ್ಲಿ ಅಧಿಕಾರಸ್ಥ - ವಿರೋಧಿ ಅಂಶ ಕೆಲಸ ಮಾಡದಿರಲು ಕಾರಣವೆಂದರೆ ಆಳುವ ಎಡರಂಗ ಜನಗಳ ಅಗತ್ಯಗಳನ್ನು, ಆತಂಕಗಳನ್ನು ಸದಾ ಕೈಗೆತ್ತಿಕೊಳ್ಳುತ್ತದೆಯಷ್ಟೆ ಅಲ್ಲ, ಪಟ್ಟಭದ್ರ ಹಿತಾಸಕ್ತಿಗಳ ಪ್ರತಿಧಾಳಿಗಳಿಂದ ಸತತವಾಗಿ ಅವರನ್ನು ರಕ್ಷಿಸುತ್ತದೆ. ಆದ್ದರಿಂದ ಅಂತಿಮವಾಗಿ ಇದು ಮ್ಯಾನೇಜ್‌ಮೆಂಟ್‌ನ ಪ್ರಶ್ನೆಯಲ್ಲ, ನೇರ ರಾಜಕಾರಣದ ಪ್ರಶ್ನೆ. ಆ ಸರಕಾರ ಯಾರ ಕಡೆಗಿದೆ? ಜನಸಮೂಹಗಳ ಕಡೆಯೋ ಅಥವಾ ಪಟ್ಟಭದ್ರ ಹಿತಾಸಕ್ತಿಗಳ ಕಡೆಯೋ ಎಂಬುದೇ ಪ್ರಶ್ನೆ.

ಕಾಂಗ್ರೆಸ್ ಆರ್ಥಿಕ ನೀತಿ ಜಾತಿ, ಕೋಮುವಾದದಲ್ಲೇ ಸ್ಪರ್ಧೆಗಿಳಿದಿದೆ. ಇದು ಕೂಡಾ ಮತ್ತೆ ಈ ಎರಡು ಪ್ರತಿಸ್ಪರ್ಧಿಗಳ ನಡುವಿನ ವ್ಯತ್ಯಾಸವನ್ನು ಮುಸುಕುಗೊಳಿಸಿದೆ. ಹಿಂದಿನಂತೆಯೇ ಕಾವಿಗೆ ತೆಳುಕಾವಿ ಸಮಬಲವಾಗಲಿಲ್ಲ. ಆದರೆ ಈ ಸತ್ಯವನ್ನು ಮರೆಮಾಚುವ ಪ್ರಯತ್ನ ನಡೆದಿದೆ. ಹಿಂದುತ್ವ ಈ ಚುನಾವಣೆಗಳಲ್ಲಿ ಒಂದು ಪ್ರಶ್ನೆಯಾಗಿರಲಿಲ್ಲ ಎಂದು ಹೇಳಲಾಗುತ್ತಿದೆ. ಜನ ಅಭಿವೃದ್ಧಿ ಮತ್ತು ಆಡಳಿತದ ಪ್ರಶ್ನೆಗಳ ಮೇಲೆ ಮತ ನೀಡಿದರಂತೆ. ಬುಡಕಟ್ಟು ಪ್ರದೇಶಗಳಲ್ಲಿ ಕೋಮುವಾದಿ ಧ್ರುವೀಕರಣವನ್ನು ತೀವ್ರಗೊಳಿಸಲು ಆರ್‌ಎಸ್‌ಎಸ್ ಸತತವಾಗಿ ನಡೆಸಿದ ಪ್ರಯತ್ನಗಳ ಫಲ ಬಿಜೆಪಿಗೆ ದೊರೆತಿದೆ ಎಂಬುದನ್ನು ಮರೆ ಮಾಚುವ ಪ್ರಯತ್ನ ಮತ್ತೆ ನಡೆದಿದೆ. 'ಸಾಮಾಜಿಕ ಇಂಜಿನಿಯರಿಂಗ್' ಎಂಬ 'ಗೌರವಾರ್ಹ' ಘೋಷಣೆಯ ಮರೆಯಲ್ಲಿ ಆರ್‌ಎಸ್‌ಎಸ್/ಬಿಜೆಪಿ ನಡೆಸಿದ ತನ್ನ ಜಾತಿರಾಜಕಾರಣವನ್ನು ಮುಚ್ಚಿಹಾಕಲು ಪ್ರಯತ್ನಿಸಲಾಗುತ್ತಿದೆ. ಇಷ್ಟೇ ಅಲ್ಲ, ಬಿಜೆಪಿ ಹಿಂದೆ ಯಾವ ಭಾರತೀಯ ಚುನಾವಣೆಗಳಲ್ಲೂ ಕಾಣದಷ್ಟು ಹಣಬಲವನ್ನು ಪ್ರದರ್ಶಿಸಿದೆ. ಸಹಜವಾಗಿಯೇ ಇದು ಭಾರತೀಯ ಪ್ರಜಾಪ್ರಭುತ್ವದ ಮಟ್ಟಿಗೆ, ಅದೂ ಸಾರ್ವತ್ರಿಕ ಚುನಾವಣೆಗಳು ಸದ್ಯವೇ ನಡೆಯಬೇಕಾಗಿರುವ ಸಂದರ್ಭದಲ್ಲಿ ಉತ್ತಮ ಲಕ್ಷಣವೇನೂ ಅಲ್ಲ.

**ಗೋಸುಂಬೆತನದ ಪ್ರದರ್ಶನ**

ಡಿಸೆಂಬರ್ 16 ರಂದು ಸಂಸತ್ತಿನಲ್ಲಿ ರಾಜಕೀಯ ನೈತಿಕತೆಯ ಬಗ್ಗೆ ವಾಜಪೇಯಿಯವರ ಆವೇಶಭರಿತ ಮಾತುಗಳು ಇಂತಹ ಎಲ್ಲಾ ಪ್ರಯತ್ನಗಳಿಗೆ ಮುಕುಟವಿಟ್ಟಂತಿತ್ತು. ಜೋಗಿ ಮತ್ತು ಜುದೇವ್ ಪ್ರಕರಣಗಳ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸುತ್ತಾ ಈ ದೇಶದಲ್ಲಿ ಏನಾಗುತ್ತದೆ, ಯಾವ ದಿಕ್ಕಿನಲ್ಲಿ ನಾವು ಸಾಗಿದ್ದೇವೆ" ಎಂದು ಅವರು ಮರುಗಿದರು. ಇದು ಗೋಸುಂಬೆತನದ ಪರಮಾವಧಿ. ಅವರ ಅಧೀನವಿರುವ ಪ್ರಧಾನ ಮಂತ್ರಿಗಳ ಕಚೇರಿ (pmo) RH ಪಾಸಿಟಿವ್ ಅಂದರೆ **ರಿಲಯನ್ಸ್** ಮತ್ತು ಹಿಂದು ಜನಗಳಿಗೆ ಸದಾ ಸ್ಪಂದಿಸುವ ಕಚೇರಿ ಎಂದು ಒಬ್ಬ ಆರ್‌ಎಸ್‌ಎಸ್ ಸಹಯೋಗಿ ಪತ್ರಕರ್ತರೇ ವರ್ಣಿಸಿದ್ದಾರಲ್ಲ, ಇಂತಹ ಸನ್ನಿವೇಶದಲ್ಲಿ "ಎಂದಿನವರೆಗೆ ದೇಶ ಚುನಾವಣೆಯಲ್ಲಿ ಹೋರಾಡಲು ಬಂಡವಾಳಶಾಹಿಗಳನ್ನು ಅವಲಂಬಿಸಬೇಕಾಗಿದೆ' ಎಂಬ ವಾಜಪೇಯಿಯವರ ಗೋಳಾಟಕ್ಕೆ ಏನರ್ಥ?

ಈ ಗೋಸುಂಬೆತನ ಒಂದು ಮಟ್ಟದಲ್ಲಿ ಪ್ರಧಾನಮಂತ್ರಿಗಳು ಪ್ರದರ್ಶಿಸಿದ 'ನೈತಿಕ ಔನ್ನತ್ಯ'ದಲ್ಲಿ ವ್ಯಕ್ತಗೊಂಡರೆ, ಇನ್ನೊಂದು ಮಟ್ಟದಲ್ಲಿ ಜೋಗಿ ಮತ್ತು ಜುದೇವ್‌ರ ಈ ಎರಡು ಪ್ರಕರಣಗಳು 'ಸಂಪೂರ್ಣ ಭಿನ್ನ' ಎಂದು ಪ್ರಧಾನ ಮಂತ್ರಿಗಳು ಹೇಳುವಾಗ ಈ ಗೊಸುಂಬೆತನ ವ್ಯಕ್ತಗೊಳ್ಳುತ್ತದೆ. ನೋಟುಗಳ ಕಂತೆಯನ್ನು ಯಾವುದೋ ಸರಕಾರಿ ಕೆಲಸ ವಹಿಸಿಕೊಡಲು ತಗೊಳ್ಳುತ್ತಿರುವುದು ಕ್ಯಾಮರಾದಲ್ಲಿ ಕಾಣಿಸಿದರೂ ಆ ವ್ಯಕ್ತಿಯ ಅಪರಾಧ ಈ ಪ್ರಧಾನ ಮಂತ್ರಿಗಳಿಗೆ ಸ್ಪಷ್ಟವಿಲ್ಲ. ಈ ಹಿಂದೆ ತೆಹಲ್ಕಾ ಟೇಪ್‌ಗಳಲ್ಲೂ ಅವರಿಗೆ ಆಕ್ಷೇಪಾರ್ಹವಾದುದೇನೂ ಕಂಡಿರಲಿಲ್ಲ. ಇದರಿಂದ ಕುಖ್ಯಾತಿಗಳಿಂದ ರಕ್ಷಣಾ ಮಂತ್ರಿಯನ್ನು ಮಂತ್ರಿಮಂಡಳಕ್ಕೆ ವಾಪಾಸು ತಂದು ಈ ಹಗರಣಗಳನ್ನು ಅವರು ಬಹಿರಂಗವಾಗಿಯೇ ಬದಿಗೆ ತಳ್ಳಿದ್ದಾರೆ. ಅವರ ಗೋಸುಂಬೆತನದ ವಾರ್ಷಿಕ ಕಸರತ್ತಿನಲ್ಲಿ ರಾಜಧರ್ಮ ಅಥವಾ ರಾಜಕೀಯ ನೈತಿಕತೆ ಅವರ ಈ ಬಾರಿಯ 2004 ರ ವಸ್ತುವಾಗಬಹುದು. ಆತನ ನಾಯಕತ್ವದಲ್ಲಿ ಅಧರ್ಮ ಮತ್ತು ಅನೀತಿಯೇ ಮೆರೆದರೇನಂತೆ!

**ತ್ರಿಮೂರ್ತಿ- ತ್ರಿಶೂಲಗಳಿಗೂ ಬೇಕು**

ಈ ರೀತಿ ವಾಸ್ತವತೆಯನ್ನು ಮಟ್ಟಗೊಳಿಸುವ ಕೆಲಸ ಆಳುವ ವರ್ಗಗಳಿಗೆ, ಪಟ್ಟಭದ್ರ ಹಿಸಾಸಕ್ತಿಗಳಿಗೆ ಅತ್ಯಂತ ಅಗತ್ಯವಾದದ್ದು. ಇದರ ಹಿಂದಿರುವ ಗುರಿ ಜನಗಳಿಂದ ಸತ್ಯವನ್ನು ಮುಚ್ಚಿಡುವುದಷ್ಟೇ ಅಲ್ಲ, ಗೋಸುಂಬೆತನ ಮತ್ತು ಅನೀತಿಗಳನ್ನು ಆಳುವ ರಾಜಕಾರಣದ ಅಡಿಗಲ್ಲುಗಳಾಗಿ ಸ್ಥಾಪಿಸುವುದು ಕೂಡಾ ಆಗಿದೆ. ಈ ಮೂಲಕ ಜನಗಳ ಬದುಕಿನ ಪ್ರಮುಖ ಪ್ರಶ್ನೆಗಳನ್ನು ಹಿನ್ನೆಲೆಗೆ ತಳ್ಳಬಾರದು. ಇದು ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೂ ಬೇಕು, ಕೋಮುವಾದಕ್ಕೂ ಬೇಕು. ಜನಗಳ ಗಮನವನ್ನು ಅವರ ಮೂಲಭೂತ ಆತಂಕಗಳಿಂದ ಬೇರೆಡೆಗೆ ಸೆಳೆದಷ್ಟು ಈ ಶಕ್ತಿಗಳಿಗೆ ತಮ್ಮ ಅಜೆಂಡಾಗಳನ್ನು ಈಡೇರಿಸಿಕೊಳ್ಳಲು ಹೆಚ್ಚಿನ ಅವಕಾಶ ದೊರೆಯುತ್ತದೆ. ಸಾಮ್ರಾಜ್ಯಶಾಹಿ ತ್ರಿಮೂರ್ತಿಗಳು, (ಐಎಂಎಫ್-ವಿಶ್ವಬ್ಯಾಂಕ್- ಡಬ್ಲ್ಯುಟಿಒ) ಮತ್ತು ತ್ರಿಶೂಲಗಳು ಒಟ್ಟಿಗೆ ತಾಳ ಹಾಕಿ ಭ್ರಮೆಗಳನ್ನು ಸೃಷ್ಟಿಸಿ ಜನರ ಗಮನವನ್ನು ಹೇಗೆ ಬೇರೆಡೆಗೆ ಸೆಳೆಯುತ್ತವೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ.

ಆದ್ದರಿಂದ ಜನಗಳ ಮತ್ತು ದೇಶದ ಮುಂದಿರುವ ಮೂಲ ಪ್ರಶ್ನೆಗಳನ್ನು ಮತ್ತೆ ಜನರ ಮುಂದೆ ತರಲು **ಈ ಅಳಲೇಕಾಯಿ ಪಂಡಿತರು ಹೆಣೆಯುತ್ತಿರುವ ಭ್ರಮೆಗಳನ್ನು, ಸುಳ್ಳಿನ ಜಾಲಗಳನ್ನು ಬಯಲಿಗೆಳೆಯುವುದು ಅಗತ್ಯ. ಜನಗಳನ್ನು ಅಣಿನೆರೆಸಿ, ಪ್ರತಿಭಟನಾ ಕಾರ್ಯಾಚರಣೆಗಳ ಮೂಲಕ ಭಾರತೀಯ ಜನಮಾನಸವನ್ನು ಕಲಕುತ್ತಿರುವ, ಅವರ ಬದುಕನ್ನು ಹದಗೆಡಿಸುತ್ತಿರುವ ಪ್ರಶ್ನೆಗಳತ್ತ ಮತ್ತೆ ಗಮನ ಕೇಂದ್ರೀಕೃತವಾಗುವಂತೆ ಮಾಡಬೇಕು.** ಫೆಬ್ರುವರಿ 1,2004 ರಿಂದ 15 ದಿನಗಳ ಕಾಲ ರಾಷ್ಟ್ರೀಯ ಪ್ರಚಾರ - ಪ್ರಕ್ಷೋಭೆ ನಡೆಸಬೇಕು ಎಂಬ ಸಿಪಿಐ(ಎಂ) ಪೊಲಿಟ್ ಬ್ಯೂರೋದ ನಿರ್ಧಾರ ಈ ತುರ್ತು ಅಗತ್ಯವನ್ನು ಈಡೇರಿಸುವ ಉದ್ದೇಶದಿಂದಲೇ ಬಂದಿದೆ.

# ರಾಷ್ಟ್ರಕವಿ ಜನ್ಮ ಶತಾಬ್ದಿ



**ಸಾಹಿತಿ ಕುವೆಂಪುರವರ ಧೀಮಂತ ಚಿಂತನೆ, ಕೊಡುಗೆಗಳನ್ನು ಮರೆಮಾಚಲು ಅವರ ವ್ಯಕ್ತಿತ್ವವನ್ನಷ್ಟೇ ಬಿಂಬಿಸುವ ನಾಜೂಕಿನ ಯತ್ನಗಳ ಬಗ್ಗೆ ಎಚ್ಚರವಿರಬೇಕು. ಅವರ ಪ್ರಖರ ವೈಚಾರಿಕತೆ, ಸಾಹಿತ್ಯದ ಸತ್ಯ ಜನರಿಗೆ ತಲುಪಬೇಕು.**

ಜಾತಿ, ಧರ್ಮ, ಮತೀಯತೆ ಮೂಢನಂಬಿಕೆಗಳು, ಅಸಮಾನ ವ್ಯವಸ್ಥೆಗಳ ವಿರುದ್ಧ ಚಿಂತನೆ ನಡೆಸುವ, ಹೋರಾಟಗಳಲ್ಲಿರುವ ಚೈತನ್ಯಗಳ ಚೇತನ ಕುವೆಂಪು.

ಮಡಿವಂತಿಕೆಯ ಪರಿಧಿಯನು ದಾಟಿ ಮಾನವೀಯತೆಯ ನೆಲೆಯೊಳಗೆ ನಿಂತು ವಿಶ್ವಮಾನವರಾಗೋಣವೆಂಬ ಹೆಬ್ಬಯಕೆಯ ಸಂದೇಶ ಹೊತ್ತವರು 'ಕಾಡಿನ ಕವಿ ಕುವೆಂಪು'.

ರಷ್ಯಾ, ಚೀನಾ ಮುಂತಾದವು ಬದಲಾವಣೆಗಾಗಿ ಮೈಕೊಡವಿ ನಿಂತಿವೆ ಏಳು ಭಾರತವೇ ಏಳು ಆ ಸರತಿಯಲಿ ಸಾಗೆಂದು ರಾಷ್ಟ್ರವ ಎಚ್ಚರಿಸಿದ ರಾಷ್ಟ್ರಕವಿ ಕುವೆಂಪುರವರಿಗೀಗ ಜನ್ಮ ಶತಾಬ್ದಿ.

ನಾಡಿನಾದ್ಯಂತ ವೈವಿಧ್ಯಮಯ ಕಾರ್ಯಕ್ರಮಗಳು ಜ್ಞಾನಪೀಠ ಪುರಸ್ಕೃತ ಗಣ್ಯ ಸಾಹಿತಿಯ ನೆನಪಿನಲ್ಲಿ ಮೂಡಿಬರುತ್ತಿವೆ.

ಈ ಸಂದರ್ಭದಲ್ಲಿ ದುಡಿಯುವ ಮಿತ್ರ ಐಕ್ಯರಂಗವು ಕುವೆಂಪುರವರ ವೈಚಾರಿಕ ಸಂಘರ್ಷಗಳನ್ನು ನೆನೆಯುವ ಮೂಲಕ ಹಾಗೂ ಅವುಗಳನ್ನು ಜನತೆಯ ನಡುವೆ ಪಸರಿಸುವ ಯೋಜನೆಯ ಮೂಲಕ ಹೃದಯಪೂರ್ವಕವಾಗಿ ಸ್ಮರಿಸುತ್ತದೆ.

ನಾಡಿನ ಹೆಮ್ಮೆಯ ಸಾಹಿತಿಯ ಕುರಿತು ಅವರದು ಆಕರ್ಷಕ ವ್ಯಕ್ತಿತ್ವ, ಶಿಸ್ತಿನ ಜೀವನ, ಉನ್ನತ ಸಾಧನೆ, ಮೌಲಿಕ ಬದುಕು, ಗಗನದೆತ್ತರಕ್ಕೆ ಬೆಳೆದು ನಿಂತ ಹೆಮ್ಮರ, ಮುಂತಾಗಿ ಬಣ್ಣಿಸುವುದಕ್ಕಿಂತ ಆಡಂಬರದ ಮಾತುಗಳ ಮೂಲಕ ಅವರನ್ನು ಗೌರವಿಸುವುದಕ್ಕಿಂತ ಮೇಲಾಗಿ ಅವರು ಪ್ರತಿಪಾದಿಸಿದ ಮಾನವೀಯ ಮೌಲ್ಯಗಳು ಹಾಗೂ ವೈಚಾರಿಕ ಚಿಂತನೆಗಳನ್ನು ಸಮಾಜಕ್ಕೆ ಅಳವಡಿಸುವ ತುರ್ತು ಕೆಲಸ ಮಾಡುವುದೇ ಅವರಿಗೆ ಯಾರೇ ಆದರೂ ನಿಜವಾಗಿಯೂ ಸೂಚಿಸುವ ಗೌರವ.

ಭಾಷೆಯನ್ನು ಬೆಳೆಸುವ ಬಗೆಗಿನ ಅವರ ಕಾಳಜಿ, ಪುರೋಹಿತ ಶಾಹಿಯನ್ನು ಅಳಿಸುವ ಸಲುವಾಗಿನ ಅವರ ಮಿಡಿತ, ರಷ್ಯಾ ಹಾಗೂ ಚೀನಾಗಳನ್ನು ಮಾದರಿಯಾಗಿರಿಸಿಕೊಂಡ ಅವರ ಪುರೋಗಾಮಿ ಆಲೋಚನೆಗಳು, ಶೂದ್ರನ ತಪಸ್ಸನ್ನು ಎತ್ತಿಹಿಡಿದು ರಾಮನ ಮೂಲಕ ಅದಕ್ಕೆ ಮನ್ನಣೆ ದೊರಕಿಸಿಕೊಟ್ಟ ಸಂಘರ್ಷಮಯ ಚಿಂತನೆ (ಶೂದ್ರತಪಸ್ವಿ) ನಿರಾಡಂಬರನಾದ ಶಿವನನ್ನು ಜಲಗಾರನೆಂದು ನಿರೂಪಿಸಿ ಶ್ರಮಸಂಸ್ಕೃತಿಯನ್ನು ಉನ್ನತವೆಂದು ಪ್ರತಿಪಾದಿಸಿದ ಆಲೋಚನೆಯ ಬಗೆ(ಜಲಗಾರ) ಎಂದೆಂದಿಗೂ ಪ್ರಸ್ತುತ. ಇಂದಿನ ಸಾಮಾಜಿಕ ಸನ್ನಿವೇಶಕ್ಕಂತು ಹೆಚ್ಚು ಪ್ರಸ್ತುತ.

ಜನಮುಖಿಯಾದ ಅವರ ಸಾಹಿತ್ಯಿಕ ಕೊಡುಗೆಗಳನ್ನು 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ' ಮುಂತಾದ ಕೃತಿಗಳನ್ನು ಸರಳ ವಿಧಾನಗಳ ಮೂಲಕ ಜನರೆಡೆಗೆ ಕೊಂಡೊಯ್ದರಂತು ಅದೇ ಸರ್ಕಾರ ಅವರಿಗೆ ಸಲ್ಲಿಸುವ ನಿಜ ಗೌರವ. ಅವುಗಳನ್ನು ಸ್ವೀಕರಿಸಿ ವೈವಿಧ್ಯಮಯ ಜನಸಂಸ್ಕೃತಿಯು ಕುರಿತು ಜೀವನ್ಮುಖಿ ಆಲೋಚನೆಗಳ ಕುರಿತು ಮನನ ಮಾಡಿಕೊಳ್ಳುವುದು ಹಾಗೂ ಅಪಾರ ಜನಸಮುದಾಯಕ್ಕೆ ಅದನ್ನು ಅರ್ಥ ಮಾಡಿಸುವುದು ಅವರ ಅಭಿಮಾನಿಗಳು ಹಾಗೂ ಸಾಹಿತ್ಯಾಸಕ್ತರು ಅವರಿಗೆ ಸಲ್ಲಿಸುವ ಮತ್ತೂ ಗೌರವ.

ಅಪ್ರಸ್ತುತ ಸಂಗತಿಗಳು ಹಾಗೂ ಪುರೋಹಿತಶಾಹಿ ಮೌಲ್ಯಗಳು ಪ್ರಾಬಲ್ಯ ಪಡೆಯುತ್ತಿರುವ ಸಂದರ್ಭದಲ್ಲಿ ಕುವೆಂಪುರವರ ವಿಭಿನ್ನ ಹಾಗೂ ನವೀನ ರೀತಿಯ ಚಿಂತನೆಗಳನ್ನು ಮರೆಮಾಚುವ ಸಲುವಾಗಿಯೇ ಅವರ ವ್ಯಕ್ತಿತ್ವವನ್ನು ಮಾತ್ರವೇ ಬಿಂಬಿಸುವ ನಾಜೂಕಿನ ಪ್ರಯತ್ನಗಳು ಯಾವುದೇ ಕಾರಣಕ್ಕೂ ಫಲಿಸಬಾರದು.

ಇಡೀ ಸಮಾಜವನ್ನು ಕೋಮುವಾದೀಕರಣಗೊಳಿಸುವ ಯೋಜನಾಬದ್ಧ ಕೆಲಸ ಒಳಗೊಳಗು ಹಾಗೂ ಹೊರಗು ನಡೆಯುತ್ತಿರುವಾಗ 'ವಿಶ್ವಪಥ ಮನುಜಮತ' ಎಂಬ ಸಂದೇಶ ನೀಡಿದ ಕುವೆಂಪುರವರನ್ನು ಸಮಗ್ರವಾಗಿ ಸ್ವೀಕರಿಸಲು ಈ ಶಕ್ತಿಗಳು ಅವಕಾಶ ನೀಡುವುದಿಲ್ಲ. ಆದರೆ ಅಂತಹ ಹುನ್ನಾರಗಳನ್ನು ಪ್ರಜ್ಞಾಪೂರ್ವಕವಾಗಿ ಹತ್ತಿಕ್ಕದೆ ಕುವೆಂಪುರವರಂಥ ಗಣ್ಯರಿಗೆ ಗೌರವಸಲ್ಲಿಸುವುದೂ ಸಾಧ್ಯವಿಲ್ಲ. ಇಂತಹ ಸಂಘರ್ಷಗಳು ಹಾಗೂ ಸವಾಲುಗಳ ಮಧ್ಯೆಯೇ ಈಜಿದವರು ಕುವೆಂಪುರವರು ಎನ್ನುವ ಸತ್ಯವನ್ನು ಮರೆಮಾಚುವಂತಿಲ್ಲ.

ವಿಶಾಲ ಮನಸ್ಸಿನ ವಿಶಾಲ ಚಿಂತನೆಯ ಶತಮಾನದ ಕವಿ ಕುವೆಂಪುರವರ ಯೋಚನಾಲಹರಿಗೊಂದು ಉದಾಹರಣೆ ಇಲ್ಲಿದೆ ನೋಡಿ. ಇದೇ ಜಾಡಿನ ಆಲೋಚನೆಗೆ ನಾವು ತೆರೆದುಕೊಳ್ಳಬಾರದೇಕೆ?

ಕರಿಯರದೋ ಬಿಳಿಯರದೋ?
ಯಾರದಾದರೆ ಏನು?
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ!
ವಿಜಯನಗರವೋ? ಮೊಗಲರಾಳ್ವಿಕೆಯೋ?
ಇಂಗ್ಲಿಷರೋ?
ಎಲ್ಲರೂ ಜಿಗಣೆಗಳೇ ನನ್ನ ನೆತ್ತರಿಗೆ
ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
ನಮ್ಮವರೇ ಹದ ಹಾಕಿ ತಿವಿದರದು ಹೂವೆ?

○ **ಪ್ರಭಾ.ಎಸ್**

# ಚಿಂತನ ರೆಪರ್ಟರಿ : ವಿಶಿಷ್ಟ ನಾಟಕ ಶಿಬಿರ

'ಚಿಂತನ' ಪಾಠ ನಾಟಕ ರೆಪರ್ಟರಿಯ ತಂಡದವರಿಂದ ಹೊನ್ನಾವರ ಎಸ್.ಡಿ.ಎಂ. ಕಾಲೇಜಿನ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಇತ್ತೀಚೆಗೆ ಹತ್ತು ದಿನಗಳ ಯಶಸ್ವಿ ರಂಗ ತರಬೇತಿ ಶಿಬಿರವೊಂದು ನಡೆಯಿತು. ಸುಮಾರು 25-30 ವಿದ್ಯಾರ್ಥಿಗಳಿಗೆ ನಡೆದ ಈ ಶಿಬಿರ ಸಾಂಪ್ರದಾಯಿಕವಾಗಿ ಒಂದು ನಾಟಕವನ್ನು ಆಡಿಸುವ ಬದಲು **ರಂಗಭೂಮಿಯ ಪರಂಪರೆಯನ್ನು ಹೇಳುವ ಒಂದು ವಿಶಿಷ್ಟ ಪ್ರಯೋಗ ಇದಾಗಿತ್ತು. ರಂಗ ಶಿಬಿರವನ್ನು ಹೇಗೆ ನಡೆಸಬಹುದೆನ್ನುವುದಕ್ಕೆ ಇದೊಂದು ಮಾದರಿಯಾಗಿತ್ತು.**

ರಂಗತರಬೇತಿಯನ್ನು ನಿರ್ದಿಷ್ಟ ನಾಟಕವೊಂದರ ಪ್ರದರ್ಶನಕ್ಕೆ ನೀಡುವ ತರಬೇತಿಯಿಂದ ಬೇರೆಯೇ ಆಗಿ ಪರಿಗಣಿಸಬೇಕಾಗುತ್ತದೆ. ಏಕೆಂದರೆ ನಾಟಕವೊಂದನ್ನು ಪ್ರದರ್ಶಿಸುವ ಬಗೆಗಿನ ತರಬೇತಿಯ ಉದ್ದೇಶ ಮತ್ತು ಅದರ ವಿಸ್ತಾರ ಬೇರೆಯೇ ಇರುತ್ತದೆ. ಸ್ಥೂಲವಾಗಿ ಇದನ್ನು ಎರಡು ರೀತಿಯಲ್ಲಿ ಸಂಯೋಜಿಸಬಹುದು.

1. ಪ್ರದರ್ಶನಗಳ ಗುರಿಯನ್ನು ಆಧಾರವಾಗಿಟ್ಟುಕೊಂಡು ರಂಗವಿಷಯಗಳ ಬಗ್ಗೆ ತರಬೇತಿ. 2. ರಂಗ ವಿಷಯಗಳ ಅಧ್ಯಯನ ಮತ್ತು ಸಾಧ್ಯತೆಗಳನ್ನು ಮಾತ್ರ ಗುರಿಯಾಗಿಟ್ಟುಕೊಂಡು ತರಬೇತಿ. ಈ ಕಾರಣಕ್ಕಾಗಿ ತರಬೇತಿ ಅತ್ಯಂತ ಮಹತ್ವ ಪಡೆದಿತ್ತು. 25-30 ಶಿಬಿರಾರ್ಥಿಗಳು ಹತ್ತು ದಿನಗಳ ಕಾಲ ಬೆಳಿಗ್ಗೆ 9 ಗಂಟೆಯಿಂದ ರಾತ್ರಿಯವರೆಗೆ ವಿವಿಧ ರೀತಿಯಲ್ಲಿ ತೊಡಗಿಕೊಂಡರು. ಅಭಿನಯ, ನಾಟಕ ವಿಮರ್ಶೆ, ರಂಗಪರಿಕರಣ ನಿರ್ಮಾಣ, ಬೆಳಕು ಸಂಯೋಜನೆ, ವಸ್ತ್ರ ವಿನ್ಯಾಸ, ಪೋಸ್ಟರ್ ರಚನೆ, ಬಣ್ಣಗಾರಿಕೆ ಇತ್ಯಾದಿ ಅಂಶಗಳ ಬಗ್ಗೆ ತರಬೇತಿ ಕೊಡಲಾಯಿತು. ಇಷ್ಟೇ ಆಗಿದ್ದರೆ ಈ ಶಿಬಿರ ಹತ್ತರೊಂದಿಗೆ ಹನ್ನೊಂದಾಗಬಹುದಿತ್ತು.

ಈ ತರಬೇತಿಯ ಕೊನೆಗೆ ಅತ್ಯಂತ ಯಶಸ್ವಿಯಾಗಿ 4 ನಾಟಕದ ತುಣುಕುಗಳನ್ನು ಪ್ರದರ್ಶಿಸಲಾಯಿತು. ಈಡಿಪಸ್ ನಾಟಕದ ಒಂದು ದೃಶ್ಯ, ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನದ ಒಂದು ದೃಶ್ಯ, ಬಲ್ಗೇರಿಯನ್ ಕತೆಯಾದ ಮೂರು ಮೆಟ್ಟಿಲ ಕತೆ'ಯ ಅಭಿನಯ, 'ಇಷ್ಟುಬೇಗ ಮದುವೆಯಾಕವ್ವ' ಹಾಡಿನ ರೂಪಕಗಳ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಇವೆಲ್ಲವೂ ರಂಗಭೂಮಿಯ ವಿವಿಧ ಪ್ರಕಾರಗಳಿಗೆ, ವಿವಿಧ ಶಿಸ್ತುಗಳಿಗೆ ಸಂಬಂಧಿಸಿದ್ದು, ಪ್ರತಿ ಪ್ರಕಾರಗಳ ಸ್ವರೂಪ, ವಿಶಿಷ್ಟತೆಯ ಬಗ್ಗೆ ಸೈದ್ಧಾಂತಿಕವಾದ ವಿವರದ ಜೊತೆಗೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಒಂದೊಂದು ತುಣುಕಿನ ತರಬೇತಿ ಕೊಡಲಾಯಿತು. ರಂಗಪರಿಕರಗಳ ಬಳಕೆ, ವಸ್ತ್ರಾಲಂಕಾರ ಮತ್ತು ನಾಟಕದ ತುಂಬ ಬಳಸಿದ ವಿವಿಧ ರಂಗ ಪ್ರತಿಮೆಗಳು ನಿರ್ದೇಶಕರ ಸೃಜನಶೀಲತೆಗೆ ಹಿಡಿದ ಕನ್ನಡಿಯಾಗಿತ್ತು.

ಎಲ್ಲರ ಗಮನ ಸೆಳೆದದ್ದು 'ಇಷ್ಟು ಬೇಗ ಮದುವೆಯಾಕವ್ವ' ಹಾಡನ್ನು ಆಧರಿಸಿದ ಬೀದಿನಾಟಕ ರೂಪ 'ಬಂಧನ'. ಈ ನಾಟದಲ್ಲಿ ಸಂಪ್ರದಾಯದ ಹೆಸರಿನಲ್ಲಿ ನಡೆಯುತ್ತಿರುವ ಹೆಣ್ಣಿನ ಶೋಷಣೆಯ ಮುಖಗಳನ್ನು, ಕ್ರೌರ್ಯದ ವಿವಿಧ ಸ್ವರೂಪಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿತ್ತು. ಶಾಲೆಗೆ ಹೋಗುತ್ತ, ಗೆಳತಿಯರೊಂದಿಗೆ ಆಡಿಕೊಂಡಿರಬೇಕಾದ ಪುಟ್ಟ ಹುಡುಗಿಯನ್ನು ಹಸೆಮಣೆಗೆ ಎಳೆದೊಯ್ಯುವ ಬಾಲ್ಯವಿವಾಹದ ದುರಂತವನ್ನು ಹಾಡು ಮತ್ತು ಅಭಿನಯ ಕಣ್ಣಿಗೆ ಕಟ್ಟುವಂತಿತ್ತು. ಮಂತ್ರವನ್ನು ಅಣಕಿಸುವ ರೀತಿಯ ಕೆಲವು ಮಾತುಗಳು, ಯಜ್ಞಕುಂಡದ ಪ್ರತಿಮೆಗಳು ಹೆಣ್ಣನ್ನು ಸಂಪ್ರದಾಯದ ಹೆಸರಿನಲ್ಲಿ ದಹಿಸುತ್ತಿರುವುದನ್ನು ಸಂಕೇತಿಸುತ್ತಿದ್ದವು. ಇಡೀ ನಾಟಕದಲ್ಲಿ ಅಲ್ಲಲ್ಲಿ ಬರುವ 'ಧರ್ಮೋ ರಕ್ಷತಿ ರಕ್ಷಿತಃ' ಎನ್ನುವ ಶ್ಲೋಕ ಪ್ರತಿಬಾರಿಯೂ ಹೊಸ ಅರ್ಥವನ್ನು ಸ್ಮರಿಸುವಂತಿತ್ತು. ಈ ಶ್ಲೋಕವನ್ನೇ ಬಂಡವಾಳವಾಗಿಸಿಕೊಂಡು ಹೆಣ್ಣಿನ ಸ್ವಾತಂತ್ರ್ಯ ಕಬಳಿಸುತ್ತಿರುವ ಒಂದು ವರ್ಗದ ಸಂಚನ್ನು ಇದು ಕಲಾತ್ಮಕವಾಗಿ ಹೇಳುವಲ್ಲಿ ಯಶಸ್ವಿಯಾಗಿದೆ.

ಇನ್ನೊಂದು ಗಮನ ಸೆಳೆಯುವ ಪ್ರದರ್ಶನ ಬಲ್ಗೇರಿಯನ್ ಕತೆ 'ಮೂರು ಮೆಟ್ಟಿಲ ಕತೆ'ಯ ಕಥಾಭಿನಯವಾದ ಏಣಿ' ಬಡತನದ ಬಗ್ಗೆ ಮಾತನಾಡುವ ವ್ಯಕ್ತಿಯೊಬ್ಬನನ್ನು ಈ ವ್ಯವಸ್ಥೆ ವಿವಿಧ ಆಮಿಷ ಒಡ್ಡಿ ತನ್ನ ಕಬಂದ ಬಾಹುವಿನಲ್ಲಿ ಒಂದಾಗಿಸಿಕೊಳ್ಳುವ ದುರಂತ ಹೇಳುವ ಪ್ರಯತ್ನ ಇದು. ಜನರ ನರಳುವ ಧ್ವನಿ ಸಂಗೀತವಾಗಿ ಕೇಳುವ ಸ್ಥಿತಿ, ಜನರ ನರಳುವಿಕೆ, ನರ್ತನವಾಗಿ ಕೇಳುವ ಸ್ಥಿತಿ ತಲುಪಿದ ಇಂದಿನ ಆಳುವ ವರ್ಗದ ಮನಸ್ಥಿತಿಯನ್ನು ಈ ಕೃತಿ ವ್ಯಂಗ್ಯವಾಡುತ್ತದೆ. ಅಧಿಕಾರಕ್ಕಾಗಿ ಈ ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವವರು ಸಂಪೂರ್ಣ ದುಡಿಯುವ ಜನರ ವಿರೋಧಿಗಳಾಗುತ್ತಾರೆ. ವ್ಯವಸ್ಥೆಯನ್ನು ಪ್ರತಿಭಟಿಸಿ ಬದಲಾಯಿಸಲು ಮುಂದಾಗದ ವ್ಯಕ್ತಿ ತನ್ನ ಕಿವಿಯನ್ನು, ತನ್ನ ಕಣ್ಣನ್ನು, ಅಂತಿಮವಾಗಿ ತನ್ನ ಹೃದಯವನ್ನೇ ಒತ್ತೆ ಇಡುವ ಮೂಲಕ, ಪ್ರತಿಭಟನೆಯ ಎಲ್ಲಾ ಅಂಶಗಳನ್ನು ಕಳೆದುಕೊಂಡು ಶೋಷಣಾ ವ್ಯವಸ್ಥೆಯೇ ಆಗಿ ರೂಪುಗೊಳ್ಳುವ ದುರಂತ ಇಲ್ಲಿದೆ. ಮೂರನೇ ಮೆಟ್ಟಿಲೇರಿದಾಗ ಸಿಗುವ ಖುರ್ಚಿಗೆ ರಾಕ್ಷಕ ಮುಖವಾಡ, ತಲೆಗೆರಡು ಕೋಡು ಮೇಲೆ ಬಿಳಿ ತೊಪ್ಪಿಗೆ, ಕಪ್ಪು ಕನ್ನಡಕ ಮತ್ತು ಮೈತುಂಬಾ ಹೊದೆಸಿದ ಕೇಸರಿ ಶಾಲು ಇಂದಿನ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಧ್ವನಿಸುತ್ತಿತ್ತು. ಒಬ್ಬ ನಿರೂಪಕ ಕಥೆಯನ್ನು ಓದುತ್ತಿದ್ದಂತೆ ಹಿನ್ನೆಲೆಯಲ್ಲಿ ನಡೆಯುವ ದೃಶ್ಯಗಳ ಚಲನೆ, ಕಥಾಭಿನಯದಲ್ಲಿ ಗುಂಪನ್ನು ಅರ್ಥಗರ್ಭಿತವಾಗಿ ಬಳಸಿಕೊಳ್ಳುವ ಜಾಣ್ಮೆ ಎದ್ದು ಕಾಣುತ್ತಿತ್ತು.



"ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ" ಕನ್ನಡದ ಮೊದಲ ನಾಟಕ ಕೂಡ. ವಸ್ತ್ರ ವಿನ್ಯಾಸ ಮತ್ತು ರಂಗವಿನ್ಯಾಸ, ನಾಟಕದಲ್ಲಿ ಬಳಕೆಯಾದ ಭಾಷೆ, ಈಡಿಪಸ್ ನಾಟಕದಲ್ಲಿ ಬಳಸಿದ ಮುಖವಾಡ (ಮಾಸ್ಕ್) ನಿರ್ದಿಷ್ಟ ರಂಗ ಪರಂಪರೆಯನ್ನು ಪ್ರತಿನಿಧಿಸುವಂತಿತ್ತು.

ಈ ಹತ್ತು ದಿನದ ಶಿಬಿರವನ್ನು ಅಚ್ಚುಕಟ್ಟಾಗಿ ನಿರ್ದೇಶಿಸಿದವರು ಶ್ರೀಪಾದ ಭಟ್ಟ

ಈಗಾಗಲೇ ರಂಗಭೂಮಿಯಲ್ಲಿ ಯುವನಿರ್ದೇಶಕರಾಗಿ ಹೆಸರು ಮಾಡುತ್ತಿರುವ ಉತ್ತರಕನ್ನಡ ಜಿಲ್ಲೆಯ ಶ್ರೀಪಾದ ಭಟ್ಟ ರವರು ಅತ್ಯಂತ ಸಾಮಾಜಿಕ ಕಳಕಳಿ, ಬದ್ಧತೆಯಿಂದ ಶಿಬಿರದ ಯಶಸ್ಸಿಗೆ ಅಹೋರತ ಶ್ರಮಿಸಿದರು. ಇವರೊಂದಿಗೆ ಸಹಾಯಕರಾಗಿ ಆರ್.ಕೆ. ಶಿವಕುಮಾರ ಮತ್ತು ಸಂತೋಷ, ಗೋಪಾಲ ಹಳ್ಳೇರ, ಸುಬ್ರಹ್ಮಣ್ಯ ನಾಯ್ಕ, ಶ್ರೀನಿವಾಸ ಮೊದಲಾದವರು ದುಡಿದರು. ದಾಮೋದರ ನಾಯ್ಕ ರಂಗಪರಿಕರ, ವಿನ್ಯಾಸ ರೂಪಿಸಿದ್ದರು. ಇದಕ್ಕಾಗಿ ತಯಾರಿಸಿದ ಸಿನಾಪ್ಸಿಸ್, ವೇಳಾಪಟ್ಟಿ ಆಯ್ಕೆ ಮಾಡಿಕೊಂಡ ಸ್ಕ್ರಿಪ್ಟ್‌ಗಳೆಲ್ಲವೂ ಖಂಡಿತವಾಗಿಯೂ ಇದೊಂದು ಪ್ರಯೋಗವಾಗಿ ಮಾತ್ರ ಉಳಿಯದೆ ರಂಗತರಬೇತಿ ನಡೆಸುವವರಿಗೆ ಒಂದು ಮಾದರಿಯಾದ ಕೈಪಿಡಿಯಾಗಿತ್ತು. ಬೆಂಗಳೂರಿನಿಂದ ತೀರಾ ದೂರದ ತಾಲೂಕಿನಲ್ಲಿ ನಡೆದಿರುವುದರಿಂದ ಇದಕ್ಕೆ ಸಿಗಬೇಕಾದ ಪ್ರಚಾರ, ಪ್ರಶಂಸೆ ಸಿಗಲಿಲ್ಲ.

**- ನಿಸರ್ಗ**

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH